शतिकादित्वादुभयपदवृद्धिः । धनदं धनानां दातारं मदेनाहङ्कारेणा-स्पृष्टम् असम्बद्धं च कृष्णक्षितिपालम् एत्य प्राप्य मदस्य दानोदकस्या-हङ्कारस्येति च प्रतीयते मदो रेतस्यहङ्कारे 'मद्ये हर्षेभदानयो'रिति हेम-चन्द्रः । आश्रयेण धनदात्कुबेराद्धनदातुश्च इतरेण भिन्नेन अपकृष्टेन च 'इतरस्त्वन्यनीचयोरि'त्यमरः । सार्वभौमेन सार्वभौमसंज्ञकेन न त्ववयवशक्तिलभ्यसर्वभूमीश्वरत्वाद्याश्रयेण गजविशेषेण युक्तां द्यां स्वर्गं "जातोंऽशसो"रित्यमि आकार एकादेशः । 'सुरलोको द्यो दिवौ द्वे' इत्यमरः । जहास हसितवती । अत्र जहासेत्यनेन उत्तमभोगाधिकरणत्वं कृष्णराजपरिपालितभूमावप्यस्तीति प्रतीयते । स्वस्य तदवृत्त्युत्तमगुण-वत्त्वेऽपि तस्याः स्वावृत्त्युत्तमगुणवत्त्वे परिहासायोगात् तथा चोत्तम-भोगाधिकरणत्वेन स्वर्गसाम्यं प्राप्तायां भूमेः विमदधनदसार्वभौमवत्त्व-रूपस्य स्वर्गाद्विशेषस्य प्रतिपादनात् व्यतिरेकालङ्कारो व्यङ्ग्यः ।।33।।

वयमिति ।

> वयं सर्वे वासं क्वचन मिलिताश्चेद्वितनुम-
> स्तदाक्रामेद्दोषो न खलु बलिनां नः पदमरिः ।
> तदेकत्रस्थाने स्थितिमनुभवामेति सकला
> गुणा आसेदुस्त्वामवलशरणं कृष्णनृपते ।। 34 ।।

हे कृष्णनृपते सकला गुणाविवेकादयः कर्तारः वयं सर्वे मिलितास्सन्तः क्वचन स्थाने वासं वितनुमश्चेत्तदा नोऽस्माकमरिश्शत्रुर्दोषः मोहादिः बलिनां मिलित्वावस्थानप्रयुक्तबलवतां नः पदं स्थानं नाक्रामेन्नाश्रयेत्खलु क्रमः । परस्मैपदेष्विति दीर्घः, तत्तस्मात्कारणात् एकत्रस्थाने स्थिति-

मनुभवामेति निश्चित्येति शेषः । अबलानां बलरहितानां शरणं रक्षितारं त्वामासेदुः प्रापुः । अत्राबलशरणमिति विशेषणमेकत्रमेलनेनाप्यस्माभिर्दोषाभिभवशक्तेरलाभे बलवानाश्रयोऽस्माकं साहाय्यमाचरतीत्यभिप्रायवद्गुणकर्तृकाश्रयणयोग्यो न कृष्णराजेतर इत्यभिप्रायकमिति परिकरालङ्कारः । "अलङ्कारः परिकरस्साभिप्राये विशेषण" इति तल्लक्षणम्। श्रीकृष्णराजस्योक्तसकलगुणाश्रयत्वेन वस्तुना निर्दोषत्वं वस्तुव्यङ्ग्यम् ।। 34 ।।

दीने इति ।

दीने दयां स्वामशिषद्वसेति
क्रुधं निजां सागसि कृष्णराजः ।
क्षमाप्रियस्यास्य दयाक्षमाया-
स्सख्यात्क्रुधं स्वात्तपदां चकार ।। 35 ।।

कृष्णराजः स्वामात्मीय्यां दयां दीने दुःखिनीत्यर्थः वसेत्यशिषत् आज्ञापितवान् निजां क्रुधं सागसि सापराधे 'आगोऽपराधो मन्तुश्चे'त्यमरः । वसेत्यशिषदित्यनुषज्यते क्षमा क्षान्तिः प्रिया यस्य तस्य वा प्रियस्येति विकल्पात्पूर्वनिपाताभावः क्षमायाः पृथिव्याः प्रियस्येत्यपि गम्यते । 'क्षितिक्षान्त्योः क्षमे'त्यमरः । अस्य कृष्णराजस्य दया क्षमा यास्सख्यात् राजप्रियायाः क्षमायाः स्नेहात् क्रुधं सागसि वसेति शिष्टां राजप्रियक्षमाविरोधिनीं स्वेनात्तं गृहीतम् आङ्पूर्वाद्ददातेः क्तप्रत्यये अच उपसर्गात्त इति तकारः पदं सापराधरूपं स्थानं यस्यास्तां चकार। इन्द्रवज्रावृत्तम् । 'स्यादिन्द्रवज्रा यदि तौ जगौ ग' इति तल्लक्षणम् ।

अत्र राजप्रियक्षमासौहार्देन दयया राजप्रियक्षमासौहार्दरहितायाः क्रुधः स्थानाहाररूपविशेषात्मना वस्तुना राजप्रियसौहार्दात्केचित् राजप्रिय-सौहार्दरहितानां स्थानादिकमपहरन्तीति सामान्यरूपं वस्तु व्यज्यते । तथा कृष्णराजस्य सागसि दयालुत्वोक्त्या किमु वक्तव्यं कृष्णराजो नागसि दयालुरितीति काव्यार्थापत्त्यलङ्कारो व्यज्यते । 'कैमुत्येनार्थ-संसिद्धिः काव्यार्थापत्तिरिष्यत' इति तल्लक्षणम् ।। 35 ।।

राज्ञामिति ।

राज्ञामसावुपरि कृष्णनृपोऽखिलाना-
मस्तीति सर्वजनवादमिवासहिष्णुः ।
राजा स कृष्णनृपतेर्धवलातपत्र-
व्याजात्करोत्युपरिवासममुष्य नित्यम् ।। 36 ।।

असौ कृष्णनृपः अखिलानां राज्ञामुपर्यस्ति निखिलमुकुटरत्नप्रभा-नीराजितचरणकमलत्वादिति भावः इति सर्वजनवादं कृष्णराजस्य राज-पदार्थात्स्वस्मादप्युपरि वर्तमानत्वार्थकत्वेन स्वेन गृहीतमिति शेषः । असहिष्णुरिव असहमान इव "न लोके"त्यादिना षष्ठीनिषेधः । सः पूर्णिमाकालावच्छिन्नत्वेन बुद्धिस्थः पूर्ण इति यावत् राजा चन्द्रः 'राजा मृगाङ्के क्षत्रिये नृपे' इत्यमरः । धवलातपत्रव्याजाल्ल्यब् लोपे पञ्चमी। श्वेतच्छत्रापदेशमवलम्ब्येत्यर्थः । अमुष्य कृष्णनृपतेरुपरि नित्यं वासं करोति । अत्र असहिष्णुरिवेत्यत्र हेतूत्प्रेक्षा असहनादिवेत्यर्थपर्यवसानात् धवलातपत्रव्याजादित्यत्र कैतवापह्नुतिः । "कैतवापह्नुतिर्व्यक्ता व्याजा-द्यैर्निह्नुतैः पदै"रिति तल्लक्षणम् । उत्प्रेक्षालक्षणं तु 'सम्भावना स्यादुत्प्रेक्षा वस्तुहेतुफलात्मने'ति ।। 36 ।।

शरदिति ।

शरदिन्दुवलक्षचामरे द्वे

विधुते पार्श्वयुगे विलासिनीभ्याम् ।

सतताश्रितभारतीरमोत्थे

यशसी कृष्णनृपस्य भावयामः ।। 37 ।।

कृष्णनृपस्य पार्श्वयुगे विलासाः शृङ्गारचेष्टा अनयोस्सन्तीति विलासिन्यौ ताभ्यां विधुते कम्पिते द्वे शरदिन्दुवलक्षचामरे शरच्चन्द्रशुभ्र-चामरे कर्मणी । सततमाश्रिताभ्यां भारतीरमाभ्यां सरस्वतीलक्ष्मी-भ्यामुत्थे उदिते पाण्डित्यौदार्यजनिते इति यावत् । यशसी भावयाम-स्तर्कयामः स्वरूपोत्प्रेक्षा चौपच्छन्दसिकं छन्दः । "पर्यन्ते र्यौ तथैव शेषं त्वौपच्छन्दसिकं सुधीभिरुक्तमि"ति तल्लक्षणम् । पर्यन्तेरलगानां स्थाने शेषमवशिष्टं तथैव वैतालीयोक्तप्रकारेणैव ।। 37 ।।

हनुमदिति ।

हनुमद्गरुडप्रभुखैर्विरुदैरितरक्षितीश्वरालभ्यैः ।

राजोत्तमो भवानिति कृष्णमहीपाल निश्चिनुमः ।। 38 ।।

हे कृष्ण महीपाल इतरैस्त्वद्भिन्नैः क्षितीश्वरैराजभिरलभ्यैर्लब्धु-मशक्यैः "पोरदुपधादि"ति यत्प्रत्ययः । हनुमद्गरुडौ प्रमुखे आदी येषां तैश्शरभसाळ्वगण्डभेरुण्डादिभिर्बिरुदैरुत्कर्षचिह्नैः भवान् राजसूत्तमो राजोत्तमः सप्तमीति योगविभागात्समासः षष्ठीसमासस्य "न निर्धारण" इति प्रतिषेधात् । राजा उत्तम इति पदद्वयं वा उत्तमो राजेति योजना इति निश्चिनुमः । आर्या च्छन्दः । 'लक्ष्मैतत्सप्त गणा गोपेता भवति

नेह विषमे जः । षष्ठोऽयं नलघू वा प्रथमेऽर्धे नियतमार्यायाः । षष्ठे द्वितीयलात्परके न्ले मुखलाच्च सयतिपदनियमः । चरमेऽर्धे पञ्चमके तस्मादिह भवति षष्ठो ल' इति तल्लक्षणम् ।। 38 ।।

नूनमिति ।

नूनं कृष्णमहीपते शुचिजनुर्भावं महासेनतां
दृष्ट्वा ते निजमात्मजं भगवती त्वामम्बिकामन्यत ।
तत्तस्याः प्रणयो भवत्युपचितस्सा सिंहवाहा तत-
स्त्वां सिंहासनभागिनं वितनुते सम्प्राप्तभाग्योदयम् ।।39।।

हे कृष्णमहीपते भगवती षड्गुणैश्वर्यशालिनी अम्बिका गौरी 'मृडानी चण्डिकाम्बिके'त्यमरः । ते शुचिजनुर्भावम् । शुचौ शुद्धे यदुवंशे जनुर्जन्म यस्य, शुचौ ग्रीष्मर्तौ जनुर्यस्य शुचावाषाढे जनुर्यस्य वा तस्य शुचिजनुषो भावं शुचिजन्मत्वमित्यर्थः । शुचेरग्नेर्जनुर्यस्य तद्भाव-मग्निसम्भूतत्वमिति गम्यते । 'शुचिश्शुद्धे सितेऽनले । ग्रीष्माषाढा-नुपहतेष्वि'ति [illegible] । महासेनतां महती सेना यस्य । स्त्रियाः पुंवदिति पुंवद्भावे आन्महत इत्यात्वं तत्तां महासेनपदवाच्यतां चेति गम्यते । 'कार्तिकेयो महासेनश्शरजन्मा षडानन' इत्यमरः । दृष्ट्वा निजं स्वकीयमात्मजं तनयं कुमारममन्यत ज्ञातवती शुचिजनुर्भाव-महासेनतयोः कुमारे सत्वादिति भावः । तत्तस्मात्तस्या अम्बिकायाः प्रणयः प्रेमाप्रणयास्त्वमी 'विस्रम्भ याञ्चा प्रेमाण' इत्यमरः । भवति त्वद्विषये उपचितो वृद्धिं प्राप्तः परां काष्ठाङ्गत इति यावत् । ततः प्रणयोपचयात्सिंहो वाहो यानं गमनसाधनं यस्यास्सा 'वाहोऽश्व-

यानयो'रिति हेमचन्द्रः । सा अम्बिका भाग्यस्यादृष्टविशेषस्योदयः सम्प्राप्तः भाग्योदयोऽयं तं त्वां सिंहासनभागिनं सिंहो आसनमुपवेशं भजतं स्वारूढं सिंहमारोपितमित्यर्थः सिंहासनं हैमं नृपासनं भजन्तमिति च गम्यते । 'नृपासनं यत्तद्भद्रासनं सिंहासनं तु तत् । हैममि'त्यमरः। संपृच्छानुरुधेत्यादिना भजेर्घिनुण् चजोः कुघिण्यतोरिति कुत्वम् । वितनुते कुरुते नूनम् । अत्र श्रीकृष्णमहाराजकृतसुकृतपरिपाकनिमित्तक-सिंहासनाधिरोहणस्य देव्याः स्वतनयत्वज्ञानजन्यस्नेहातिशयनिमित्त-कत्वकथनाद्धेतूत्प्रेक्षा । नूनमित्युत्प्रेक्षाव्यञ्जकशब्दप्रयोगाद्वाच्या ।। 39 ।।

सानन्दमिति ।

सानन्दमेव सकलं भुवनं बभूव
कृष्णावनीन्द्र तव जन्मदिने यदेतत् ।
युक्तं हि यद्भवति सर्वशरीरभाजां
चित्तं महापुरुषजन्मनि सप्रमोदम् ।। 40 ।।

हे कृष्णावनीन्द्र तव जन्मदिने सकलं भुवनं लोकः सानन्दमेव सुखयुक्तमेव आनन्दसंवत्सरविशिष्टमेवेति च गम्यते । 'भुवनं लोकखाम्बुपु' इति हेमचन्द्रः । बभूवेति यदेतत् युक्तं हि युक्तमेव 'हि हेताववधारण' इत्यमरः । यद्यस्मात्कारणात् सर्वशरीरभाजां सर्वप्राणिनां चित्तं मनः जातावेकवचनं महापुरुषजन्मनि सप्रमोदं भवति हि तस्मादिति युक्त-मित्यनेन सम्बध्यते । अर्थान्तरन्यासोऽलङ्कारः ।। 40 ।।

कृष्णद्वितीयेति ।

कृष्णद्वितीयोदित एष राजा
वृद्धिं ययावित्यधिगम्य वार्ताम् ।
त्वद्गोचरां कृष्णनृपस्ववंश्यं
स्मृत्वा भवन्तं मुमुदे मृगाङ्कः ।। 41 ।।

हे कृष्णनृप मृगाङ्कश्चन्द्रः 'ग्लौर्मृगाङ्कः कलानिधिरि'त्यमरः । कृष्णे कृष्णपक्षे 'पक्षौ पूर्वापरौ शुक्लकृष्णावि'त्यमरः । द्वितीयायामुदित उत्पन्न एष राजा नृपः चन्द्र इति च गम्यते 'राजा मृगाङ्के क्षत्रिये नृप' इत्यमरः । वृद्धिमुपचयं ययाविति त्वं गोचरो विषयो यस्यास्तां वार्ताम् अधिगम्य भवन्तं स्ववंश्यं स्वस्य वंशे भवं स्मृत्वा मुमुदे हृष्टो बभूव । "पुत्रादिच्छेत्पराजयम्" इति न्यायेन स्ववंशे स्वोत्तमोदयस्य हर्षहेतुत्वादिति भावः। स्ववंश्यस्य कृष्णराजस्य स्वोत्तमत्वं च कृष्ण-द्वितीयायामुदयानन्तरं वृद्धिप्राप्त्या स्वस्य कृष्णद्वितीयोदयानन्तरम-पचयवत्वात् । यद्यपि कृष्णप्रतिपदमारभ्य अपचयवत्वं तावता कृष्ण-द्वितीयोदयानन्तरकालावच्छिन्नमपचयवत्वं न वार्यते ।। 41 ।।

द्वितीयायामिति ।

द्वितीयायां समुद्भूतस्सोम इत्युक्तिरद्भुतम् ।
कलापूर्णं हि राजानमासाद्य विवर्धेतमाम् ।। 42 ।।

द्वितीयायां तिथौ सोमश्चन्द्रः सोमवारे इति च गम्यते । उदभवदुत्पन्न इत्युक्तिः कलाभिः षोडशभागैः पूर्णम् अशेषकलायुक्तमित्यर्थः । कलाभिश्चतुष्षष्टिकलाभिः पूर्णमिति च गम्यते कला स्यात् काल-

शिल्पयोः । 'कलने मूलरैवृद्धौ षोडशांशे विधोरपी'ति हेमचन्द्रः । राजानं चन्द्रं नृपं चेति गम्यते । 'राजा मृगाङ्के क्षत्रिये नृप' इत्यमरः। आसाद्य बोधकत्वेन प्राप्य अद्भुतमाश्चर्यं विदधेतमाम् अत्यन्तं चकारेत्यर्थः "तिङश्चे"ति तमपि "किमेत्तिङव्ययघादामि"त्याम् प्रत्ययः । अत्र अद्भुतं विदधेतमामिति पदाभ्यां बोधितकलापूर्णचन्द्रत्वद्वितीयोदितत्वयोर्विरोधस्य प्रथम्याख्यानलब्धस्य द्वितीयव्याख्यानलब्धार्थेनाभासीकरणाद्विरोधाभासोऽलङ्कारः । पथ्यावक्त्रम् । "वक्त्रं नाद्यान्नसौ स्यातामब्धेर्योऽनुष्टुभि ख्यातमित्युक्त्वा "युजोर्जेन सरिद्भर्तुः पथ्यावक्त्रं प्रकीर्तितमि"ति कृतलक्षणम् ।। 42 ।।

य इति ।

योऽसौ सुकृतभूस्तिष्यजातोऽपि श्रवणोदितः ।
पुनर्वसूदयस्तस्येत्यद्भुतं कृष्णभूपतेः ।। 43 ।।

योऽसौ प्रसिद्धः कृष्णभूपतिः तिष्यजातोऽपि कलियुगोत्पन्नोऽपि सुकृतभूः शोभने कृतयुगे जात इति विरोधः, 'युगपर्याप्तयोः कृतमि'त्यमरः । सुकृतानां पुण्यानां 'पुण्यश्रेयसी सुकृतमि'त्यमरः । भूः स्थानमिति तत्परिहारः श्रवणोदितोऽपि श्रवणनक्षत्रजातोऽपि तिष्यजातः पुष्यनक्षत्रजात इति विरोधः कलियुगजात इति तत्परिहारः । 'तिष्यः पुष्ये कलियुगे' इत्यमरः । तस्य श्रवणोदितस्य कृष्णभूपतेः पुनर्वसूदयः पुनर्वसुनक्षत्रोत्पत्तिरिति विरोधः । स एव विरोध इत्यद्भुतमिति शब्दाभ्यां बोध्यते । पुनरावृत्या वसूदयः अर्थिभ्यः प्रतिपादनेऽपि पुनर्धनोत्कर्ष इत्यर्थः इति विरोधपरिहारः । अत्र त्रयाणां विरोधाभासानां संसृष्टिः ।। 43 ।।

रत्नाकर इति ।

रत्नाकरे चान्द्रमसान्वयेऽभू-
च्छ्रीचामराजाख्यमहामणिर्यः ।
श्रीकृष्णराट् कल्पतरुस्ततोऽभू-
त्ततो यशश्चन्द्र इदं विचित्रम् ।। 44 ।।

चान्द्रमसान्वये चन्द्रसम्बन्धिवंश एव रत्नाकरे समुद्रे यः श्रीचाम-राजाख्यो महामणिर्मणिश्रेष्ठश्चिन्तामणिरिति यावत् अभूदुत्पन्नः ततः श्रीचामराजाख्यमहामणेः श्रीकृष्णराडेव कल्पतरुरभूत् ततः श्रीकृष्णराट्-कल्पतरोः यश एव चन्द्रोऽभूदित्यनुषज्यते । इदं मणेः कल्पतरूद्भवनं कल्पतरोश्चन्द्रोद्भवनं च विचित्रमाश्चर्यकरमित्यर्थः । अत्र चतुर्थी विभावना ।। 44 ।।

दानैरिति ।

दानैर्वैरोचनिजिति तनये श्रीकेम्पनञ्जमम्बायाः ।
वैरोचनि भिक्षूत्तमसुतादितिर्वरसुतत्वमदमजहात् ।। 45 ।।

श्री केम्पनञ्जमम्बायाः तनये श्रीकृष्णराजकण्ठीरवे दानैः देयभेदा-द्दानस्यानेकत्वं वैरोचनि जिति विरोचनापत्ययोर्बलिकर्णयोर्जेतरि सति विरोचनो दैत्यविशेषस्सूर्यश्च 'विरोचनोऽग्निसूर्ययोः । प्रह्लादतनये चन्द्र' इति हेमचन्द्रः । वैरोचनौ कर्णे बलौ च विषये भिक्षू याचकावुत्तमौ सुताविन्द्रोपेन्द्राख्या यस्यास्सा अदितिर्देवमाता । वरः श्रेष्ठः सुतो यस्यास्तत्वेन मदं गर्वं 'गर्वे स्याद्विस्सयो मद' इत्यमरः । वरसुतेत्यस्य सामान्ये नपुंसकत्वम् अजहात् त्यक्तवती । यद्यपि बलिकर्णयोर्दातृत्वेन

याचकादुपेन्द्रादिन्द्राच्चोत्तमत्वं तथापि राक्षसकुलोत्पन्नत्वकानीनत्वादि-दोषानुसन्धानात्तयोस्तादृशोत्तमत्वज्ञानं स्वतनयेषु महाकुलीनत्वादि-कमनुसन्दधानाया अदितेर्न मदहानिहेतुः महाकुलीनत्वादिगुणनिधेः । श्रीकृष्णराजकण्ठीरवस्य तथात्वज्ञानं तु तथेति भावः । उद्गीतिः । आर्यापूर्वार्धसमं यदि कथमपि लक्षणं भवेदुभयोः । "सोद्गीतिः किल कथिता तद्वद्यत्यंशभेदसंयुक्ते"ति तल्लक्षणम् ।। 45 ।।

समस्तेति ।

समस्तजगदम्बिकाचरणपङ्कजाराधन-
प्रभावविपुलीभवद्विभवसारसाम्राज्यभूः ।
अशेपबुधतोषकृत्सकलसद्गुणैकाश्रयस्स
कृष्णधरणीपतिर्विजयतां मुदा सर्वदा ।। 46 ।।

समस्तजगतां निखिलजगतामम्बिकाया जनन्याः सर्वज्ञायाः सर्व-शक्तेश्चण्डमुण्डनिषूदिन्याश्चरणपङ्कजयोराराधनप्रभावेन विपुलीभवतां विभवसारसाम्राज्यानां धनबलसम्राड्वानाम् अर्थरैविभवानरीतिसारो बलेस्थि स्थिरांशे चेति 'शास्ति यश्चाज्ञया राज्ञस्स सम्राडि'ति चामरः। भूः स्थानमित्यर्थः 'भूस्तु भूमिरिव क्षितौ । स्थाने चे'ति हेमचन्द्रः । सकलानां सद्गुणानामौदार्यादीनाम् एकाश्रयो मुख्यस्थानम् । अत एव समस्तबुधतोषकृत् निखिलपण्डिताह्लादकरः स प्रसिद्धः कृष्णधरणीपतिः मुदा प्रमोदेन सर्वदा सर्वकाले विजयतां लोकोत्कर्षेण वर्ततामित्याशिषि लोट् "विपराभ्यां जेरि"त्यात्मनेपदम् । पृथ्वीवृत्तम् । "जसौ जसयलगा-वसुग्रहयतिश्च पृथ्वीमते"ति तल्लक्षणम् ।। 46 ।।

लोकेति ।

लोकख्यातपराक्रमादिसुगुणश्रीचामराजात्मज
श्रीमत्कृष्णवसुन्धरेश्वरगुणैः संयोजितैरात्मना ।
या स्यूताजनि नीलकण्ठविदुषा सुश्लोकरत्नावली
सा तस्यैव महीश्वरस्य हृदयारोहं विधत्तां चिरम् ।। 47 ।।

नीलकण्ठविदुषा आत्मना बुध्या संयोजितैः सम्मेळितैः बुद्धिगोचरीकृतैरित्यर्थः आत्मना यत्नेन संयोजितैः एकतन्तूकृतैरित्यर्थश्च 'आत्मा यत्नो धृतिर्बुद्धिरि'त्यमरः । लोके ख्याताः प्रथिताः 'प्रतीते प्रथितख्याते'त्यमरः । पराक्रमादयस्सुगुणा यस्य तस्य श्रीचामराजस्यात्मजस्य तनयस्य श्रीमतः कृष्णवसुन्धरेश्वरस्य गुणैश्शौर्यादिभिरेव गुणैस्तन्तुभिः गुणो ज्यासूदतन्तुषु । 'रज्जौ सत्वादौ सन्ध्यादौ शौर्यादौ भीम इन्द्रिये' इति हेमचन्द्रः । स्यूतासम्बद्धा सीव्यतेः क्तः च्वोश्शूडित्यूठ् यासु श्लोका एव रत्नानि तेषामावली अजनिर्मिता सा तस्यैव कृष्णाभिधानस्य महीश्वरस्यैव हृदयस्य स्वान्तस्यैव हृदयस्य वक्षसः आरोहमारोहणं विधत्तां करोतु । श्लेषरूपकयोरङ्गाङ्गिभावेन सङ्करः । "विषय्यभेदताद्रूप्यरञ्जनविषयस्य यत् रूपकमि"ति तल्लक्षणम् । लक्ष्मीमाकलयन्नित्यादिषु लोकख्यातपराक्रमादीत्यन्तेषु सर्वेषु श्लोकेषु कृष्णराजविषयायाः कविगतायाः प्रीतेर्व्यङ्ग्यत्वाद्भावध्वनिः अलङ्काराश्च पूर्वं तत्र तत्र प्रतिपादिता इममेव प्राधान्येन व्यज्यमानं भावमलङ्कुर्वन्ति ।। 47 ।।

अतीतेष्वति ।

अतीतेषु शकाब्देषु शालिवाहनभूभुजः ।
रत्नाद्रिमुनिभूसङ्ख्येष्वब्दे पैङ्गळनामके ।। 48 ।।

इषे शुक्ले सौरिवारसंयुतप्रतिपद्दिने ।
रत्नसिंहासनारूढश्रीमत्कृष्णमहीश्वरे ।। 49 ।।

कृष्णराजगुणालोकनामा ग्रन्थो विनिर्मितः ।
तनोतु विदुषां चित्ते चमत्कारपरम्पराम् ।। 50 ।।

रत्नाद्रिमुनिभूसङ्ख्येषु एकोनाशीत्युत्तरसप्तदशशतसङ्ख्याकेष्वित्यर्थः । शालिवाहनभूभुजः शालिवाहननृपस्य शकाब्देषु शकवर्षेषु अतीतेषु अतिक्रान्तेषु सत्सु पैङ्गळनामके अब्दे वर्षे इषे आश्विनमासे 'स्यादाश्विन इषोऽप्याश्वयुजोऽपी'त्यमरः । शुक्ले शुक्लपक्षे रत्नसिंहासनम् आरूढः श्रीमान् कृष्णमहीश्वरः श्रीकृष्णराजकण्ठीरवः यस्मिन् तस्मिन् आश्विनशुक्लप्रतिपदमारभ्य नवसु दिनेषु रत्नसिंहासनारोहणं हि श्रीकृष्णराजकण्ठीरवस्य कुलक्रमागतं सौरिवारेण स्थिरवासरेण संयुते युक्ते प्रतिपद्दिने विनिर्मितः सम्पूर्णतां प्रापित इत्यर्थः । कृष्णराजगुणानाम् आलोकः प्रकाशकः कृष्णराजगुणालोकः कृष्णराजगुणालोक इति नाम यस्य सः ग्रन्थः विदुषां पण्डितानां चित्ते चमत्कारस्य आह्लादविशेषस्य परम्परां सन्ततिं तनोतु विस्तारयतु । आशिषि लोट् ।। 48-50 ।।

बालमुकुन्दाख्यो यः श्रीकृष्णक्षोणिपालवर्येण ।
दत्तत्रिविक्रमाख्यो व्याख्येयं तत्कृता चिरं जीयात् ।।

।। सम्पूर्णम् ।।

श्लोकानुक्रमणिका

31.	लोकख्यातपराक्रमादि	47	39
32.	वन्दित्वा परमेशानां	-	3
33.	वयं सर्वे वासं क्वचन	34	29
34.	वसुभिर्द्विजपोषणं	18	18
35.	विजयेन कृतानुवर्तनो	2	5
36.	वृष्टिस्सहस्रकिरणात्	21	20
37.	शरदिन्दुवलक्षचामरे	37	32
38.	श्रित्वा कञ्चन तेन	28	25
39.	श्रीकृष्णक्षितिभृन्निशा	3	5
40.	श्रीकृष्णभूमिरमणस्य	27	24
41.	श्रीकृष्णराजः प्रददौ	17	17
42.	श्रीकृष्णराज भवदर्पित	20	19
43.	श्रीकृष्णराजसफली	15	16
44.	श्रीकृष्णराजेन कृताग्रहारा	16	16
45.	श्रीकृष्णावनिवल्लभस्य	4	7
46.	श्रीकृष्णेन्दोस्स्तवात्मा	-	1
47.	समस्तजगदम्बिकाचरण	46	38

5

ಕನ್ನಡಾನುವಾದಭಾಗ

ಶ್ರೀಗಣಾಧಿಪತಯೇ ನಮಃ

ಶ್ರೀಮತ್ಕೃಷ್ಣರಾಜಗುಣಾಲೋಕ

ಶ್ರೀಕೃಷ್ಣೇಂದೋಸ್ಸ್ತವಾತ್ಮಾ ಪ್ರಥಿತತರಮಹೀಶೂರಸಿಂಹಾಸನೇಶೋ
ಗ್ರಂಥೋಽಯಂ ಕೃಷ್ಣರಾಜಪ್ರಥಮಪದಗುಣಾಲೋಕನಾಮ್ನಾ ಪ್ರತೀತಃ |
ಸವ್ಯಾಖ್ಯಾನೋ ವಿತೇನೇ ಸುರುಚಿರಜಗದಂಬಾವಿಲಾಸಾಖ್ಯ
ಮುದ್ರಾಶಾಲಾಯಾಂ ಮುದ್ರ್ಯಯದ್ಭಿರ್ನಿಪುಣವಿರಚಿತವ್ಯಕ್ತಿವರ್ಣಾವಲೀಕಃ ||

ಭಾವಾರ್ಥ : *ಶ್ರೀಕೃಷ್ಣರಾಜನು ಸಿಂಹಾಸನಾರೋಹಣ ಮಾಡಿದ ಮೊದಲ ದಿನ ಅತಿ ಪ್ರಸಿದ್ಧವಾದ ಮಹೀಶೂರ ಸಿಂಹಾಸನೇಶ್ವರನ 'ಗುಣಾಲೋಕ' ಎಂದು ಹೆಸರಿರುವ, ರಾಜನ ವ್ಯಕ್ತಿತ್ವದ ವರ್ಣನೆಯನ್ನು ಅತ್ಯಂತ ಕಲಾತ್ಮಕವಾಗಿ ನೈಪುಣ್ಯದಿಂದ ರಚಿಸಿರುವ, 'ಕೃಷ್ಣ'ನೆಂಬ ಚಂದ್ರನ ಸ್ತೋತ್ರರೂಪವಾದ ಈ ಗ್ರಂಥವನ್ನು ವ್ಯಾಖ್ಯಾನದೊಡನೆ ರಚಿಸಲಾಯಿತು. ಇದನ್ನು ಜಗದಂಬಾವಿಲಾಸ ಎಂಬ ಸುಂದರವಾದ ಮುದ್ರಣಾಲಯದಲ್ಲಿ ಮುದ್ರಿಸಲಾಯಿತು.*

[ವಿಶೇಷಾಂಶ : ಶ್ರೀಮಚ್ಚಾಮರಾಜ ಮಹಾರಾಜ ಮತ್ತು ಕೆಂಪನಂಜಾಂಬೆಯರ ಪುಣ್ಯಪರಂಪರೆಯಿಂದ ಗಳಿಸಿದ ಭೂಮಂಡಲದಲ್ಲಿ ಜನ್ಮ ತಳೆದ ತನ್ನ ಅಪರಿಮಿತವಾದ ಕಲ್ಯಾಣಗುಣಗಳ ಸಮೂಹದಿಂದ ಪಡೆದ ಕೀರ್ತಿ ಚಂದ್ರನ ಬೆಳದಿಂಗಳಿನಿಂದ ನಿರ್ಮಲಗೊಳಿಸುತ್ತಿರುವ ಬ್ರಹ್ಮಾಂಡವುಳ್ಳ, ಸಕಲ

ದೇಶಗಳಿಗೆ ಆಭರಣಪ್ರಾಯನಾದ ಶ್ರೀಮತ್ ಕರ್ನಾಟಕದೇಶಕ್ಕೆ ಒಡೆಯನಾದ ರಾಜಾಧಿರಾಜ ಮೊದಲಾದ ಅನೇಕ ಬಿರುದುಗಳಿಂದ ಅಲಂಕೃತನಾದ ಶ್ರೀಮತ್ಕೃಷ್ಣರಾಜ ಕಂಠೀರವ ಸಾರ್ವಭೌಮರಿಂದ ಮುತ್ತಿನಹಾರ, ಚಿನ್ನದ ಆಭರಣಗಳು, ಶ್ರೇಷ್ಠವಾದ ಶಾಲು, ಪೇಟ, ಛತ್ರಿ, ಚಾಮರ, ಪಲ್ಲಕ್ಕಿ ಮೊದಲಾದ ಗೌರವವನ್ನು ಪಡೆದಿದ್ದ ರಾಜನಿಂದ 'ತ್ರ್ಯಂಬಕ' ಎಂಬ ಹೆಸರನ್ನು ಪಡೆದಿದ್ದ ತಂದೆಯಿಂದ 'ನೀಲಕಂಠ'ನೆಂದು ಹೆಸರು ಪಡೆದುಕೊಂಡಿದ್ದ ಶ್ರೀಕೃಷ್ಣರಾಜ ಕಂಠೀರವಸಾರ್ವಭೌಮನ ಆಸ್ಥಾನದಲ್ಲಿದ್ದ ವಿದ್ವತ್ಕವಿಯು ಮೊದಲೇ ಹೇಳಿರುವ ವಿಶೇಷಣಗಳಿಂದ ವಿರಾಜಮಾನನಾದ ಶ್ರೀಮತ್ಕೃಷ್ಣರಾಜ ಕಂಠೀರವ ಸಾರ್ವಭೌಮನ ಗುಣಗಳ ಸಮೂಹವನ್ನು ವರ್ಣಿಸುವ 'ಕೃಷ್ಣರಾಜಗುಣಾಲೋಕ' ಎಂಬ ಕಾವ್ಯವನ್ನು ರಚಿಸಿ ತಾನೇ ಈ ಗ್ರಂಥಕ್ಕೆ ಶ್ರೀಮತ್ಕೃಷ್ಣರಾಜಗುಣಾಲೋಕದಿಂದ ಕೊಡಲ್ಪಟ್ಟ 'ತ್ರಿವಿಕ್ರಮ' ಎಂಬ ಬಿರುದುಳ್ಳ, ತಮ್ಮನಿಂದ ರಚಿಸಲ್ಪಟ್ಟ ವ್ಯಾಖ್ಯೆಯುಳ್ಳ ಈ ಕಾವ್ಯದ ಪ್ರಚಾರವಾಗಬೇಕೆಂದು ಬಯಸಿ 'ಶ್ರೀಕೃಷ್ಣರಾಜಗುಣಾಲೋಕ' ಎಂಬ ಈ ಗ್ರಂಥವನ್ನು ಮುದ್ರಿಸಬೇಕೆಂದು ಜಗದಂಬಾವಿಲಾಸ ಚಿತ್ರ ಮುದ್ರಾಕ್ಷರಶಾಲೆಯ ಅಧಿಕಾರಿಗಳನ್ನು ಬೇಡಿಕೊಂಡನು. ಹೀಗೆ ಬೇಡಿಕೊಂಡಾಗ ಮುದ್ರಣಶಾಲೆಯ ಅಧಿಕಾರಿಗಳು 1781 ಶಾಲಿವಾಹನ ಶಕ ಸಿದ್ಧಾರ್ಥಿ ಸಂವತ್ಸರ ಮಾರ್ಗಶೀರ್ಷ ಶುದ್ಧ ಸಪ್ತಮಿಯಂದು ಇದರ ಮುದ್ರಣಕಾರ್ಯವನ್ನು ಕೈಗೊಂಡರು.

ಈ ಶ್ಲೋಕವು ಸ್ರಗ್ಧರಾ ವೃತ್ತದಲ್ಲಿದೆ.]

ಮಂಗಳಶ್ಲೋಕ :

ವಂದಿತ್ವಾ ಪರಮೇಶಾನಂ ಪಾರ್ವತೀಪತಿಮಾದರಾತ್ |
ಕೃಷ್ಣರಾಜಗುಣಾಲೋಕಂ ವ್ಯಾಖ್ಯಾಸ್ಯಾಮಿ ಯಥಾಮತಿ ||

ಭಾವಾರ್ಥ : ಪಾರ್ವತೀಪತಿಯಾದ ಪರಮೇಶ್ವರನನ್ನು ಗೌರವ, ಆದರಗಳಿಂದ ನಮಸ್ಕರಿಸಿ, ಶ್ರೀಕೃಷ್ಣರಾಜಗುಣಾಲೋಕವೆಂಬ ಗ್ರಂಥವನ್ನು (ನನ್ನ) ಬುದ್ಧಿಗೆ ನಿಲುಕುವಷ್ಟು ವ್ಯಾಖ್ಯಾನಿಸುತ್ತೇನೆ.

[ವಿಶೇಷಾಂಶ : ಈ ಶ್ಲೋಕವು ಅನುಷ್ಟುಪ್ ಛಂದಸ್ಸಿನಲ್ಲಿದೆ.]

1. ಲಕ್ಷ್ಮೀಮಾಕಲಯನ್ ಸ್ಥಿರಾಂ ಸಮುಭವದ್ಯಸ್ಮಾರ್ಗಣತ್ವಂ ಗತಃ
ಪ್ರಾಪ್ತೋಽನಂತಗುಣಾಭಿರಾಮಮಚಲಂ ಧರ್ಮ್ಮಂ ದುರಾಪಂ ಹಿ ಯಃ |
ಆರ್ಯಾನಂದಕರಃ ಶ್ರಿತೋ ಬುಧಗಣೈಸ್ಸದ್ರಾಜತಾವಾಸಭೂ-
ಸ್ತಂ ಶ್ರೀಕೃಷ್ಣನೃಪಂ ಸ ರಕ್ಷತು ಚಿರಂ ಬಾಲೇಂದುಚೂಡಾಮಣಿಃ ||

ಈಶ್ವರನ ಪರವಾಗಿ :

ಭಾವಾರ್ಥ : ಯಾವನು ಸ್ಥಿರವಾದ ಲಕ್ಷ್ಮಿಯನ್ನು ಪತ್ನಿಯನ್ನಾಗಿ ಪಡೆದ ಮಹಾವಿಷ್ಣುವನ್ನೇ ತ್ರಿಪುರಸಂಹಾರ ಕಾಲದಲ್ಲಿ ಬಾಣವನ್ನಾಗಿ ಮಾಡಿಕೊಂಡನೋ, ಯಾವನು ಅನಂತ ಗುಣಗಳಿಂದ ಮನೋಹರವಾಗಿ ಕಂಗೊಳಿಸುತ್ತಿರುವನೋ, ಯಾವನು ಅಚಲವಾದ ಮೇರು ಪರ್ವತವನ್ನೇ ಆವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಾನೋ, ಯಾವನು ಇತರರು ಪಡೆಯಲು ಅಸಾಧ್ಯವಾದ ಬಿಲ್ಲನ್ನು ಹೊಂದಿದ್ದಾನೋ, ಯಾವನು ಪಾರ್ವತಿಗೆ ಆನಂದಕರನಾಗಿರುವನೋ, (ಭಗವಂತನ ಅನುಗ್ರಹದಿಂದ) ತತ್ತ್ವಸಾಕ್ಷಾತ್ಕಾರವನ್ನು ಪಡೆದ ಪ್ರಮಥಗಳಿಂದ ಸುತ್ತುವರೆಯಲ್ಪಟ್ಟ, ರಜತಪರ್ವತವನ್ನೇ (ಹಿಮಾಲಯವನ್ನೇ) ತನ್ನ ವಾಸಸ್ಥಾನವಾಗಿ ಹೊಂದಿರುವನೋ, ಅಂತಹ ಅರ್ಧಬಾಲಚಂದ್ರನನ್ನು ತಲೆಯಲ್ಲಿ ಧರಿಸಿಕೊಂಡಿರುವ (ಚಂದ್ರಶೇಖರನಾದ) ಪರಮೇಶ್ವರನು ಶ್ರೀಕೃಷ್ಣ ಭೂಪಾಲನನ್ನು ಬಹುಕಾಲ ಕಾಪಾಡಲಿ.

ರಾಜನ ಪರವಾಗಿ :

ಭಾವಾರ್ಥ : *ಯಾವನು ಸ್ಥಿರವಾದ ರಾಜ್ಯಲಕ್ಷ್ಮಿಯನ್ನು ಹೊಂದಿ (ಸ್ಥಿರವಾದ ರೀತಿಯಲ್ಲಿ ಧರ್ಮವನ್ನು ಆಚರಿಸುತ್ತಿರುವನೋ), ಯಾವನು ಯಾಚಿಸಿ ಬಂದವರಿಗೆ ಆಶ್ರಯದಾತನಾಗಿರುವನೋ, ಯಾವನು ನಿರವಧಿಕ-ಗುಣಗಳಿಂದ ಕಂಗೊಳಿಸುತ್ತಿರುವನೋ, ಯಾವನು ನಿಗ್ರಹಿಸಲು ಅಸಾಧ್ಯ-ವಾಗಿರುವನೋ, ಯಾವನು ಬೇರೆಯವರಿಂದ ಹೊಂದಲು ಆಗದೇ ಇರುವಂತ-ಹವನೋ, ಸಜ್ಜನರಿಗೆ ಅಂದರೆ ಚೆನ್ನಾಗಿ ತಿಳಿದ ವಿದ್ವಾಂಸರಾದವರಿಗೆ ಸಂತೋಷವನ್ನು ಉಂಟುಮಾಡುವವನೋ, ಪಂಡಿತರ ಸಮೂಹಗಳಿಂದ ಸುತ್ತುವರೆಯಲ್ಪಟ್ಟವನೋ, ಯಾವನು ಒಳ್ಳೆಯ ಸಾಮಂತರಾಜರುಗಳಿಗೆ, ಶ್ರೀಮಂತರುಗಳಿಗೆ ಆಶ್ರಯಸ್ಥಾನನಾಗಿರುವನೋ ಅಂತಹ ಶ್ರೀಕೃಷ್ಣರಾಜನನ್ನು ಬಾಲಚಂದ್ರನನ್ನು ಧರಿಸಿದ ಪರಮೇಶ್ವರನು ಬಹುಕಾಲ ಕಾಪಾಡಲಿ.*

[ವಿಶೇಷಾಂಶ : ಪ್ರಸ್ತುತ ಶ್ಲೋಕವು ಶ್ಲೇಷಾಲಂಕಾರ ಪ್ರಭೇದವಾದ ಅರ್ಥಶ್ಲೇಷಕ್ಕೆ ಉದಾಹರಣೆಯಾಗಿದೆ. ಇದರ ಲಕ್ಷಣ ಕುವಲಯಾನಂದರೀತ್ಯಾ ಹೀಗಿದೆ - नानार्थसंश्रयः श्लेषो वर्ण्यावर्ण्योभयाश्रितः - ಎಂಬುದಾಗಿ. ಅಂದರೆ - ಉಪಮಾನ ಉಪಮೇಯ ಎರಡನ್ನೂ ಆಶ್ರಯಿಸಿ ಒಂದೇ ಪದವು ಅನೇಕ ಅರ್ಥಗಳನ್ನು ತಿಳಿಸುವಂತೆ ರಚಿಸುವ ಶಬ್ದಗಳ ಜೋಡಣೆಯೇ ಶ್ಲೇಷ ಎನಿಸುತ್ತದೆ.

ಈ ಶ್ಲೋಕದಲ್ಲಿ आर्यानन्दकरः ಪಾರ್ವತಿಗೆ ಆನಂದವನ್ನುಂಟು ಮಾಡುವ (आर्यायाः पार्वत्या आनन्दकरः) ಮತ್ತು ಸಜ್ಜನರಿಗೆ ಆನಂದವನ್ನುಂಟು ಮಾಡುವ (आर्याणां सज्जनानामानन्दकरः) ಎಂಬುದಾಗಿ ಎರಡು ಅರ್ಥಗಳಿರುವುದರಿಂದ ಇದು ಶ್ಲೇಷಾಲಂಕಾರ. ಇದರಂತೆಯೇ

ಅಚಲಮ್, ದುರಾಪಮ್, ಮಾರ್ಗಣತ್ವಮ್, ಬಾಲೇನ್ದುಚೂಡಾಮಣಿಃ ಇತ್ಯಾದಿ ಪದಗಳಲ್ಲೂ ಶ್ಲೇಷವು ಗೋಚರವಾಗುತ್ತದೆ.

ಪ್ರಸ್ತುತ ಶ್ಲೋಕವು ಶಾರ್ದೂಲವಿಕ್ರೀಡಿತವೃತ್ತದಲ್ಲಿದೆ.

ಈ ಶ್ಲೋಕದಲ್ಲಿ ಆಶೀರ್ವಾದಪೂರ್ವಕ ಮಂಗಳವನ್ನು ಹೇಳಲಾಗಿದೆ ಮಂಗಳದಲ್ಲಿ ಮೂರು ಬಗೆ. ನಮಸ್ಕಾರಪೂರ್ವಕ ಮಂಗಳ, ಆಶೀರ್ವಾದ-ಪೂರ್ವಕ ಮಂಗಳ ಮತ್ತು ವಸ್ತುನಿರ್ದೇಶಾತ್ಮಕಮಂಗಳ ಎಂಬುದಾಗಿ. ನಮಸ್ಕಾರಪೂರ್ವಕ ಮಂಗಳವೆಂದರೆ ನಮಸ್ಕಾರ ಎಂಬ ಅರ್ಥವನ್ನು ಕೊಡುವ ಪದವನ್ನು ಬಳಸಿ ಹೇಳುವುದು. ಉದಾಹರಣೆಗೆ ಲಘುಸಿದ್ಧಾಂತಕೌಮುದಿಯ ಮಂಗಳ ಶ್ಲೋಕ -

नत्वा सरस्वतीं देवीं शुद्धां गुण्यां करोम्यहम् ।
पाणिनीयप्रवेशाय लघुसिद्धान्तकौमुदीम् ।।

ಇಲ್ಲಿ ನಮಸ್ಕಾರಪೂರ್ವಕ ಮಂಗಳ. ವಸ್ತುನಿರ್ದೇಶಾತ್ಮಕಮಂಗಳವೆಂದರೆ ಕಾವ್ಯದಲ್ಲಿ ಯಾವುದು ಪ್ರಧಾನವಿಷಯವಾಗಿ ಬರುತ್ತದೆಯೋ ಅದನ್ನು ಪ್ರತಿಬಿಂಬಿಸಿ ಹೇಳುವುದು. ಉದಾಹರಣೆಗೆ ಕುಮಾರಸಂಭವದ ಮಂಗಳ ಶ್ಲೋಕ -

अस्त्युत्तरस्यां दिशि देवतात्मा हिमालयो नाम नगाधिराजः ।
पूर्वापरौ तोयनिधौवगाह्य स्थितः पृथिव्या इव मानदण्डः ।।

ಈ ಶ್ಲೋಕದಲ್ಲಿ ಮುಂದೆ ಕಾವ್ಯದಲ್ಲಿ ಬರುವ ಹಿಮಾಲಯಪರ್ವತವೆಂಬ ವಸ್ತುವನ್ನೇ ಮಂಗಳವಾಗಿ ನಿರ್ದೇಶಿದ್ದಾರೆ. ಹಾಗೆಯೇ ಪ್ರಸ್ತುತ 'ಶ್ರೀಮತ್ಕೃಷ್ಣ-ರಾಜಗುಣಾಲೋಕ'ದ ಈ ಮಂಗಳಶ್ಲೋಕವು ಆಶೀರ್ವಾದಪೂರ್ವಕ ಮಂಗಳಕ್ಕೆ ಉದಾಹರಣೆಯಾಗಿದೆ. ಈ ರೀತಿಯ ಮಂಗಳಶ್ಲೋಕಗಳು 'ದೇವರು ನಮಗೆ

ಒಳ್ಳೆಯದನ್ನು ಮಾಡಲಿ' ಎಂದು ಪ್ರಾರ್ಥನಾರೂಪವಾಗಿರುತ್ತದೆ. ಅದರಂತೆಯೇ ಇಲ್ಲಿ **'वालेन्दुचूडामणिः शिवः तं श्रीकृष्णनृपं चिरं रक्षतु'** ಎಂಬುದಾಗಿ ಹೇಳಲಾಗಿದೆ.

"मो भूमिः त्रिगुरुः श्रियं वितनुत" ಎಂಬ ಉಕ್ತಿಗನುಗುಣವಾಗಿ ಮೂರು ಗುರುಗಳಿಗೆ ಆಶ್ರಯವಾಗಿರುವಂತಹುದು ಮಗಣ. ಆ ಮಗಣವನ್ನು ಮೊದಲು ಬಳಸಿದರೆ ಅದು ಸಂಪತ್ತನ್ನು ತಂದು ಕೊಡುತ್ತದೆ ಎಂದು ಬಲ್ಲವರು ಹೇಳಿರುವುದರಿಂದ ಮೊದಲು ಮಗಣವನ್ನೇ ಪ್ರಯೋಗಿಸಬೇಕು ಎಂಬುದಾಗಿ ತಿಳಿಯಬೇಕು. ಅಂದರೆ ಮೂರು ಗುರುಗಳನ್ನು ಹೇಳಿಕೊಂಡು ಕಾವ್ಯವನ್ನು ರಚನೆ ಮಾಡಿದ್ದಾದರೆ ಐಶ್ವರ್ಯವನ್ನು ಮತ್ತು ಕಾವ್ಯಕ್ಕೆ ಅಭಿವೃದ್ಧಿಯನ್ನೂ ತಂದುಕೊಡುತ್ತದೆ ಎಂಬ ಉದ್ದೇಶದಿಂದ ಕವಿಯು ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತವನ್ನು ಬಳಸಿದ್ದಾನೆ. ಇದನ್ನೇ ಭಾಮಹನು ತನ್ನ ಕಾವ್ಯಾಲಂಕಾರದಲ್ಲಿ **"क्षेमं सर्वगुरुर्दत्ते मगणो भूमिदैवतः"** ಎಂದಿದ್ದಾನೆ. ನಾಂದೀಶ್ಲೋಕದ ಆದಿಯಲ್ಲಿ ಎಲ್ಲ ಗುರು ಅಕ್ಷರಗಳಿರುವ ಮಗಣದ ಪ್ರಯೋಗ ಕ್ಷೇಮಕರವೆಂದಿದ್ದಾನೆ.]

2. ವಿಜಯೇನ ಕೃತಾನುವರ್ತನೋ ನಿತರಾಮುದ್ಧವಸಂಭೃತಾದರಃ |
ಕುರುತೇ ಯದುವಂಶಮಂಡನಂ ಸ ಹಿ ಕೃಷ್ಣಪ್ರಭುರಾದಿಮೋ ಯಥಾ ||

ಭಾವಾರ್ಥ : *ಅರ್ಜುನನಿಂದ ಯಾವಾಗಲೂ ಹಿಂಬಾಲಿಸಲ್ಪಡತಕ್ಕಂತಹ, ಯಾವಾಗಲೂ ಉದ್ಧವನಿಂದ ಆದರಿಸಲ್ಪಡತಕ್ಕಂತಹ, ಪರಮಪುರುಷನಾದ ಶ್ರೀಕೃಷ್ಣನು ಯದುವಂಶಕ್ಕೆ ಅಲಂಕಾರಪ್ರಾಯನಾಗಿದ್ದಾನೆ. ಹಾಗೆಯೇ ಶ್ರೀಕೃಷ್ಣ ಭೂಪಾಲನೂ ಕೂಡ ವಿಜಯದಿಂದ ಹಿಂಬಾಲಿಸಲ್ಪಡತಕ್ಕಂತಹವನು. ಅಂದರೆ, ಅವನಿಗೆ ಸೋಲು ಎಂಬುದೇ ಇಲ್ಲ. ಯಾವಾಗಲೂ ದೇವತಾ ಉತ್ಸವ,*

ಸಮಾರಂಭಾದಿಗಳನ್ನು ಮಾಡುವುದರಲ್ಲಿ ಆದರವುಳ್ಳಂತಹವನು, ಶತ್ರುಗಳನ್ನು ಜಯಿಸುವುದರಲ್ಲಿ ಅಗ್ರಗಣ್ಯನೂ ಆದಂತಹ ಇವನು ಯದುವಂಶಕ್ಕೆ ತಿಲಕಪ್ರಾಯನಾಗಿದ್ದಾನೆ.

[ವಿಶೇಷಾಂಶ : ಇಲ್ಲಿ ಉಪಮಾಲಂಕಾರವಿದೆ. ಶ್ಲೇಷಮೂಲಕವಾಗಿ ಉಪಮಾಲಂಕಾರವನ್ನು ಹೇಳಿದ್ದಾನೆ. ಇದರ ಲಕ್ಷಣ "उपमा यत्र सादृश्य-लक्ष्मीरुल्लसति द्वयोः" ಅಂದರೆ, "ಉಪಮಾನ ಉಪಮೇಯಗಳೆರಡಕ್ಕೂ ರಮಣೀಯವಾದ ಸಾದೃಶ್ಯವು ಎಲ್ಲಿ ಶೋಭಿಸುತ್ತಿರುವುದೋ ಅಲ್ಲಿ ಉಪಮಾಲಂಕಾರ"ವಾಗುತ್ತದೆ. ಇಲ್ಲಿ ಪೂರ್ಣೋಪಮಾಲಂಕಾರವಿದೆ. कृष्ण ಎಂಬುದು ಉಪಮಾನ, कृष्णप्रभु ಎಂಬುದು ಉಪಮೇಯ, यदुवंशमण्डनम् ಎಂಬುವುದು ಉಭಯತ್ರ ಸಾಧಾರಣಧರ್ಮ, इव ಉಪಮಾವಾಚಕ-ಶಬ್ದವಾಗಿದೆ. विजयत्व, उत्सव ಪದಗಳು ಶ್ಲೇಷೆಯಿಂದ ಉಪಮಾನಕ್ಕೂ ಉಪಮೇಯಕ್ಕೂ ಅನ್ವಯವಾಗುತ್ತವೆ.

ಈ ಶ್ಲೋಕವು ವೈತಾಲೀಯಛಂದಸ್ಸಿನಲ್ಲಿದೆ.]

3. ಶ್ರೀಕೃಷ್ಣಕ್ಷಿತಿಭೃನ್ನಿಶಾಕರಯಶೋಜ್ಯೋತ್ಸ್ನಾ ತಿರೋಧಾಪಯ-
ತ್ಯೂರ್ಣೇಂದೋಸ್ಸುಷಮಾಂ ನ ತಾಂ ಸ್ಥಗಯಿತುಂ ಪ್ರದ್ಯೋತನೋಽಪಿ ಕ್ಷಮಃ|
ಇತ್ಥಂ ಭೂತಗಣಾಪ್ಯಸೌ ವಿತನುತೇ ತದ್ವೈರಿಣಾಂ ದುರ್ಯಶೋ-
ಧ್ವಾಂತಾನಾಂ ಪಟಲೈಸ್ಸಷ್ಟೈವ ವಸತಿಂ ಲೋಕೇಷು ಚಿತ್ರಂ ತ್ವಿದಮ್ ||

ಭಾವಾರ್ಥ : *ಶ್ರೀಕೃಷ್ಣಭೂಪಾಲನೆಂಬ ಚಂದ್ರನ, ಯಶಸ್ಸೆಂಬ ಬೆಳದಿಂಗಳು, ಪೂರ್ಣಚಂದ್ರನನ್ನೂ ಕೂಡ ಮುಚ್ಚಿಹಾಕಿತು. ಅಂತಹ ಕೃಷ್ಣರಾಜನೆಂಬ ಚಂದ್ರನ ಯಶಸ್ಸೆಂಬ ಬೆಳದಿಂಗಳನ್ನು ಮುಚ್ಚಲು ಸೂರ್ಯನೂ ಸಮರ್ಥನಾಗಲಿಲ್ಲ. ಹೀಗೆ ಚಂದ್ರನ ಶೀತಲತ್ವವನ್ನು ಮತ್ತು ಸೂರ್ಯನ*

ತೇಜಸ್ಸನ್ನೂ ತಿರಸ್ಕರಿಸುವ, ರಾಜನ ಯಶಸ್ಸೆಂಬ (ಶೀತಲತ್ವ ಮತ್ತು ತೇಜಸ್ಸು ಎರಡೂ) ಗುಣಗಳೂ ಶತ್ರುಗಳ ಅಪಕೀರ್ತಿ ಎಂಬ ಕತ್ತಲೆಯ ಸಮೂಹಗಳ ಜೊತೆಯಲ್ಲಿಯೇ ವಾಸಮಾಡುತ್ತವೆ. ಇದು ಆಶ್ಚರ್ಯಕರವೇ ಸರಿ.(ಇದು ವಿಚಿತ್ರವೇ ಸರಿ).

[ವಿಶೇಷಾಂಶ : ಸೂರ್ಯನ ತೇಜಸ್ಸಿದ್ದಾಗ ಚಂದ್ರನ ಬೆಳದಿಂಗಳು ಇರುವುದಿಲ್ಲ, ಚಂದ್ರನ ಬೆಳದಿಂಗಳಿರುವಾಗ ಸೂರ್ಯನ ತೇಜಸ್ಸಿರುವುದಿಲ್ಲ ಎನ್ನುವುದು ಲೋಕರೂಢಿ. ಆದರೆ ರಾಜನ ಯಶಸ್ಸೆಂಬ ಬೆಳದಿಂಗಳು ಮತ್ತು ತೇಜಸ್ಸು ಲೋಕದಲ್ಲಿದೆ. ಜೊತೆಯಲ್ಲಿಯೇ ಶತ್ರುಗಳ ಅಪಯಶಸ್ಸು ಎಂಬ ಕತ್ತಲೆ ಕೂಡ ಲೋಕದಲ್ಲಿದೆ. ಇವು ಎರಡೂ ಏಕತ್ರ ವಾಸಿಸುತ್ತಿವೆಯೆಂದರ್ಥ. ಇವುಗಳೆರಡೂ (ರಾಜನ ಯಶಸ್ಸು ಮತ್ತು ಶತ್ರುಗಳ ಅಪಯಶಸ್ಸು) ಒಂದೇ ಕಡೆ ಇರುವುದು ಆಶ್ಚರ್ಯಕರವಾದದ್ದು ಎಂದು ತಾತ್ಪರ್ಯ.

ಪ್ರಸ್ತುತ ಶ್ಲೋಕದಲ್ಲಿ ವಿರೋಧಾಭಾಸಾಲಂಕಾರವಿದೆ. ಚಂದ್ರಾಲೋಕ-ಕಾರನ ರೀತ್ಯಾ ಇದರ ಲಕ್ಷಣ ಹೀಗಿದೆ - "श्लेषादिभूर्विरोधश्चेद् विरोधा-भासता मता" ಅಂದರೆ, "ವಿರೋಧವು ಒಂದು ಅರ್ಥದಿಂದ ಕೇವಲ ತೋರಿಕೆಗಾಗಿ ಕಂಡುಬಂದು ಕೊನೆಗೆ ಬೇರೊಂದು ಅರ್ಥದಿಂದ ಪರಿಹಾರ-ವಾಗುವುದಾದರೆ ಅದು ವಿರೋಧಾಭಾಸ"ವೆನಿಸುತ್ತದೆ. ಇಲ್ಲಿ ಕತ್ತಲೆಯ ಜೊತೆ ತೇಜಸ್ಸು ಇದೆ ಎನ್ನುವುದು ವಿರೋಧ. ಈ ವಿರೋಧವೆಂಬುದು ರಾಜನ ಯಶಸ್ಸು ಎಂಬುದು ಶತ್ರುಗಳ ಅಪಯಶಸ್ಸು ಎಂಬ ಕತ್ತಲೆಗಳ ಸಮೂಹದೊಡನೆ ರಾರಾಜಿಸುತ್ತಿದೆ ಎಂದು ಅರ್ಥ ಮಾಡಿದಾಗ ಪರಿಹಾರವಾಗುತ್ತದೆ. ಆದುದರಿಂದ ಇಲ್ಲಿ ವಿರೋಧಾಭಾಸಾಲಂಕಾರ.

ಇಷ್ಟೇ ಅಲ್ಲದೇ, ಈ ಶ್ಲೋಕದಲ್ಲಿ ವ್ಯತಿರೇಕಾಲಂಕಾರವನ್ನೂ ಕೂಡ

ಹೇಳಬಹುದು. ಅದರ ಲಕ್ಷಣ - "व्यतिरेको विशेषश्चेदुपमानोपमेययोः" "ಉಪಮಾನ ಮತ್ತು ಉಪಮೇಯಗಳಲ್ಲಿ ಉತ್ಕರ್ಷತೆಯನ್ನು ಹೇಳಿದರೆ ವ್ಯತಿರೇಕಾಲಂಕಾರ"ವಾಗುತ್ತದೆ. ಇಲ್ಲಿ ರಾಜನ ಕೀರ್ತಿಯನ್ನು ಬೆಳದಿಂಗಳಿಗೆ ಹೋಲಿಸಲಾಗಿದೆ. ಬೆಳದಿಂಗಳು ರಾತ್ರಿಯಲ್ಲಿ ಮಾತ್ರ ಬರುತ್ತದೆ. ಆದರೆ ರಾಜನ ಯಶಸ್ಸು ಹಗಲು-ರಾತ್ರಿ ಎಲ್ಲಾ ಕಾಲದಲ್ಲೂ ಇರುತ್ತದೆ. ಆದುದರಿಂದ, ನಿಜವಾದ ಬೆಳದಿಂಗಳನ್ನೂ ಸಹ ಈ ಕೀರ್ತಿ ಎಂಬ ಬೆಳದಿಂಗಳು ಮೀರಿಸಿದೆ ಎಂದು ಉಪಮೇಯಾಧಿಕ್ಯವನ್ನು ಹೇಳಿರುವುದರಿಂದ ಇಲ್ಲಿ ವ್ಯತಿರೇಕಾಲಂಕಾರ.

ಈ ಶ್ಲೋಕ ಶಾರ್ದೂಲವಿಕ್ರೀಡಿತವೃತ್ತದಲ್ಲಿದೆ.]

4. ಶ್ರೀಕೃಷ್ಣಾವನಿವಲ್ಲಭಸ್ಯ ಸದೃಶಂ ವೀಕ್ಷೇಯ ಸರ್ವೈರ್ಗುಣೈ-
ರಿತ್ಯಾಲೋಚ್ಯ ಸಮಸ್ತವಿಷ್ಟಪಗತೌ ಕೀರ್ತಿಸ್ತದೀಯೋದ್ಯತಾ |
ತಾಂ ಸ್ವರ್ಗೇ ಧಿಷಣೋಽಭ್ಯವೋಚತ ವೃಥಾ ಮಾ ಸ್ಮ ಶ್ರಮೀರಿತ್ಯಥೋ
ಪಾತಾಳೇ ಫಣಿರಾಣ್ಣತಾವಗಣಯತ್ಸಾ ಭ್ರಾಂತ್ಯದೃಷ್ಟಾಶ್ರಯಾತ್ ||

ಭಾವಾರ್ಥ : *ಶ್ರೀಕೃಷ್ಣ ಭೂಪಾಲನ ಕೀರ್ತಿಯು 'ರಾಜನ ಸಕಲಗುಣಗಳೂ (ನನಗೆ) ಸದೃಶವಾದುದೇ?' ಎಂದು ನೋಡಲು ಬಯಸಿ, ಸಮಸ್ತ (ಹದಿನಾಲ್ಕು) ಲೋಕಗಳಿಗೂ ಸಂಚಾರ ಹೊರಟಿತು (ಹದಿನಾಲ್ಕು ಲೋಕಗಳಲ್ಲಿಯೂ ರಾಜನ ಕೀರ್ತಿ ಹರಡಿತ್ತು ಎಂದು ತಾತ್ಪರ್ಯ). ಸ್ವರ್ಗದಲ್ಲಿ ಬೃಹಸ್ಪತಿ ಮತ್ತು ಪಾತಾಳಲೋಕದಲ್ಲಿ ಸರ್ಪರಾಜರು ಆ ಕೀರ್ತಿಯನ್ನು ನೋಡಿ 'ವ್ಯರ್ಥವಾಗಿ ಆಯಾಸ ಪಡಬೇಡ (ನಿನಗೆ ಸದೃಶವಾದುದು ಎಲ್ಲಿಯೂ ಇಲ್ಲ, ನೀನು ಇಷ್ಟಪಟ್ಟ, ನಿನಗೆ ಸದೃಶರಾದವರ ದರ್ಶನವನ್ನು ಹೊಂದಲು ಸಾಧ್ಯವಿಲ್ಲ.) ಎಂದು ಉತ್ತರವನ್ನು ನೀಡಿದರು. ಆಗ ಕೀರ್ತಿಯು ಬೃಹಸ್ಪತಿ, ಫಣಿರಾಜರ ಆಶ್ರಯ ತನಗೆ ದೊರಕದ ಕಾರಣ ಅವರಿಬ್ಬರೂ (ಬೃಹಸ್ಪತಿ ಮತ್ತು ಸರ್ಪರಾಜ)*

ತನಗೆ ಆಪ್ತರಲ್ಲ ಮತ್ತು ತನ್ನ ಭ್ರಮೆ ನಿರಸನವಾಯಿತು ಎಂದು ತಿಳಿಯಿತು. ಅಂದರೆ ಕೃಷ್ಣಭೂಪಾಲನ ಕೀರ್ತಿಗೆ ಸದೃಶವಾದ ಕೀರ್ತಿ ಸ್ವರ್ಗಲೋಕ ಪಾತಾಳಲೋಕಗಳಲ್ಲೂ ಇಲ್ಲ ಎಂದು ಅಭಿಪ್ರಾಯ.

[ವಿಶೇಷಾಂಶ : ಪ್ರಸ್ತುತ ಶ್ಲೋಕವು ಅತಿಶಯೋಕ್ತಿ ಅಲಂಕಾರದ ನಾಲ್ಕನೆಯ ಭೇದವಾದ ಸಂಬಂಧಾತಿಶಯೋಕ್ತಿ ಅಲಂಕಾರವಾಗಿದೆ. ಇದರ ಲಕ್ಷಣ ಕುವಲಯಾನಂದ ರೀತ್ಯಾ ಹೀಗಿದೆ - "सम्बन्धातिशयोक्तिः स्यादयोगे योगकल्पनम्" ಅಂದರೆ "ಎರಡು ವಸ್ತುಗಳಿಗೆ ಪರಸ್ಪರ ಸಂಬಂಧವಿಲ್ಲದಿದ್ದರೂ ಸಂಬಂಧವನ್ನು ಕಲ್ಪಿಸುವುದೇ ಸಂಬಂಧಾತಿಶಯೋಕ್ತ್ಯಲಂಕಾರ"ವೆನಿಸುವುದು.

ಬೇರೆ ಬೇರೆ ಲೋಕಗಳ ಆಶ್ರಯವನ್ನು ಬಯಸಿ ಕೀರ್ತಿಯ ತಿರುಗುವಿಕೆಗೆ ಮತ್ತು ಬೃಹಸ್ಪತಿ ಹಾಗೂ ಶೇಷರ ಮಾತುಗಳಿಗೂ ಸಂಬಂಧರೂಪ ಅತಿಶಯೋಕ್ತಿ ಇದೆ. ಕೃಷ್ಣರಾಜನ ಕೀರ್ತಿ ಸ್ವರ್ಗ, ಪಾತಾಳಲೋಕಗಳನ್ನೆಲ್ಲಾ ಸುತ್ತಿತು. ಆದರೆ ಆಶ್ರಯ ದೊರಕಲಿಲ್ಲ ಎಂಬ ಉಕ್ತಿಯಿಂದ ತಿಳಿಯಲ್ಪಡುವ ಇತರ ಲೋಕಗಳಲ್ಲಿ ಕೃಷ್ಣರಾಜನ ಆ ರೀತಿಯ ಗುಣಗಳ ಅಭಾವ ಭಾವದಿಂದ ಅತಿಶಯೋಕ್ತಿ ಇಲ್ಲಿ ಧ್ವನಿತವಾಗುತ್ತಿದೆ.

ಸಂಬಂಧಾತಿಶಯೋಕ್ತಿಯಿಂದ ಆ ಕೀರ್ತಿ ಹದಿನಾಲ್ಕು ಲೋಕಗಳನ್ನು ಸಂಚಾರ ಮಾಡಿತು ಎಂಬ ವಸ್ತುವು ವ್ಯಂಗ್ಯವಾಗಿ ತೋರುತ್ತಿದೆ. ಇಲ್ಲಿ ಅರ್ಥವಿಶೇಷವೇ ವಸ್ತು. ಇಲ್ಲಿ ವಸ್ತು ಮತ್ತು ಅಲಂಕಾರ ಎರಡೂ ವ್ಯಂಗ್ಯವಾಗಿ ತೋರುತ್ತಿವೆ. ಎರಡೂ ನೇರವಾಗಿ ಶಬ್ದದಿಂದ ಗೋಚರಿಸುತ್ತಿಲ್ಲ. ಇಲ್ಲಿ ಅಲಂಕಾರದಿಂದ ವಸ್ತುಧ್ವನಿತವಾಗಿದೆ. ಆದುದರಿಂದ ಇದು ವಸ್ತುಅಲಂಕಾರ ಧ್ವನಿಗೆ ಉದಾಹರಣೆಯಾಗಿದೆ.

ಈ ಶ್ಲೋಕವೂ ಸಹ ಶಾರ್ದೂಲವಿಕ್ರೀಡಿತವೃತ್ತದಲ್ಲಿದೆ.]

5. ಆರುಹ್ಯ ಮಾಹಾರಜತೀಂ ತುಲಾಂ ತೇ
ಕೃಷ್ಣಪ್ರಭೋ ಕೀರ್ತಿರಪಾಪ ಸಾಮ್ಯಮ್ |
ರುಷ್ಟೇ ತ್ವಯಿ ತ್ರಸ್ತವತೀ ಜಗತ್ಸು
ಭ್ರಾಮ್ಯತ್ಯಪಂತಂ ಸಮುಪಾಪ್ತುಕಾಮಾ ||

ಭಾವಾರ್ಥ : ಎಲೈ ಕೃಷ್ಣರಾಜನೇ, ನಿನ್ನ ಕೀರ್ತಿಯು ಚಿನ್ನ ಮತ್ತು ಬೆಳ್ಳಿ ಎರಡೂ ತಕ್ಕಡಿಗಳ ಮೇಲೆ ಹೋಗಿ ಕುಳಿತಿತು. ಇದರಿಂದ ನೀನು ಕೋಪಗೊಂಡೆಯೆಂದು ಭಾವಿಸಿ ಆ ಕೀರ್ತಿಯು ಹೆದರಿಕೊಂಡು, ತನ್ನನ್ನು ಕಾಪಾಡುವವನನ್ನು (ರಕ್ಷಕನನ್ನು) ಹೊಂದಬೇಕೆಂಬ ಇಚ್ಛೆಯಿಂದ ಎಲ್ಲಾ ಲೋಕಗಳಲ್ಲೂ ಸುತ್ತಾಡುತ್ತಾ ಇದೆ. ಶ್ರೀಕೃಷ್ಣರಾಜನ ಕೀರ್ತಿಯು ಚತುರ್ದಶ ಲೋಕಗಳಲ್ಲೂ ಹರಡಿತು ಎಂಬುದು ತಾತ್ಪರ್ಯ.

[ವಿಶೇಷಾಂಶ : ಇಲ್ಲಿ ಉತ್ಪ್ರೇಕ್ಷಾಲಂಕಾರವಿದೆ. ಇದನ್ನು ಕುವಲಯಾನಂದದಲ್ಲಿ ಅಪ್ಪಯ್ಯದೀಕ್ಷಿತರು ಹೀಗೆ ಹೇಳಿದ್ದಾರೆ -

सम्भावना स्यादुत्प्रेक्षा वस्तुहेतुफलात्मना ।
उक्तानुक्तास्पदाद्यत्र सिद्धाऽसिद्धास्पदे परे ।।

"ಒಂದು ವಸ್ತುವಿನಲ್ಲಿರುವ ಧರ್ಮದ ಸಂಬಂಧವನ್ನು ನಿಮಿತ್ತವಾಗಿಟ್ಟುಕೊಂಡು ಬೇರೊಂದು ವಸ್ತುವಿನಲ್ಲಿ ಆ ವಸ್ತುವಿನ ತಾದಾತ್ಮ್ಯವನ್ನು ಸಂಭಾವಿಸುವುದು (ಊಹಿಸುವುದು) ಉತ್ಪ್ರೇಕ್ಷೆ. ಅದಕ್ಕಿಂತ ಭಿನ್ನವಾದ ಅಥವಾ ಆ ಧರ್ಮದ ಅಭಾವವಿರುವ ಪದಾರ್ಥದಲ್ಲಿ ರಮಣೀಯತೆಯನ್ನು ಉಂಟುಮಾಡಲಿಕ್ಕಾಗಿ ಮತ್ತೊಂದರಲ್ಲಿರುವ ಆ ಧರ್ಮವುಳ್ಳ ವಸ್ತುವನ್ನು ಸಮಾನವಾಗಿ ಸಂಭಾವನೆ ಮಾಡುವುದೇ ಉತ್ಪ್ರೇಕ್ಷೆ. ಇದು ಸಿದ್ಧವಿಷಯ, ಅಸಿದ್ಧವಿಷಯಗಳನ್ನಾಧರಿಸಿ ವಸ್ತು, ಹೇತು ಮತ್ತು ಫಲ ಎಂಬುದಾಗಿ ಮೂರು ವಿಧ."

ಪ್ರಸ್ತುತ ಶ್ಲೋಕದಲ್ಲಿ ಅಸಿದ್ಧವಿಷಯೋತ್ಪ್ರೇಕ್ಷಾಲಂಕಾರವಿದೆ. ಕೀರ್ತಿ ಎಂಬುವುದು ಎಲ್ಲೆಡೆ ಹರಡುವುದು ಸ್ವಾಭಾವಿಕ. ಆದರೆ ಪ್ರಸ್ತುತ ಕೀರ್ತಿ ಎಂಬುವುದು ತನಗೆ ಒಬ್ಬ ರಕ್ಷಕ ಬೇಕು ಎಂದು ಸುತ್ತಾಡುತ್ತಿದೆ. ಅಚೇತನವಾದ ಕೀರ್ತಿಯು ತನಗೆ ರಕ್ಷಕನೊಬ್ಬ ಬೇಕು ಎಂದು ಕೀರ್ತಿಯಲ್ಲಿಲ್ಲದ ರಕ್ಷಕಾಪೇಕ್ಷಧರ್ಮವನ್ನು ಭಾವಿಸುತ್ತಿರುವಂತೆ ಸಂಭಾವನೆ ಮಾಡಿರುವುದರಿಂದ ಇಲ್ಲಿ ಉತ್ಪ್ರೇಕ್ಷಾಲಂಕಾರ. ರಾಜನ ಕೋಪಕ್ಕೆ ಹೆದರಿ ಕೀರ್ತಿಯು ಓಡಿ ಹೋಗುವುದೆಂಬುದು ಅಸಿದ್ಧವಾದ ವಿಷಯ. ಲೋಕದಲ್ಲಿ ಇದು ಹೊಂದುವುದಿಲ್ಲ. ಆದ್ದರಿಂದ ಇಲ್ಲಿ ಅಸಿದ್ಧವಿಷಯೋತ್ಪ್ರೇಕ್ಷಾಲಂಕಾರ.

ಕೀರ್ತಿಯ ಸಹಜವಾದ ತಿರುಗಾಡುವಿಕೆಗೆ ಉದ್ದೇಶ್ಯವಾಗಿರದ ರಕ್ಷಕ-ರಿಗಾಗಿ ಹುಡುಕಾಡುತ್ತ ತಿರುಗಿತು ಎಂಬುದನ್ನು ಫಲವಾಗಿ ಸಂಭಾವನೆ ಮಾಡಲಾಗಿದೆ. ರಕ್ಷಕರನ್ನರಸುತ್ತಾ ಕೀರ್ತಿ ಅಲೆಯಿತು ಎಂಬುದು ಅಸಿದ್ಧ-ವಿಷಯಫಲೋತ್ಪ್ರೇಕ್ಷಾ.

ಇಲ್ಲಿ ಕಾವ್ಯಲಿಂಗಾಲಂಕಾರವೂ ಸಂಕರವಾಗಿದೆ. ಕುವಲಯಾನಂದರೀತ್ಯಾ ಇದರ ಲಕ್ಷಣ ಹೀಗಿದೆ - "समर्थनीयस्यार्थस्य काव्यलिङ्गं समर्थनम्" ಅಂದರೆ "ಒಂದು ಕಡೆ ಒಂದು ಅಂಶವನ್ನು ತಿಳಿಸಿ ಅದನ್ನು ಸಮರ್ಥಿಸಲಿಕ್ಕಾಗಿ ಬೇರೊಂದು ಪದವನ್ನೋ ಅಥವಾ ವಾಕ್ಯವನ್ನೋ ಪ್ರಯೋಗಿಸುವುದೇ ಕಾವ್ಯಲಿಂಗ"-ವೆನಿಸುತ್ತದೆ.

ಪ್ರಸ್ತುತ ಶ್ಲೋಕದಲ್ಲಿ महारजततुलाधिरोहण ಎಂಬುದರಿಂದ ಕಾವ್ಯಲಿಂಗಾಲಂಕಾರವನ್ನು ಹೇಳಬಹುದು. ಇಲ್ಲಿ 'महारजत' ಎಂಬ ಪದವನ್ನು ಚಿನ್ನ-ಬೆಳ್ಳಿ, ಎರಡಕ್ಕೂ ಅಭೇದಾರ್ಥದಲ್ಲಿ ಬಳಸಿದ್ದಾನೆ. 'महारजत' ಎಂಬ ಪದವನ್ನು ಹೇಳಿದಾಗ ವ್ಯತ್ಯಾಸ ತಿಳಿಯುವುದಿಲ್ಲ. 'महारजत' ಎಂದು

ಸಮಸ್ತವಾಗಿ ಹೇಳಿದಾಗ ಚಿನ್ನ ಎಂದಾಗುತ್ತದೆ. 'महत् रजतम्' ಎಂದು ಬಿಡಿಸಿ ಹೇಳಿದಾಗ ಬೆಳ್ಳಿ ಎಂದರ್ಥವಾಗುತ್ತದೆ. ಸಭಂಗಶ್ಲೇಷ-ಅಭಂಗಶ್ಲೇಷದಂತೆ ಇಲ್ಲಿ ಒಂದೇ ಪದದಲ್ಲಿ ಎರಡನ್ನೂ ಅಭೇದವಾಗಿ ಹೇಳಿದ್ದಾನೆ. ಒಂದೇ ಪದದಲ್ಲಿ ಎರಡು ಅರ್ಥಗಳನ್ನು ಬರುವ ರೀತಿಯಲ್ಲಿ ಆನುಪೂರ್ವಿ ಹೇಳಿರುವ ಕಾರಣ महारजततुलाधिरोहणस्य ಎಂಬುದು ಒಂದೇ ಪದ. ಇದರ ಪ್ರಕಾರ 'ಮಹಾರಜತ'ದಿಂದ ಮಾಡಿದ ತುಲಾಧಿರೋಹಣ ಮತ್ತು 'ಮಹದ್ರಜತ'ದಿಂದ ಮಾಡಿದ ತುಲಾಧಿರೋಹಣವೂ ಆಯಿತು. ಕೀರ್ತಿಯ ತಿರುಗಾಡುವಿಕೆ ಇಲ್ಲಿ ಸಮರ್ಥನೀಯವಾದ ವಿಷಯ. ಅದಕ್ಕೆ ರಾಜನ ಕೋಪ ಕಾರಣ. ಆ ಕೋಪವನ್ನು ಸಮರ್ಥಿಸಲು तुलाधिरोहण ಕಾರಣ ಎಂದು ಹೇಳುತ್ತಿರು-ವುದರಿಂದ ಇಲ್ಲಿ ಕಾವ್ಯಲಿಂಗ ಅಲಂಕಾರ.

ಈ ಶ್ಲೋಕದಲ್ಲಿ ಉತ್ಪ್ರೇಕ್ಷಾಲಂಕಾರ ಮತ್ತು ಕಾವ್ಯಲಿಂಗಾಲಂಕಾರಗಳೇ ಅಲ್ಲದೆ ಅತಿಶಯೋಕ್ತ್ಯಲಂಕಾರ ಮತ್ತು ಉಪಮಾಲಂಕಾರಗಳ ಸಂಕರವೂ ಇದೆ.

ಕೀರ್ತಿಗೆ ಸಂಬಂಧಿಸದ ಹೆದರಿಕೆ(त्रास)ಯನ್ನು ಅದಕ್ಕೆ ಸಂಬಂಧಿಸಿದುದಾಗಿ ಹೇಳಿರುವುದರಿಂದ ಅತಿಶಯೋಕ್ತಿ ಅಲಂಕಾರವೂ ಇಲ್ಲಿದೆ.

ವ್ಯಾಖ್ಯಾನಕಾರನು ಈ ಶ್ಲೋಕವನ್ನು 'ಉಪಜಾತಿ' ವೃತ್ತದಲ್ಲಿದೆ ಎಂದು ಉಲ್ಲೇಖಿಸಿದ್ದಾನೆ. ಆದರೆ ಇದು 'ಇಂದ್ರವಜ್ರಾ' ವೃತ್ತದಲ್ಲಿದೆ.]

೬. ಇಂದ್ರೋऽಪಿ ಕೀರ್ತಿಂ ಮಲಿನಾಂ ವಿತೇನೇ
ಜಗತ್ಪ್ರಹರ್ಷೈರ್ಬತ ಭೂರಿವರ್ಷೈಃ |
ಶ್ರೀಕೃಷ್ಣರಾಜಸ್ತು ವಿಶುದ್ಧಕೀರ್ತಿಂ
ಜಗತ್ಪ್ರಹರ್ಷೈರ್ಬತ ಭೂರಿವರ್ಷೈಃ ||

ಭಾವಾರ್ಥ : *ಇಂದ್ರನು ಲೋಕಕ್ಕೆ ಸಂತೋಷವನ್ನುಂಟುಮಾಡುವುದಕ್ಕಾಗಿ*

ಅಧಿಕವಾದ ಮಳೆಯನ್ನು ಸುರಿಸಿದ ಕಾರಣ ಕೀರ್ತಿಯನ್ನು ಮಲಿನ (ಅಂದರೆ, ಕೆಸರಿನಿಂದ ಕೂಡಿರುವುದು) ಎಂದು ಭಾವಿಸಿಕೊಂಡನು. ಶ್ರೀಕೃಷ್ಣರಾಜನಾದರೋ ಅಧಿಕವಾದ ಚಿನ್ನವೆಂಬ ಮಳೆಗಳ ದಾನ ಮಾಡುವುದರ ಮೂಲಕವಾಗಿ ವಿಶುದ್ಧವಾದ ಕೀರ್ತಿಯನ್ನು ಪಡೆದನು. ಅಂದರೆ, ಅಧಿಕವಾದ ಸ್ವರ್ಣಾದಿಗಳನ್ನು ದಾನ ಮಾಡುವುದರ ಮೂಲಕ ತನ್ನ ಕೀರ್ತಿಯನ್ನು ವಿಶುದ್ಧವಾದುದೆಂದು ಭಾವಿಸಿಕೊಂಡನು. ರಾಜನು ದಾನಧರ್ಮಾದಿಗಳನ್ನು ಮಾಡಿದ್ದರಿಂದ ಜನರು ಅವನನ್ನು ಹೊಗಳಲು ಪ್ರಾರಂಭಿಸಿದರು. ಆದ್ದರಿಂದ ಕೀರ್ತಿಯು ವಿಶುದ್ಧ-ವಾಯಿತು ಎಂದು ತಾತ್ಪರ್ಯ.

[ವಿಶೇಷಾಂಶ : ಪ್ರಸ್ತುತ ಶ್ಲೋಕದಲ್ಲಿ ವ್ಯಾಘಾತಾಲಂಕಾರವಿದೆ. ಕುವಲಯಾನಂದದ ಪ್ರಕಾರ "स्याद्व्याघातोऽन्यथाकारि तथाकारि क्रियेत चेत्" ಎಂಬುದಾಗಿ ಲಕ್ಷಣ. ಅಂದರೆ, "ಒಂದು ಕಾರ್ಯಕ್ಕೆ ಸಾಧನವೆಂದು ಲೋಕದಲ್ಲಿ ಪ್ರಸಿದ್ಧವಾದುದನ್ನು ವಿರುದ್ಧವಾದ ಕಾರ್ಯಕ್ಕೆ ಸಾಧನವಾಗಿ ಉಪಯೋಗಿಸುವುದೇ ವ್ಯಾಘಾತಾಲಂಕಾರ."

ಮಲಿನವಾದ ಕೀರ್ತಿಯನ್ನು ಉಂಟುಮಾಡುವಂತಹ ಅಧಿಕವಾದ ಮಳೆಗೆ ಕೃಷ್ಣರಾಜನು ತನ್ನ ವಿಶುದ್ಧವಾದ ಕೀರ್ತಿಯನ್ನು ಮಾಡಿದನು ಎಂಬ ಕಾರಣದಿಂದ ವ್ಯಾಘಾತಾಲಂಕಾರ. ಅಂದರೆ, ಇಂದ್ರನು ಕೀರ್ತಿಯನ್ನು ಕಲುಷಿತವನ್ನಾಗಿ ಮಾಡಿದರೆ, ಇವನು ಕೀರ್ತಿಯನ್ನು ವಿಶುದ್ಧಿ ಮಾಡಿದನು. ಕಲುಷಿತವಾದ ಕೀರ್ತಿಯನ್ನು ನಿರ್ಮಲವನ್ನಾಗಿ ಮಾಡಿದನು. ಆದ್ದರಿಂದ ವ್ಯಾಘಾತಾಲಂಕಾರ. ಜೊತೆಗೆ ಇಲ್ಲಿ ಶಬ್ದಾಲಂಕಾರಗಳಲ್ಲೊಂದಾದ ಪಾದಾಭ್ಯಾಸಯಮಕ ಇದೆ. ಎರಡು ಮತ್ತು ನಾಲ್ಕನೇ ಪಾದಗಳು (ಜಗತ್ಪ್ರಪರ್ಷ್ಯೆರ್ಬತಭೂರಿವರ್ಷ್ಯೈಃ) ಪೂರ್ಣ ಪುನರಾವೃತ್ತವಾಗಿದೆ.

ಪ್ರಸ್ತುತ ಶ್ಲೋಕವು ಉಪಜಾತಿವೃತ್ತದಲ್ಲಿದೆ. ಈ ಶ್ಲೋಕದಲ್ಲಿ ಒಂದು ಮತ್ತು ಮೂರನೆಯ ಸಾಲುಗಳು ಇಂದ್ರವಜ್ರಾವೃತ್ತಗಳಲ್ಲೂ, ಎರಡನೆಯ ಮತ್ತು ನಾಲ್ಕನೆಯ ಪಾದಗಳು ಉಪೇಂದ್ರವಜ್ರಾ ವೃತ್ತಗಳಲ್ಲಿಯೂ ಇವೆ.]

7. ಸುರಾನಂದಾರ್ಥೇ ಸ್ವಂ ವ್ಯಯಿತವತಿ ವಿಪ್ರೇ ವಿತರಣ-
ಪ್ರಥಾ ಕಾ ನಾಮ ಸ್ಯಾದ್ಬಲಿರಸುರಹಂತ್ರೇ ತ್ರಿಭುವನಮ್ |
ದದೌ ರಕ್ಷನ್ನೂನಂ ನಿಜತನುಮಸೌ ಕೃಷ್ಣನೃಪತೇಃ
ಕಥಂ ವಿಂದೇತ್ಸಾಮ್ಯಂ ಸದಯಮಧನೇಷ್ವರ್ಪಿತವಸೋಃ ||

ಭಾವಾರ್ಥ : *ದೇವತೆಗಳ ಆನಂದಕ್ಕೋಸ್ಕರವಾಗಿ ದಧೀಚಿ ಮಹರ್ಷಿಗಳು ತಮ್ಮನ್ನು ತಾವು ಅರ್ಪಿಸಿಕೊಂಡರು. ಹಾಗೆಯೇ ಬಲಿಚಕ್ರವರ್ತಿಯು ತನ್ನ ದೇಹವನ್ನು ರಕ್ಷಿಸಿಕೊಳ್ಳುತ್ತಾ ದೈತ್ಯಾರಿಯಾದ ವಾಮನರೂಪಿ ವಿಷ್ಣುವಿಗೆ ಮೂರು ಲೋಕಗಳನ್ನು ಕೊಟ್ಟನು. ಇವರು ಮಾಡಿದ ದಾನಗಳು ವ್ಯರ್ಥ-ವಾಯಿತಲ್ಲ?! ಇವರು ಕೃಷ್ಣರಾಜನ ಜೊತೆ ಸಾಮ್ಯವನ್ನು ಹೇಗೆ ಹೊಂದುತ್ತಾರೆ? ಸಾಧ್ಯವಿಲ್ಲ. ಏಕೆಂದರೆ, ಕೃಷ್ಣರಾಜನು (ಆವಶ್ಯಕತೆಯಿರುವ) ಬಡವರಿಗೆ ಐಶ್ವರ್ಯಗಳನ್ನು ಕರುಣೆಯಿಂದ ದಾನ ಮಾಡಿದ್ದರಿಂದ ಇವನದೇ ಹೆಚ್ಚುಗಾರಿಕೆ.*

[ವಿಶೇಷಾಂಶ : ವೃತ್ರಾಸುರನ ಸಂಹಾರ ಮಾಡಲು ದೇವತೆಗಳು ದಧೀಚಿಯ ಬಳಿ ಹೋಗಿ ಲೋಕಕಲ್ಯಾಣಕ್ಕಾಗಿ ಅವರ ಬೆನ್ನುಮೂಳೆಯನ್ನು ಕೇಳಿದರಂತೆ. ಅದಕ್ಕಾಗಿ ಮಹರ್ಷಿಗಳು ತಮ್ಮ ಬೆನ್ನುಮೂಳೆಯನ್ನು ದಾನ ಮಾಡಿದರಂತೆ. ಇವರು ದಾನ ಮಾಡಿದ್ದು ಹೇಗೆ ಹೆಚ್ಚುಗಾರಿಕೆಯಾಯಿತು? ಇದರಿಂದ ದೇವತೆಗಳೆಲ್ಲ ಮದ್ಯಪಾನ ಮಾಡಿ, ಕೇಕೆ ಹಾಕಿ ಕುಣಿದಾಡಿ ಆನಂದಪಡುವುದಕ್ಕಾಗಿ ಕೊಟ್ಟ ಹಾಗಾಯಿತು. ಲೋಕದ ಜನರನ್ನು ಕಾಪಾಡಿದ

ಹಾಗಾಗಲಿಲ್ಲವಲ್ಲ. ಹಾಗೆಯೇ ಬಲಿಯೂ ಕೂಡ ಅಸುರರನ್ನು ಸಂಹಾರ ಮಾಡಿರುವವನಿಗೆ ದಾನ ಕೊಟ್ಟಿದ್ದಾನೆ. ಅಸುರರನ್ನು ಸಂಹಾರ ಮಾಡುವವನು ಸಾಮಾನ್ಯ ವ್ಯಕ್ತಿಯಾಗಲು ಸಾಧ್ಯವೇ? ಇಲ್ಲ. ಇಲ್ಲಿ ಎರಡೂ ಕಡೆಯೂ ದಾನವು ಸದ್ವಿನಿಯೋಗವಾಗಲಿಲ್ಲ. ಅಪಾತ್ರರಿಗೆ ದಾನವು ಕೊಟ್ಟಂತಾಯಿತು. ಇದ್ದವರಿಗೆ ದಾನ ಮಾಡಿದಂತಾಯಿತು. ಹಣವಿಲ್ಲದಂತಹವರಿಗೆ ಐಶ್ವರ್ಯವನ್ನು ದಾನ ಮಾಡಿದ್ದರಿಂದ ಕೃಷ್ಣರಾಜನ ಜೊತೆ ಅವರಿಬ್ಬರೂ ಸಾಮ್ಯವನ್ನು ಹೊಂದು-ವುದಿಲ್ಲ. ಅವರು ಇದ್ದವರಿಗೆ ದಾನ ಮಾಡಿದರು, ಆದರೆ ಇವನು ಇಲ್ಲದವರಿಗೆ ದಾನ ಮಾಡಿದನು ಎಂಬುದು ಹೆಚ್ಚುಗಾರಿಕೆ.

ಪ್ರಸ್ತುತ ಶ್ಲೋಕದಲ್ಲಿ ಕಾವ್ಯಲಿಂಗಾಲಂಕಾರವಿದೆ. (ನೋಡಿ ಶ್ಲೋಕ 5)

ಕೃಷ್ಣರಾಜನ ಸಾಮ್ಯವನ್ನು ಹೊಂದದೇ ಇರುವುದೇ ಸಮರ್ಥನೀಯ ವಿಷಯ. ಅದನ್ನು ಸಮರ್ಥನೆ ಮಾಡುವುದಕ್ಕೋಸ್ಕರ ಬಲಿಚಕ್ರವರ್ತಿ ತನ್ನ ಶರೀರವನ್ನು ದಾನ ಮಾಡಿ, ತನ್ನ ಕೀರ್ತಿಶರೀರವನ್ನು ರಕ್ಷಿಸಿಕೊಂಡ. ಆದರೆ ಕೃಷ್ಣರಾಜನು ಏನು ಮಾಡಿದನು? ಕರುಣೆಯಿಂದ ಕೂಡಿದವನಾಗಿ, ಏನೂ ಇಲ್ಲದವರಿಗೆ ಐಶ್ವರ್ಯವನ್ನು ದಾನ ಮಾಡಿದ್ದಾನೆ. ಅಲ್ಲಿ ಬಲಿಗೆ ಕರುಣೆಯಿರಲಿಲ್ಲ, ಭಯವಿತ್ತು. ಇಲ್ಲಿ ಕರುಣೆ, ದಯೆ ಎರಡೂ ಇವೆ ಎಂಬುದನ್ನು ಸಮರ್ಥಿಸುವುದರಿಂದ ಕಾವ್ಯಲಿಂಗ ಅಲಂಕಾರ.

ಇಲ್ಲಿ ಶಿಖರಿಣೀವೃತ್ತವಿದೆ.]

8. ಭೂಯೋ ಧನಾನಿ ವಿತರನ್ನಪಿ ಸಾಂಗರಾಜೋ
ಯಸ್ಸೂರ್ಯನಂದನ ಇತಿ ಪ್ರಥಯಾ ವಿಮುಕ್ತಃ |
ದಾನಪ್ರತೋಷಿತಸಮಸ್ತಬುಧಸ್ಯ ಕೃಷ್ಣ-
ಕ್ಷೋಣೀಪತೇಸ್ಸದೃಶತಾಂ ಸ ಕಥಂ ಭಜೇತ ||

6

ಭಾವಾರ್ಥ : *ಸೂರ್ಯನ ಮಗನಾಗಿರುವ ಕರ್ಣ ಬೇಕಾದಷ್ಟು ಸಂಪತ್ತುಗಳನ್ನು ದಾನ ಮಾಡಿದರೂ ಖ್ಯಾತಿಯಿಂದ ವಿಮುಕ್ತನಾದ (ಅಂದರೆ, ಪ್ರಸಿದ್ಧಿಯನ್ನು ಹೊಂದಲಿಲ್ಲ). ಆದರೆ ದಾನ ಮಾಡುವುದರ ಮೂಲಕವಾಗಿ ಬ್ರಾಹ್ಮಣರನ್ನು ಸಂತೋಷಗೊಳಿಸುವಂತಹ ಕೃಷ್ಣರಾಜನೊಂದಿಗೆ ಹೇಗೆ ತಾನೇ ಸಾದೃಶ್ಯವನ್ನು ಹೊಂದುತ್ತಾನೆ?*

[ವಿಶೇಷಾಂಶ : ಬೇಕಾದಷ್ಟು ಸಂಪತ್ತುಗಳನ್ನು ದಾನ ಮಾಡಿದರೂ ಕೂಡ ಕರ್ಣ ಸೂರ್ಯನನ್ದನಃ ಅಂದರೆ ಸೂರ್ಯಸ್ಯ ನನ್ದನಃ ಅಥವಾ ಸೂರ್ಯಂ ನನ್ದಯತಿ ಇತಿ ಸೂರ್ಯನನ್ದನಃ ಅಂದರೆ, ಸೂರ್ಯನಿಗೆ ಆನಂದವನ್ನುಂಟುಮಾಡುವವನು ಆದ. ಆದರೆ ಸೂರೀಣಾಮ್ ಅನನ್ದನಃ ಸೂರಿಗಳಿಗೆ ಅನಂದನನಾದ. 'ಸೂರಿ' ಎಂದರೆ 'ವಿದ್ವಾಂಸರು' ಎಂದರ್ಥ. ಆದರೆ ಕೃಷ್ಣರಾಜನು ವಿದ್ವಾಂಸರು ಕೇಳಿದ್ದನ್ನೆಲ್ಲ ದಾನ ಮಾಡಿದನಲ್ಲ? ಆದುದರಿಂದ ಕರ್ಣನು ಕೃಷ್ಣರಾಜನ ಜೊತೆ ಸಾಮ್ಯವನ್ನು ಹೊಂದಲಿಲ್ಲ ಎಂದು ಸಮರ್ಥಿಸುತ್ತಾನೆ.

ಇಲ್ಲಿ ಶ್ಲೇಷಾಲಂಕಾರ (ಲಕ್ಷಣಕ್ಕೆ ನೋಡಿ ಶ್ಲೋಕ 1) ಮತ್ತು ಕಾವ್ಯಲಿಂಗ ಅಲಂಕಾರ (ಲಕ್ಷಣಕ್ಕೆ ನೋಡಿ ಶ್ಲೋಕ 5)ಗಳು ಸಂಕರವಾಗಿವೆ.

ಪ್ರಸ್ತುತ ಕರ್ಣನಿಗೆ ಕೃಷ್ಣರಾಜನ ಜೊತೆ ಸಾಮ್ಯವನ್ನು ಹೊಂದುವುದಿಲ್ಲ ಎಂಬ ಸಮರ್ಥನೀಯವಾದ ಅರ್ಥವನ್ನು ಸಮರ್ಥನೆ ಮಾಡಿದ್ದರಿಂದ ಕಾವ್ಯ-ಲಿಂಗಾಲಂಕಾರ. ಸಾಮ್ಯ ಏಕೆ ಹೊಂದಲಿಲ್ಲ? ಎಂದರೆ ಒಂದನ್ನು ಸಮರ್ಥಿಸಲು ಇನ್ನೊಂದನ್ನು ಆಧಾರವಾಗಿ ಕೊಡಬೇಕು. ಇಲ್ಲಿ ಕರ್ಣನು ದಾನ ಮಾಡಿದ್ದು ವಿದ್ವಾಂಸರಿಗೆ ಸಂತೋಷ ಕೊಡಲಿಲ್ಲ. ಆದುದರಿಂದ ಸಾಮ್ಯ ಬರಲಿಲ್ಲ. ಇಲ್ಲಿ ಶ್ಲೇಷಮೂಲಕವಾಗಿ ಅಭಂಗಶ್ಲೇಷ ಮಾಡಿದರೆ ಸೂರೀಣಾಮ್ ಅನನ್ದನಃ ಸೂರ್ಯನನ್ದನಃ ಎಂಬುದಾಗಿ ಆಗುತ್ತದೆ. ಇಲ್ಲಿ ಸೂರಿ + ಅನನ್ದನಃ = ಸೂರ್ಯನನ್ದನಃ ಎಂದು

ಯಣ್‌ಸಂಧಿ ಮಾಡಬಹುದು. ಆಗ ಸೂರಿಗಳಿಗೆ (ವಿದ್ವಾಂಸರಿಗೆ) ಆನಂದನ ಎಂದಾಯ್ತು. ಆದ್ದರಿಂದ ಸಾಮ್ಯವಿಲ್ಲ. ಕೃಷ್ಣರಾಜರಿಗೆ ಇಲ್ಲಿ ಒಂದು ವಿಶೇಷಣವನ್ನು ಕೊಡಲಾಗಿದೆ दानप्रतोषितसमस्तबुधत्वरूप ಎಂಬುದಾಗಿ. ಇದರಿಂದ ಕೃಷ್ಣರಾಜರು ಏನು ಕೆಲಸ ಮಾಡಿದ್ದಾರೆ ಎಂಬುದು ಗೋಚರ-ವಾಗುತ್ತದೆ.

ಇಲ್ಲಿ ಶ್ಲೇಷಾಲಂಕಾರವಿಲ್ಲದೆ ಹೋದರೆ ಕಾವ್ಯಲಿಂಗಾಲಂಕಾರವನ್ನು ಸಮರ್ಥಿಸುವುದಕ್ಕೆ ಆಗುವುದಿಲ್ಲ. ಶ್ಲೇಷಾಲಂಕಾರವು ಕಾವ್ಯಲಿಂಗಾಲಂಕಾರಕ್ಕೆ ಆಲಂಬನವಾಗಿದೆ. ಇವೆರಡೂ ಅಲಂಕಾರಗಳು ಅಂಗ-ಅಂಗಿಭಾವದಿಂದ ಸಂಕರವಾಗಿವೆ.

ಇಲ್ಲಿ ವಸಂತತಿಲಕಾವೃತ್ತವಿದೆ.

ಈ ಶ್ಲೋಕದಲ್ಲಿ ಪೂರ್ವಾರ್ಧದ ಕೊನೆಯಲ್ಲಿ ಅಕಾರವು ವಿಸರ್ಗ-ಸಹಿತವಾಗಿರುವುದರಿಂದ (विश्रुताः ಎಂಬುದಾಗಿ) ಮತ್ತು ಉತ್ತರಾರ್ಧದ ಕೊನೆಯಲ್ಲಿ ಅಕಾರವು ಪಾದಾಂತವಾಗಿರುವುದರಿಂದ (भजेत ಎಂಬುದಾಗಿ) ನಿಯಮದಂತೆ ಗುರುವು ಬಂದಿದೆ. ಗುರು-ಲಘುಸಂಜ್ಞಾಲಕ್ಷಣವನ್ನು ಹೀಗೆ ಹೇಳಲಾಗಿದೆ -

सानुस्वारो विसर्गान्तो दीर्घो युक्तपरश्च यः ।
वा पादान्ते त्वसौ ग्वक्रो ज्ञेयोऽन्यो मात्रिको ऋजुः ॥

ಅನುಸ್ವಾರಯುಕ್ತವಾದ, ಕೊನೆಯಲ್ಲಿ ವಿಸರ್ಗವನ್ನು ಹೊಂದಿರುವ, ದೀರ್ಘವಾಗಿರುವ ಮತ್ತು ವಿಸರ್ಗವನ್ನು ಹೊಂದಿರುವಂತಹ ವರ್ಣಗಳು 'ಗುರು' ಸಂಜ್ಞೆಯನ್ನು ಹೊಂದುತ್ತವೆ. ಆದರೆ ಪಾದದ ಕೊನೆಯಲ್ಲಿರುವ ಲಘು ವರ್ಣಗಳು ವಿಕಲ್ಪವಾಗಿ ಗುರು ಸಂಜ್ಞೆಯನ್ನು ಹೊಂದುತ್ತವೆ.]

9. ಜೀಮೂತವಾಹನನೃಪೋ ನಿತರಾಂ ಪ್ರಯಸ್ಯ
ಕಂಚಿದ್ದ್ವಿಜಿಹ್ವಮವತಿ ಸ್ಮ ಜನವ್ಯಥಾದಮ್ |
ಸಾಧೂನ್ಬಹೂನ್ ಜನಹಿತೈಕರತಾನಖೇದಂ
ಶ್ರೀಕೃಷ್ಣರಾಡವತಿ ಸೋऽಸ್ಯ ಸಮಃ ಕಥಂ ಸ್ಯಾತ್ ||

ಭಾವಾರ್ಥ : *ಜೀಮೂತವಾಹನ ರಾಜನು ಜನರಿಗೆ ದುಃಖವನ್ನುಂಟು-ಮಾಡುವಂತಹ ಯಾವುದೋ ಒಂದು ಹಾವನ್ನು (ಬಹಳ ಪ್ರಯತ್ನ ಪೂರ್ವಕವಾಗಿ) ಅತ್ಯಂತ ದುಃಖವನ್ನು ಸಹಿಸಿಕೊಂಡು ಕಾಪಾಡಿದನು. ಆದರೆ ಕೃಷ್ಣರಾಜನು ಜನಹಿತವನ್ನೇ ಮುಖ್ಯ ಎಂದು ಭಾವಿಸುವುದರಲ್ಲಿ ಆಸಕ್ತರಾದ ಅನೇಕ ಸಜ್ಜನರನ್ನು ಯಾವ(ದುಃಖವನ್ನೂ ಅನುಭವಿಸದೆಯೇ) ತೊಂದರೆಯೂ ಇಲ್ಲದೆಯೇ ಕಾಪಾಡುತ್ತಾನೆ. ಅಂತಹ ಕೃಷ್ಣರಾಜನು ಜೀಮೂತವಾಹನನಿಗೆ ಹೇಗೆ ಸಮನಾಗುತ್ತಾನೆ?*

[ವಿಶೇಷಾಂಶ : ಜೀಮೂತವಾಹನನು ಜನರಿಗೆ ದುಃಖವನ್ನು ಕೊಡುತ್ತಿದ್ದಂತಹ ಒಂದು ಹಾವನ್ನು ಕಾಪಾಡಿದನು. ಹಾವಿನ ಸ್ವಭಾವವೇನು? ಕಚ್ಚುವುದು, ವಿಷ ಕಕ್ಕುವುದು. ಅಂತಹ ವಿಷಪೂರಿತವಾದ ಹಾವನ್ನು ಕಾಪಾಡುವುದರಲ್ಲೇನು ದೊಡ್ಡತನವಿದೆ? ಜೀಮೂತವಾಹನನು ಹಾವನ್ನು ಕಾಪಾಡಿ ಖೇದ(ದುಃಖ) ಸಹಿತನಾದ. ಅವನ ಶರೀರವನ್ನು ಗರುಡನು ಕುಟುಕಿ ಖೇದಗೊಳಿಸಿದನು. ಇಲ್ಲಿ ಸಖೇದವಾಯಿತು. ಆದರೆ ಕೃಷ್ಣರಾಜನು ಅನಾಯಾಸವಾಗಿ ಒಬ್ಬರಲ್ಲ ಅನೇಕ ಜನ ಸಜ್ಜನರನ್ನು, ಅದರಲ್ಲೂ ಜನಹಿತವನ್ನು ಮಾಡುತ್ತಿದ್ದ ಸಜ್ಜನರನ್ನು ಕಾಪಾಡಿದ್ದಾನೆ. ಜೀಮೂತವಾಹನನು ದುಷ್ಟನನ್ನು ಕಾಪಾಡಿದ ಹಾಗಾಯ್ತು, ಆದರೆ ಕೃಷ್ಣರಾಜನು ಸಜ್ಜನರನ್ನು ಕಾಪಾಡಿದನು ಆದ್ದರಿಂದ ಇಬ್ಬರಿಗೂ ಸಾಮ್ಯವಿಲ್ಲ.

ಪ್ರಸ್ತುತ ಶ್ಲೋಕದಲ್ಲಿ ಕಾವ್ಯಲಿಂಗಾಲಂಕಾರವನ್ನು ಹೇಳಲಾಗಿದೆ. (ಲಕ್ಷಣಕ್ಕೆ ನೋಡಿ ಶ್ಲೋಕ 5) ಇಲ್ಲಿ ದ್ವಿಜಿಹ್ವ ಎಂಬ ಪದದ ಮೂಲಕ ಅವನು ಒಳ್ಳೆಯವನು, ಇವನು ಕೆಟ್ಟವನು ಎಂದು ಶ್ಲೇಷದ ಮೂಲಕವಾಗಿ ಕಾವ್ಯ-ಲಿಂಗಾಲಂಕಾರವನ್ನು ಕವಿಯು ಹೇಳಿದ್ದಾನೆ.

ಶ್ಲೋಕ ಸಂಖ್ಯೆ 7, 8 ಮತ್ತು 9 - ಈ ಮೂರರಲ್ಲೂ ಎರಡು ವಾಕ್ಯಾರ್ಥಗಳನ್ನು ಹೇಳಿ ಸಮರ್ಥನೆ ಮಾಡಿದ್ದರಿಂದ ದಾನೋತ್ಕರ್ಷವನ್ನು ತೋರಿಸುತ್ತದೆ. ಇಲ್ಲಿ ಬೇರೆ ಬೇರೆ ಘಟನೆಗಳಿಂದ ಕೃಷ್ಣರಾಜನು ಮಾಡಿದ ಘಟನೆಗಳನ್ನು ವರ್ಣಿಸಿ ಶ್ಲೇಷೆಯ ಮೂಲಕವಾಗಿ ರಾಜನು ಮಾಡಿದ ದಾನವೇ ಉತ್ಕರ್ಷವೆಂದು ತೋರಿಸಿದ್ದರಿಂದ ವ್ಯತಿರೇಕಾಲಂಕಾರವೂ (ಲಕ್ಷಣಕ್ಕೆ ನೋಡಿ ಶ್ಲೋಕ 3) ವ್ಯಂಗ್ಯವಾಗಿ ತೋರುತ್ತದೆ.

ಈ ಶ್ಲೋಕ ವಸಂತತಿಲಕಾವೃತ್ತದಲ್ಲಿದೆ.]

10. ಉದಾರಾಸ್ಸಂತ್ಯೇಕೇ ತನುವಿಭವಭಾಜೋऽತಿವಿಭವಾಃ
ಪರೇದಿತ್ಸಾಶೂನ್ಯಾ ಅತಿವಿಭವದಿತ್ಸಾತಿಶಯಿನಃ |
ಕಠೋರವ್ಯಾಹಾರಾಃ ಕತಿಚಿದತಿದಿತ್ಸಾತಿವಿಭವೋ
ಮೃದೂಕ್ತಿಸ್ತ್ವಾಮೇವ ಶ್ರಯತಿ ಸತತಂ ಕೃಷ್ಣನೃಪತೇ ||

ಭಾವಾರ್ಥ : ಎಲೈ ಕೃಷ್ಣರಾಜನೇ, ಕೆಲವರು ಉದಾರಿಗಳಾಗಿರು-ವಂತಹವರು ಇದ್ದಾರೆ, ಅವರು ಸ್ವಲ್ಪ ಸಂಪತ್ತುಳ್ಳವರಾಗಿ ಅತ್ಯಂತ ಸಂತೋಷದಿಂದಿರುತ್ತಾರೆ. ಮತ್ತೆ ಕೆಲವರು ಇದ್ದಾರೆ, ಅವರು ದಾನ ಮಾಡಬೇಕೆಂಬ ಇಚ್ಛೆಯೂ ಇಲ್ಲದೆ ಶೂನ್ಯರಾಗಿದ್ದಾರೆ. ಅಂದರೆ, ಬೇಕಾದಷ್ಟು ಧನವಿದ್ದರೂ ದಾನ ಮಾಡಬೇಕೆಂಬ ಇಚ್ಛೆಯೂ ಇಲ್ಲದವರಾಗಿದ್ದಾರೆ. ಮತ್ತೆ ಕೆಲವರು ಬೇಕಾದಷ್ಟು ಸಂಪತ್ತನ್ನು ಕೊಡಬೇಕು ಎಂಬ ಇಚ್ಛೆಯುಳ್ಳ,

ಉತ್ಕರ್ಷರಾದವರೂ (ಅತಿಶಯಿತರಾದವರು) ಇದ್ದಾರೆ. ಕೆಲವರು ಕಠೋರವಾದ ಮಾತುಗಳನ್ನು ಆಡುವವರಿದ್ದಾರೆ. ಆದರೆ ನೀನು ಮಾತ್ರ ಯಾವಾಗಲೂ ಬೇಕಾದಷ್ಟು ಧನ-ಕನಕಾದಿಗಳನ್ನು ದಾನ ಮಾಡಿದರೂ ಮೃದುವಾದ ಮಾತುಗಳಿಂದ ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಒಳ್ಳೆಯ ಆಶಯದಿಂದ ದಾನ ಮಾಡುತ್ತಿದ್ದೀಯೆ.

[ವಿಶೇಷಾಂಶ : ತುಂಬಾ ಸಂಪತ್ತನ್ನು ಕೊಡಬೇಕು ಎಂಬ ಆಸಕ್ತಿ ಕೆಲವರಲ್ಲಿರುತ್ತದೆ. ತುಂಬಾ ಸಂಪತ್ತೂ ಇರುತ್ತದೆ, ಕೊಡಬೇಕು ಎಂಬ ಮನಸ್ಸೂ ಕೂಡ ಇರುತ್ತದೆ. ಆದರೆ ಇವರಿಗೆಲ್ಲ ತಮ್ಮನ್ನು ಎಲ್ಲರೂ ಹೊಗಳಬೇಕು ಎಂಬ ಆಸೆಯೂ ಇದೆ. ಆದರೆ ಕೃಷ್ಣರಾಜನಿಗಾದರೋ ಈ ರೀತಿ ಯಾವುದೂ ಇಲ್ಲ. ಅವನು ದುರಾಸೆಯಿಂದಲೋ, ಕೀರ್ತಿ ಬೇಕೆಂತಲೋ, ದಾನ ಮಾಡುತ್ತಿಲ್ಲ. ಆದರೆ ಒಳ್ಳೆಯ ಮಾತುಗಳನ್ನಾಡಿಕೊಂಡು, ಒಳ್ಳೆಯ-ದಾಗಲಿ ಎಂದು ಭಾವಿಸಿಕೊಂಡು ದಾನ ಮಾಡುವುದರಿಂದ ಮೃದೂಕ್ತಿ (ಒಳ್ಳೆಯ ಮಾತು) ಎಂಬುದು ಅವನನ್ನೇ ಆಶ್ರಯಿಸಿದೆ.

ಎಲ್ಲ ಶ್ರೀಮಂತ / ಧನಿಕ ದಾನಿಗಳ ಮಧ್ಯದಲ್ಲಿ ಕೃಷ್ಣರಾಜನು ದಾನಶ್ರೇಷ್ಠನೆನಿಸಿದ್ದಾನೆ ಎಂದು ವ್ಯಂಗ್ಯವಾಗಿ ಹೇಳಿದ್ದಾನೆ ಕವಿ.

ಉಪಮಾನ ಉದಾರಿ ಧನೀ ಇವರೆಲ್ಲರಿಗಿಂತ ಶ್ರೀಕೃಷ್ಣರಾಜ (ಈತ) ವಿಶೇಷ ಎಂದು ಪ್ರತಿಪಾದಿತವಾಗಿರುವುದರಿಂದ ಇಲ್ಲಿ ವ್ಯತಿರೇಕಾಲಂಕಾರ (ಲಕ್ಷಣಕ್ಕೆ ನೋಡಿ ಶ್ಲೋಕ 3) ಇದೆ.

ಈ ಶ್ಲೋಕದಲ್ಲಿ ಶಿಖರಿಣೀವೃತ್ತವಿದೆ.]

11. ಇಷ್ಟಾರ್ಥಾನ್ ಸಕಲಾನ್ ಜನಸ್ಯ ತಪಸಾರಾಧ್ಯೇಶ್ವರಂ ಸಾಧಯಾ
ಇತ್ಯಾಲೋಚ್ಯ ತಪಸ್ಯಯಾ ಸ ಭಗವಾನ್ ಕೇನಾಪಿ ಸಂಪ್ರೀಣಿತಃ |

ಪ್ರೀತೋಽಸ್ಮಿ ವ್ರಿಯತಾಂ ವರಸ್ತ್ವ ಇತಿ ತಂ ಪ್ರೋವಾಚ ದೀರ್ಘಾಯುಷಂ
ಶ್ರೀಕೃಷ್ಣಕ್ಷಿತಿಪಂ ಸ್ಮ ತಂ ಸ ವೃಣುತೇ ಸರ್ವಸ್ಯ ಸರ್ವಾರ್ಥದಮ್ ||

ಭಾವಾರ್ಥ : *ಜನರ ಸಕಲ ಇಷ್ಟಾರ್ಥಗಳನ್ನು ಪೂರೈಸಲಿಕ್ಕಾಗಿ ತಪಸ್ಸಿನಿಂದ ಭಗವಾನ್ ಈಶ್ವರನನ್ನು ಸಂತೋಷಪಡಿಸಬೇಕೆಂದು ಆಲೋಚಿಸಿ, ಯಾವನೋ ಒಬ್ಬ ಭಕ್ತನು ಭಗವಂತನನ್ನು ತೃಪ್ತಿಪಡಿಸಿದನು. ಪ್ರತ್ಯಕ್ಷನಾದ ಭಗವಂತನು 'ನಾನು ಪ್ರೀತನಾಗಿದ್ದೇನೆ. ವರವನ್ನು ಕೇಳು' ಎಂದನು. ಭಕ್ತನು 'ಎಲ್ಲರಿಗೂ ಎಲ್ಲವನ್ನೂ ಕೊಡುವಂತಹ ಶ್ರೀಕೃಷ್ಣರಾಜನಿಗೆ ದೀರ್ಘಾಯುಷ್ಯವನ್ನು ಕೊಡು' ಎಂದು ಕೇಳಿದನು.*

[ವಿಶೇಷಾಂಶ : ಅಂದರೆ ಯಾವನೋ ಒಬ್ಬ ಭಕ್ತ ಕೃಚ್ಛ್ರಚಾಂದ್ರಾಯಣಾದಿ ಮಹಾವ್ರತಗಳನ್ನು ಮಾಡಿ ಪರಮಾತ್ಮನನ್ನು ತೃಪ್ತಿಪಡಿಸಿದನು. ಅವನ ತಪಸ್ಸಿಗೆ ಮೆಚ್ಚಿದ ಪರಮಾತ್ಮನು ಪ್ರತ್ಯಕ್ಷನಾಗಿ ವರವನ್ನು ಕೇಳಲು ಹೇಳಿದನು. ಭಕ್ತನು ಪ್ರಪಂಚದ ಜನರ ಸಕಲ ಇಷ್ಟಾರ್ಥಗಳನ್ನು ಪೂರೈಸುವುದಕ್ಕಾಗಿ, ಹೆಚ್ಚು ಹೆಚ್ಚು ದಾನಧರ್ಮಾದಿಗಳನ್ನು ಮಾಡುವುದಕ್ಕಾಗಿ ಕೃಷ್ಣರಾಜನಿಗೆ ದೀರ್ಘಾಯುಸ್ಸನ್ನು ಕೇಳಿದನಂತೆ.

ಇಲ್ಲಿ ಪರ್ಯಾಯೋಕ್ತಿ ಅಲಂಕಾರವಿದೆ. ಲಕ್ಷಣ - पर्यायोक्तं तु गम्यस्य वचो भङ्ग्यन्तराश्रयम् - "ಹೇಳಬೇಕಾದ ವಿಚಾರವನ್ನು ಹೇಳಬೇಕಾದ ರೀತಿ ಬಿಟ್ಟು ಸುಂದರವಾದ ಬೇರೆ ರೀತಿಯಲ್ಲಿ ಹೇಳುವುದಕ್ಕೆ ಪರ್ಯಾಯೋಕ್ತಿ ಅಲಂಕಾರ" ಎನ್ನುವರು. ರಾಜನ ದೀರ್ಘಾಯುಸ್ಸನ್ನು, ಅವನ ವಿಶಿಷ್ಟ ಔದಾರ್ಯವನ್ನು ಕವಿ ಒಬ್ಬ ಭಕ್ತನ ವ್ರತಫಲರೂಪವಾಗಿ ಬಿಂಬಿಸಿರುವುದರಿಂದ ಇದು ಪರ್ಯಾಯೋಕ್ತಿ ಅಲಂಕಾರ.

ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.]

12. ಚರ್ಮಾಸ್ಥಿ ಚಾಶುಚಿವದಂತ್ಯಖಿಲಾಶ್ಚ ಶಿಷ್ಟಾ-
ಸ್ತದ್ಬ್ರಹ್ಮಹಂತರಿ ಸಮರ್ಪಿತವಾನಭೂದ್ಯಃ |
ಯಾಂ ದಾತೃಪಂಕ್ತಿಮಧಿರೋಪ್ಯತ ಏಷ ಕೃಷ್ಣ-
ರಾಜೋಽಪಿ ತಾಂ ಹ್ರಿಯಮಪಾಸ್ತವತಾಧಿರೋಪ್ಯಃ ||

ಭಾವಾರ್ಥ : *ಯಾವ ಕರ್ಣ-ದಧೀಚಿಯರು ತಮ್ಮ ಚರ್ಮ ಮತ್ತು ಮೂಳೆಗಳನ್ನು ಇಂದ್ರನಿಗೆ ಸಮರ್ಪಿಸಿದರೋ (ದಾನ ಮಾಡಿದರೋ), ಅವುಗಳನ್ನು ಸದಾಚಾರಸಂಪನ್ನರಾದಂತಹ ಸಜ್ಜನರು (ವ್ಯಾಸ, ವಾಲ್ಮೀಕಿ ಇತ್ಯಾದಿ ಶಿಷ್ಟರು) ಅಶುಚಿಯಾದದ್ದು ಎಂದು ಹೇಳುತ್ತಾರೆ. ಅಂತಹ ದಾನ ಮಾಡಿದವರ ಸಾಲನ್ನು ಶ್ರೀಕೃಷ್ಣರಾಜನೂ ಕೂಡ ಅವರ ನಾಚಿಕೆಯನ್ನು ದೂರಮಾಡಲು ಆ ದಾತೃಶ್ರೇಣಿಗೆ ಏರಿದ್ದಾನೆ.*

[ವಿಶೇಷಾಂಶ : ಇಲ್ಲಿ ಕರ್ಣ ಮತ್ತು ದಧೀಚಿಯರು ಇಂದ್ರ (ಬ್ರಹ್ಮ-ಹಂತರಿ)ನಿಗೆ ತಮ್ಮ ಚರ್ಮ ಮತ್ತು ಮೂಳೆಯನ್ನು ದಾನವಾಗಿ ಕೊಟ್ಟರು. ಈ ದಾನ ಲೋಕ ಕಲ್ಯಾಣಕ್ಕಾಗಿಯಾಗಿದ್ದರೆ ಸರಿಯಿತ್ತು, ಆದರೆ ಇಲ್ಲಿ ಇಂದ್ರನು ತನ್ನ ಸ್ವಾರ್ಥಕ್ಕಾಗಿ ಪಡೆದುಕೊಂಡಿದ್ದು. ಅಂದರೆ, ಅನ್ಯಾಯ ಮಾಡುವವರಿಗೆ ಅನ್ಯಾಯ ಮಾಡುವುದಕ್ಕಾಗಿ ಕೊಟ್ಟಂತಾಯಿತು. ಇಲ್ಲಿ 'ब्रह्महन्तरि' ಎಂಬಲ್ಲಿ ಶ್ಲೇಷವನ್ನು ತೆಗೆದುಕೊಳ್ಳಬೇಕು. ब्रह्म ಶಬ್ದಕ್ಕೆ ಜ್ಞಾನ ಎಂಬ ಅರ್ಥವಿದೆ. ಹಾಗಾಗಿ ಜ್ಞಾನಿಗಳನ್ನು ಸಂಹಾರ ಮಾಡಿದಂತವರಿಗೆ ಕೊಟ್ಟರು ಎಂದಾಗುತ್ತದೆ. ब्रह्म ಶಬ್ದಕ್ಕೆ ಬ್ರಾಹ್ಮಣ ಎಂದೂ ಸಹ ಮತ್ತೊಂದು ಅರ್ಥವಿದೆ. ಇಲ್ಲಿ 'ಬ್ರಾಹ್ಮಣ' ಶಬ್ದಕ್ಕೆ ಜಾತಿ ಎಂದು ಸಂಕುಚಿತಾರ್ಥವನ್ನು ತೆಗೆದುಕೊಳ್ಳಬಾರದು. ಬ್ರಾಹ್ಮಣ ಎಂದರೆ वेदस्तत्त्वं तपो ब्रह्म । "ಆಯಾಯಾ ಕಾಲದಲ್ಲಿ ಆಯಾಯಾ ಜ್ಞಾನವನ್ನು ಯಾರು ತಿಳಿದುಕೊಂಡು ಅದನ್ನು ಜನರಿಗೆ ತಿಳಿಸುತ್ತಿದ್ದರೋ ಅವರು ಬ್ರಾಹ್ಮಣರು" ಎಂದರ್ಥ.

ಇಲ್ಲಿ ಕರ್ಣ ಮತ್ತು ದಧೀಚಿಯರು ತಾವು ಅನ್ಯಾಯ ಮಾಡುವುದಕ್ಕಾಗಿ ದಾನವನ್ನು ಕೊಟ್ಟೆವು ಎಂದು ಲಜ್ಜಾಸ್ಪದರಾಗಿ ದಾನಮಾಡಿದವರ ಸಾಲಿನಲ್ಲಿ ನಿಂತಿದ್ದರು. ಆ ಸಾಲಿಗೆ ಕೃಷ್ಣರಾಜನು ಅವರ ನಾಚಿಕೆಯನ್ನು ಹೋಗಲಾಡಿ-ಸುವುದಕ್ಕೋಸ್ಕರ ಅದೇ ದಾತೃಶ್ರೇಣಿಯನ್ನು ಹೋಗಿ ಸೇರಿಕೊಂಡು ಬಿಟ್ಟನು ಎಂಬುದು ತಾತ್ಪರ್ಯ.

ಇಲ್ಲಿ ತುಲ್ಯಯೋಗಿತಾ ಅಲಂಕಾರವಿದೆ. ಕರ್ಣ ಮತ್ತು ದಧೀಚಿಯರ ಸಮ ಆಗಲು ತಾನೂ ಆ ಶ್ರೇಣಿ ಸೇರಿದನು ಎಂದು ಪ್ರತಿಪಾದಿಸಿರುವುದರಿಂದ - हिताहिते वृत्तितौल्यमपरा तुल्ययोगिता - ದಾನಿಗಳಾದ ಕರ್ಣ ಮತ್ತು ದಧೀಚಿಯರ ಸಾಲಿನಲ್ಲಿ ತಾನೂ ತನ್ನ ದಾನ ವೃತ್ತ (ಸ್ವಭಾವ)ದಿಂದಲೇ ನಿಂತು ಅವರೊಡನೆ ತನಗಿದ್ದ ಭೇದ (ಅವರು ಅಪಾತ್ರದಾನಿಗಳು ತಾನು ಸತ್ಪಾತ್ರ-ದಾನಿ)ವನ್ನು ಹೋಗಲಾಡಿಸಿ ಅಭೇದವನ್ನು ತಂದುಕೊಡುವುದರಿಂದ ತುಲ್ಯಯೋಗಿತಾ ಅಲಂಕಾರದ ಒಂದು ಪ್ರಭೇದ ಇದು.

ಪ್ರಸ್ತುತ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

13. ಸ್ವರ್ಣಸ್ವಾತ್ಯೋಪಯಾತಾಂಸ್ತವ ಸವಿಧಭುವಂ ಕೃಷ್ಣಭೂಮೀಶ್ವರತ್ವಂ
ಸ್ವರ್ಣಸ್ವಾತ್ಯೈವ ಯುಕ್ತಾನ್ವಿರಚಯಸಿ ಬಹೂನ್ಮಾರ್ಗಣಾನ್ಯಾತ್ತದೇವ|
ತೇಷಾಂ ತೋಷೋದಯಾಯ ಪ್ರಭವತಿ ಮಹತೀಂ ತಾವಕೀನಾಂ ಚ ಕೀರ್ತಿಂ
ಪ್ರಾದುರ್ಭೂತಾಂ ವಿಧತ್ತೇ ಯದಿದಮಿಹ ಮಹಾವಿಸ್ಮಯಂ ಸಂತನೋತಿ ||

ಭಾವಾರ್ಥ : ಎಲೈ ಕೃಷ್ಣರಾಜನೇ, ನಿನ್ನ ಅಧಿಪತ್ಯದಿಂದ ನಿನ್ನ ಬಳಿಗೆ ಋಣದ ಆಧಿಕ್ಯದಿಂದ ಬಂದಂತಹ ಬಹಳ ಯಾಚಕರನ್ನು, ನಿನ್ನ ಕೋಶ-ದಲ್ಲಿರುವ ಅಧಿಕವಾದ ಚಿನ್ನದಿಂದ ಯೋಗ್ಯರನ್ನಾಗಿ ಮಾಡುತ್ತಿದ್ದೀಯೆ. ಅಂದರೆ

ಧನಿಕರನ್ನಾಗಿ ಮಾಡುತ್ತಿದ್ದೀಯೆ. ಅಂತಹ ಯಾಚಕರ ಸಂತೋಷದ ಉತ್ಪತ್ತಿಗೆ ಕಾರಣವಾದ ಮಹತ್ತರವಾದ ನಿನ್ನ ಕೀರ್ತಿ ಎಂಬುದು ಯಾವುದಿದೆಯೋ ಅದು ಆಶ್ಚರ್ಯವನ್ನುಂಟುಮಾಡುತ್ತಿದೆ.

[ವಿಶೇಷಾಂಶ : ಸಾಲದ ಭಾರದಿಂದ ನೊಂದ ಯಾಚಕರನ್ನು ರಾಜ-ಕೋಶದಲ್ಲಿರುವ ಅಧಿಕವಾದ ಸ್ವರ್ಣಾದಿಗಳನ್ನು ದಾನ ಮಾಡುವುದರ ಮೂಲಕ ಅವರನ್ನು ಧನಿಕರನ್ನಾಗಿ ಮಾಡಿರುವೆ. ಇದರಿಂದ ಅಧಿಕವಾದ ಕೀರ್ತಿಯನ್ನು ಪಡೆದಿರುವೆ. ಅದೇ ಆಶ್ಚರ್ಯಕರವಾದುದು. ಅದು ನಿನ್ನ ಸಂಬಂಧವಾದ ಕೀರ್ತಿಯನ್ನು ಎಲ್ಲಾ ಕಡೆಯಲ್ಲೂ ಹೆಚ್ಚು ಮಾಡುತ್ತಿದೆ ಎಂದು ತಾತ್ಪರ್ಯ. ಅಂದರೆ, ಯಾಚಕರನ್ನು ಋಣವಿಮುಕ್ತರನ್ನಾಗಿ ಮಾಡಿದ್ದು ಒಂದು ಕಡೆಯಾದರೆ, ಮತ್ತೊಂದೆಡೆ ದೊಡ್ಡ ಕೀರ್ತಿಯನ್ನೂ ಸಂಪಾದಿಸಿಕೊಂಡೆ ಎಂಬುದು ಈ ಪ್ರಪಂಚದಲ್ಲಿ ಅಧಿಕವಾದ ಆಶ್ಚರ್ಯವನ್ನುಂಟುಮಾಡುತ್ತಿದೆ.

ಇಲ್ಲಿ स्वर्णस्फाति ಎಂಬ ಪದದಿಂದ ಶ್ಲೇಷವನ್ನು ತೆಗೆದುಕೊಳ್ಳಬೇಕು. स्वस्य ऋणस्य स्फात्या ಎಂಬರ್ಥದಲ್ಲಿ ಸಭಂಗಶ್ಲೇಷವೂ, स्वर्णस्फात्या ಎಂದು ಸಮಸ್ತಪದವಾಗಿ ತೆಗೆದುಕೊಂಡಾಗ ಅಭಂಗಶ್ಲೇಷವು ಬರುತ್ತದೆ. ಪದಸ್ವಾರಸ್ಯವನ್ನು ತೆಗೆದುಕೊಂಡರೆ ಸಭಂಗ-ಅಭಂಗ ಯಾವುದೂ ಇಲ್ಲ. ಕೇವಲ स्वर्णस्फातित्व ಸಾಧಾರಣಧರ್ಮವಾಗಿರುತ್ತದೆ. स्वर्णस्फातित्व ಎಂಬುದು ಯಾಚಕರಲ್ಲೂ ಇದೆ, ರಾಜನಲ್ಲೂ ಇದೆ. ಇಲ್ಲಿ ಶಬ್ದಚಮತ್ಕಾರ ವಿದೆ. ಆದಿಯಮಕವಿದೆ. ಇಲ್ಲಿ मार्गणदुःखहेतुः स्वर्णस्फातित्व ಮತ್ತು राजकीर्तिहेतुः स्वर्णस्फातित्व ಆದುದರಿಂದ ಇಲ್ಲಿ ವಿಭಾವನಾಲಂಕಾರ. ಯಾಚಕರ ದುಃಖಕ್ಕೆ ಕಾರಣವಾಗಿರುವ ಮತ್ತು ರಾಜನ ಕೀರ್ತಿಗೆ ಕಾರಣವಾಗಿರುವಂತಹುದು ಒಂದೇ ಸ್ವರ್ಣಸ್ಫಾತಿ. ಕಾರಣವೇ ಇಲ್ಲದೆ ಕಾರ್ಯ

ಉತ್ಪತ್ತಿಯಾದರೆ ಅದು ವಿಭಾವನಾ ಎನಿಸುವುದು. ಇಲ್ಲಿ ವಿರುದ್ಧವಾದ ಕಾರಣದಿಂದ ಕಾರ್ಯ ಉತ್ಪತ್ತಿಯಾಗುತ್ತದೆ. ಇದು ವಿಭಾವನಾಲಂಕಾರದ ಐದನೆಯ ಭೇದವಾಗಿದೆ. ಇಲ್ಲಿ ಸ್ವರ್ಣಸ್ವಾತಿಯಿಂದ ಸ್ವರ್ಣಸ್ವಾತಿ ಆಯಿತು ಎಂಬುದು ವಿರುದ್ಧವಾದುದು. ಸ್ವರ್ಣಸ್ವಾತಿಯಿಂದ ದುಃಖವೂ ಆಯಿತು, ಅದೇ ಸ್ವರ್ಣಸ್ವಾತಿಯಿಂದ ದುಃಖನಿವಾರಣೆಯೂ ಆಯಿತು ಎಂದಾಗ ವಿರುದ್ಧವಾದ ಕಾರ್ಯವಾಯಿತು. ಆದುದರಿಂದ ವಿಭಾವನಾಲಂಕಾರ.

ಕುವಲಯಾನಂದ ರೀತ್ಯಾ ವಿಭಾವನಾಲಂಕಾರದ ಲಕ್ಷಣ ಹೀಗಿದೆ - "विभावना विनापि स्यात्कारणं कार्यजन्म चेत्" ಅಂದರೆ, ಒಂದು ಕಾರ್ಯವು ಹುಟ್ಟಲಿಕ್ಕೆ ಆವಶ್ಯಕವೆನಿಸಿದ ಕಾರಣವಿಲ್ಲದೆಯೇ ಆ ಕಾರ್ಯವು ಹುಟ್ಟುವು-ದೆಂದು ವರ್ಣಿಸುವುದೇ ವಿಭಾವನಾಲಂಕಾರ. ಪ್ರಸ್ತುತ ಶ್ಲೋಕದಲ್ಲಿ ವಿಭಾವನಾ-ಲಂಕಾರದ ಐದನೆಯ ಬಗೆಯನ್ನು ಹೇಳಲಾಗಿದೆ. ಅದರ ಲಕ್ಷಣ - "विरुद्धा-त्कार्यसम्पत्तिः दृष्ट्वा काचिद्विभावना" ಯಾವ ಕಾರ್ಯಕ್ಕೆ ಯಾವುದರ ಸಂಪರ್ಕದಿಂದ ತಡೆಯುಂಟೋ ಅಂತಹ ವಿರುದ್ಧವಾದ ಕಾರಣದಿಂದ ಕಾರ್ಯವು ಹುಟ್ಟುವುದಾಗಿ ವರ್ಣಿಸುವುದೇ ವಿಭಾವನಾಲಂಕಾರದ ಐದನೆಯ ಬಗೆ-ಯೆನಿಸುತ್ತದೆ.

ಪ್ರಸ್ತುತ ಶ್ಲೋಕದಲ್ಲಿ ಸ್ರಗ್ಧರಾ ವೃತ್ತವಿದೆ.]

14. ಧರ್ಮಂ ಸಸರ್ಜಿಥ ಸಮಸ್ತಜಗತ್ಪ್ರಹರ್ಷಂ
ಪೂರ್ಣೀಕೃತದ್ವಿಜಪತಿರ್ವಸುಭಿಸ್ಸದಾ ಸ್ವೈಃ |
ತ್ವಂ ಕೃಷ್ಣರಾಜ ಸವಿತಾ ನ ತಥಾ ತಥಾಪಿ
ದಾನೇ ತವ ಸ್ವತನಯಸ್ಸಮ ಇತ್ಯನಂದತ್ ||

ಭಾವಾರ್ಥ : *ಎಲೈ ಕೃಷ್ಣರಾಜನೇ, ನೀನು ಇಡೀ ಲೋಕವನ್ನೇ*

ಸಂತೋಷಗೊಳಿಸುವಂತಹ ಧರ್ಮವನ್ನು ಸೃಷ್ಟಿ ಮಾಡಿಬಿಟ್ಟಿದ್ದೀಯೆ. ನಿನ್ನ ಸಂಪತ್ತುಗಳಿಂದ ಯಾವಾಗಲೂ ದ್ವಿಜರನ್ನು ಸಂತೋಷಗೊಳಿಸುತ್ತಾ 'ದ್ವಿಜಪತಿ' ಎಂಬ ಹೆಸರನ್ನು ಪಡೆದುಕೊಂಡಿದ್ದೀಯೆ. ಆದರೆ ಸೂರ್ಯನು ರಾಜನಿಗೆ ಸಮನಾಗಲಿಲ್ಲ. ಆದರೂ ಸೂರ್ಯನು 'ನನ್ನ ಮಗ ಕರ್ಣನು ದಾನದಲ್ಲಿ ನಿನಗೆ ಸಮನಾಗಿದ್ದಾನೆ ಎಂದು ಸಂತೋಷಪಟ್ಟನು.

[ವಿಶೇಷಾಂಶ : ಇಲ್ಲಿ ವ್ಯತಿರೇಕಾಲಂಕಾರವಿದೆ. (ನೋಡಿ ಶ್ಲೋಕ 3)

ಪ್ರಸ್ತುತ ರಾಜನು ತನ್ನ ಸಂಪತ್ತುಗಳಿಂದ ಯಾವಾಗಲೂ ದ್ವಿಜರುಗಳನ್ನು ಸಂತೋಷಗೊಳಿಸುತ್ತಿರುವುದರಿಂದ 'ದ್ವಿಜಪತಿ' ಎಂದು ಹೆಸರು ಪಡೆದು ಕೊಂಡಿರುತ್ತಾನೆ. ಇಲ್ಲಿ ಶ್ಲೇಷವನ್ನು ತೆಗೆದುಕೊಂಡರೆ ರಾಜನು ತನ್ನ ತೇಜಸ್ಸಿನಿಂದ ಪೂರ್ಣಿಮೆಯ ಚಂದ್ರನಂತೆ ಕಂಗೊಳಿಸುತ್ತಿದ್ದಾನೆ. ಆದರೆ ಸೂರ್ಯನು ಹಾಗಲ್ಲ. ವಸು ಎಂಬುದಕ್ಕೆ ಕಿರಣ ಎಂದರ್ಥ. ಸೂರ್ಯನು ತನ್ನ ಕಿರಣಗಳಿಂದ 'ಪೂರ್ಣೀಕೃತ ದ್ವಿಜಪತಿ'ಯಾಗಲಿಲ್ಲ. ಅಂದರೆ ಸೂರ್ಯನು ತನ್ನ ಕಿರಣಗಳಿಂದ ಎಲ್ಲಾ ಕಡೆ ಹರಡಿಕೊಂಡಿದ್ದರಿಂದ ಪೂರ್ಣಿಮಾ ಚಂದ್ರನನ್ನು ಕಾಣುವುದಕ್ಕೆ ಆಗಲಿಲ್ಲ. ಅದೂ ಅಲ್ಲದೆ, ಚಂದ್ರನು ಪೂರ್ಣಿಮೆಯಲ್ಲಿ ಮಾತ್ರವೇ ತನ್ನ ಕಿರಣಗಳಿಂದ ಪೂರ್ಣೀಕೃತದ್ವಿಜಪತಿತ್ವ ವನ್ನು ಹೊಂದುತ್ತಾನೆ. ಬೇರೆಯ ಸಮಯದಲ್ಲಿ ಅಲ್ಲ. ಆದರೆ ರಾಜನು ಎಲ್ಲಾ ದಿವಸಗಳಲ್ಲೂ ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟು, ದಾನಾದಿಗಳನ್ನು ಮಾಡುತ್ತಾ 'ಪೂರ್ಣೀಕೃತದ್ವಿಜಪತಿ' ಆಗಿದ್ದಾನೆ.

ಇಲ್ಲಿ ವಸು (ಕಿರಣ)ಗಳಿಂದ ಕೂಡಿದ ಸೂರ್ಯ ಪೂರ್ಣೀಕೃತದ್ವಿಜಪತಿ ಆಗಲಿಲ್ಲ. ಆದರೆ ರಾಜನು ತನ್ನ ವಸು (ಸಂಪತ್ತು)ಗಳಿಂದ ಪೂರ್ಣೀಕೃತ-ದ್ವಿಜಪತಿಯಾದನು ಎಂದಾಗ ಸೂರ್ಯನಿಗಿಂತ ಅತಿಶಯವಾದ ಧರ್ಮವು

ಬಂತು. ಉಪಮೇಯದಲ್ಲಿ ಆಧಿಕ್ಯವನ್ನು ವರ್ಣಿಸಿದ ಹಾಗಾಯಿತು. ಸೂರ್ಯನಿಗಿಂತಲೂ ರಾಜನೇ ಅಧಿಕ್ಯ. ಉಪಮಾನಕ್ಕಿಂತಲೂ ಉಪಮೇಯವೇ ಅಧಿಕ್ಯ ಎಂದಾಗ ವ್ಯತಿರೇಕಾಲಂಕಾರವು ವ್ಯಂಗ್ಯವಾಗಿ ತೋರುತ್ತದೆ.

यद्यपह्नुतिगर्भत्वं सैव सापह्नवा मता । ರಾಜನ ದಾನಶೂರತ್ವದ ಅತಿಶಯಿತತೆಯನ್ನು ತಿಳಿಸುತ್ತಾ ಸೂರ್ಯ ತನ್ನ ಕಿರಣಗಳನ್ನು ದಾನ ಮಾಡಿ ಚಂದ್ರನನ್ನು ಬೆಳಗಿಸುತ್ತಾನೆ. ಅವನನ್ನೂ ದಾನದಲ್ಲಿ ಅತಿಶಯಿಸಿದ್ದಾನೆ ಎಂದು ಹೇಳುತ್ತಾನೆ. ಆದರೆ ಸೂರ್ಯ ತನ್ನ ಮಗ ಕರ್ಣನಲ್ಲಿ ರಾಜನ ಸಮಾನತೆಯನ್ನು ಕಂಡು ತನ್ನ ರಾಜನೊಡನೆ ಇರುವ ನ್ಯೂನತೆಯನ್ನು ಮಗನ ದಾನಶೂರತ್ವದಲ್ಲಿ ಮುಚ್ಚಿಕೊಂಡ (ಅಪಹ್ನವ) ಎಂದು ಹೇಳುತ್ತಿರುವುದರಿಂದ ಇದು ಅಪಹ್ನುತಿ-ಗರ್ಭಾಅತಿಶಯೋಕ್ತಿ ಅಲಂಕಾರ.

ಪ್ರಸ್ತುತ ಶ್ಲೋಕದಲ್ಲಿ ವ್ಯತಿರೇಕ ಅಲಂಕಾರವು ಪ್ರಧಾನವಾಗಿದ್ದು ಅಪಹ್ನುತಿಗರ್ಭಾಅತಿಶಯೋಕ್ತಿ ಅಲಂಕಾರವು ಅದಕ್ಕೆ ಪೋಷಕವಾಗಿದೆ.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

15. ಶ್ರೀಕೃಷ್ಣರಾಜಸಫಲೀಕೃತಸರ್ವಕಾಮೇ
ಯಾಚ್ಞಾ ಪರಾಙ್ಮುಖಮತೌ ಸಕಲೇಽರ್ಥಿವರ್ಗೇ |
ಮಾಂ ಕೋಽಪಿ ನಾರ್ಥಯತ ಇತ್ಯವಲಂಬ್ಯ ಚಿಂತಾಂ
ಚಿಂತಾಮಣಿತ್ವಮಗಮತ್ಕಿಲ ದಿವ್ಯರತ್ನಮ್ ||

ಭಾವಾರ್ಥ : *ಯಾಚಕರ ಸಮೂಹ ಶ್ರೀಕೃಷ್ಣರಾಜನ ಬಳಿ ಬೇಡುವುದರಿಂದ ಎಲ್ಲಾ ಆಸೆಗಳೂ ಪೂರ್ಣಗೊಂಡಂತಹವರಾಗಿ ಆದರು. ಆದರೆ ಆಕಾಶದಲ್ಲಿ ಉತ್ಪನ್ನವಾದ ದಿವ್ಯರತ್ನವು 'ತನ್ನನ್ನು ಯಾರೂ ಬೇಡುವುದೇ ಇಲ್ಲವಲ್ಲ' ಎಂದು ಚಿಂತೆಯಿಂದ ಕೂಡಿ ಚಿಂತಾಮಣಿತ್ವವನ್ನು ಪಡೆಯಿತು.*

[ವಿಶೇಷಾಂಶ : ಪ್ರಸ್ತುತ ಶ್ಲೋಕದಲ್ಲಿ ನಿರುಕ್ತಿ ಅಲಂಕಾರವಿದೆ. ಇದರ ಲಕ್ಷಣ ಕುವಲಯಾನಂದರೀತ್ಯಾ ಹೀಗಿದೆ - "निरुक्तिर्योगतो नाम्ना-मन्यार्थत्वप्रकल्पनम्" ಅಂದರೆ, "ಬೇರೆ ಬೇರೆ ಅರ್ಥಗಳನ್ನು ತಿಳಿಸುವ ಪದಗಳಿಗೆ ಅವಯವಾರ್ಥವನ್ನು ಇಟ್ಟುಕೊಂಡು ಬೇರೊಂದು ಅರ್ಥವನ್ನು ವರ್ಣಿಸುವುದೇ ನಿರುಕ್ತ್ಯಲಂಕಾರ"ವೆನಿಸುವುದು.

ಇಲ್ಲಿ ಚಿಂತಾಮಣಿ ಎಂಬ ಪದದಿಂದ ನಿರುಕ್ತ್ಯಲಂಕಾರವನ್ನು ಹೇಳಲಾಗಿದೆ. ಚಿಂತಾಮಣಿ ಶಬ್ದಕ್ಕೆ चिन्ता युक्तो मणिः ಎಂದು ಶಬ್ದಾರ್ಥ-ವನ್ನು ಮಾಡಬೇಕು. ಚಿಂತಾಮಣಿ ಶಬ್ದಕ್ಕೆ ಯೋಗದಿಂದ ಪದಚ್ಛೇದ ಮಾಡುವುದರಿಂದ ಅಂದರೆ ಪದಗಳನ್ನು ಬಿಡಿಸಿ ಬೇರೆ ಬೇರೆ ಅರ್ಥ ಮಾಡಿ-ಕೊಳ್ಳುವುದರಿಂದ ನಿರುಕ್ತ್ಯಲಂಕಾರವೆನಿಸುತ್ತದೆ. ಇಲ್ಲಿ ಶಬ್ದಚಮತ್ಕಾರದಿಂದ ಅರ್ಥವನ್ನು ಮಾಡಿರುವುದರಿಂದ ನಿರುಕ್ತ್ಯಲಂಕಾರ.

ಪ್ರಸ್ತುತ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

16. ಶ್ರೀಕೃಷ್ಣರಾಜೇನ ಕೃತಾಗ್ರಹಾರಾ-
ಸ್ಸಂಖ್ಯಾವತಃ ಪ್ರಾಪುರಮೀ ಅಸಂಖ್ಯಾಃ ।
ಯೋ ಯದ್ವಿಹೀನಸ್ಸಹಿತಸ್ಯ ಲಬ್ಧ್ಯಾ
ತದ್ವಂತಮಾಸಾದಯತೇ ಜಗತ್ಯಾಮ್ ॥

ಭಾವಾರ್ಥ : ಶ್ರೀಕೃಷ್ಣರಾಜನಿಂದ ಮಾಡಲ್ಪಟ್ಟ, ಅಸಂಖ್ಯಾತ (ಲೆಕ್ಕವಿಲ್ಲದಷ್ಟು) ವಾದ ಅಗ್ರಹಾರಗಳನ್ನು ಅಸಂಖ್ಯಾತ ಪಂಡಿತರುಗಳು ಹೊಂದಿದ್ದರು. ಅಂದರೆ ಅಗ್ರಹಾರಗಳಲ್ಲಿ ಅಸಂಖ್ಯಾತಪಂಡಿತರು ವಾಸ ಮಾಡಲಿಕ್ಕಾಗಿ ರಾಜನು ಅನುಕೂಲಗಳನ್ನು ಮಾಡಿಕೊಟ್ಟಿದ್ದನು. ಪ್ರಪಂಚದಲ್ಲಿ ಯಾವನು ಯಾವುದರಿಂದ ವಿಹೀನನಾಗಿರುತ್ತಾನೋ ಅಂತಹವನು ಅದನ್ನು ಪಡೆಯುವುದಕ್ಕಾಗಿ, ಅವುಗಳನ್ನು ಹೊಂದಿದಂತಹವರನ್ನು ಹೊಂದುತ್ತಾನೆ.

[ವಿಶೇಷಾಂಶ : ಈ ಶ್ಲೋಕದಲ್ಲಿ ಅರ್ಥಾಂತರನ್ಯಾಸಾಲಂಕಾರವಿದೆ. ಲಕ್ಷಣ - "उक्तिरर्थान्तरन्यासः स्यात्सामान्यविशेषयोः" ಅಂದರೆ, "ಒಂದು ಅರ್ಥವು ಸಮರ್ಥನವನ್ನು ಅಪೇಕ್ಷಿಸದೇ ಇರುವಷ್ಟು ಲೋಕಪ್ರಸಿದ್ಧ-ವಾಗಿದ್ದರೂ ಸಹ ಕವಿಯು ತನ್ನ ಪ್ರತಿಭಾವೈಭವದಿಂದ ಅದನ್ನು ಸಮರ್ಥನೆ ಮಾಡುವುದಾದರೆ, ಆ ಬಗೆಯ ಸಮರ್ಥನವು ಅರ್ಥಾಂತರನ್ಯಾಸ ಅಲಂಕಾರ" ಎನಿಸುವುದು.

ಇಲ್ಲಿ ಕೃಷ್ಣರಾಜನಿಂದ ಮಾಡಲ್ಪಟ್ಟ ಅಗ್ರಹಾರಗಳನ್ನು ಅಸಂಖ್ಯಾತರಾದ ಪಂಡಿತರುಗಳು ಹೊಂದಿದರು ಎಂಬುದು ವಿಶೇಷವಾದ ವಾಕ್ಯ. ಏಕೆಂದರೆ - ಕೃಷ್ಣರಾಜರು ಮತ್ತು ವಿದ್ವಾಂಸರು ಎಂದು ವ್ಯಕ್ತಿ ವಿಶೇಷಕ್ಕೆ ಅನ್ವಯವಾಗಿ ಹೇಳಿರುವುದರಿಂದ ವಿಶೇಷವಾದ ವಾಕ್ಯ. ಇದನ್ನು ಸಮರ್ಥಿಸಲು - ಯಾರಿಗೆ ಯಾವುದಿಲ್ಲವೋ ಅದನ್ನು ಪಡೆಯಲು ಇರುವವರ ಹತ್ತಿರ ಹೋಗಬೇಕು - ಎಂಬುದು ಸಾಮಾನ್ಯವಾಕ್ಯ. ಅಂದರೆ ವಿಶೇಷವಾದ ವಾಕ್ಯವನ್ನು ಸಾಮಾನ್ಯ-ವಾಕ್ಯದಿಂದ ಸಮರ್ಥಿಸಿರುವುದರಿಂದ ಇಲ್ಲಿ ಅರ್ಥಾಂತರನ್ಯಾಸ ಅಲಂಕಾರ.

ಪ್ರಸ್ತುತ ಶ್ಲೋಕದಲ್ಲಿ ಇಂದ್ರವಜ್ರಾವೃತ್ತವಿದೆ.]

17. ಶ್ರೀಕೃಷ್ಣರಾಜಃ ಪ್ರದದೌ ಯಥಾ ಕ್ಷ್ಮಾಂ
ತಥೈವ ಪೂರ್ವಂ ಜಮದಗ್ನಿಸೂನುಃ ।
ಪ್ರತಿಗ್ರಹೀತಾ ಪ್ರಥಮಸ್ಯ ಸೋಮ-
ಪೀಥೀ ದ್ವಿತೀಯಸ್ಯ ತು ಕಶ್ಯಪೋಽಭೂತ್ ॥

ಭಾವಾರ್ಥ : *ಶ್ರೀಕೃಷ್ಣರಾಜನು ಹೇಗೆ ಭೂಮಿಯನ್ನು ದಾನ ಮಾಡಿದನೋ ಅದೇ ರೀತಿ ಹಿಂದೆ ಜಮದಗ್ನಿಯ ಮಗನಾದ ಪರಶುರಾಮನೂ ಕೂಡ ಭೂಮಿಯನ್ನು ದಾನ ಮಾಡಿದನು. ಮೊದಲು ಶ್ರೀಕೃಷ್ಣರಾಜನು ಮಾಡಿದ*

ದಾನವನ್ನು ಸ್ವೀಕರಿಸಿದವರು ಸೋಮಪೀಥಿಗಳು. ಅಂದರೆ, ಸೋಮಯಾಗವನ್ನು ಮಾಡುವಂತಹ ಸಾಮರ್ಥ್ಯವುಳ್ಳ ಬ್ರಾಹ್ಮಣರು ಎಂದು ಅರ್ಥ. ಎರಡನೆಯದಾಗಿ ಜಮದಗ್ನಿಯ ಮಗನಾದ ಪರಶುರಾಮನು ಮಾಡಿದ ದಾನವನ್ನು ಸ್ವೀಕರಿಸಿದವನು ಕಶ್ಯಪಪ್ರಜಾಪತಿ.

[ವಿಶೇಷಾಂಶ : ಪ್ರಸ್ತುತ ಶ್ಲೋಕದಲ್ಲಿ ವ್ಯತಿರೇಕಾಲಂಕಾರವಿದೆ. (ನೋಡಿ ಶ್ಲೋಕ 3)

ಈ ಶ್ಲೋಕದಲ್ಲಿ ಋಷಿವಿಶೇಷವನ್ನು ಸೂಚಿಸುವ कश्यपः ಎಂಬ ಪದದಿಂದ ವೈಲಕ್ಷಣ್ಯವನ್ನು ತೋರಿಸಲಾಗಿದೆ. ಇಲ್ಲಿ ಪರಶುರಾಮನಿಂದ ಭೂದಾನವನ್ನು ಸ್ವೀಕರಿಸಿದವನು ಕಶ್ಯಪನೆಂಬ ಋಷಿ. ಅವನು ಎಂತಹವನೆಂದರೆ सोमपीथी कश्यपः । ಸಾಮಾನ್ಯವಾಗಿ ಸೋಮಪಾನವನ್ನು ಮಾಡುವವನು ಕಶ್ಯಪ ಎಂದಾಗುತ್ತದೆ. कश्यं मदिरां पिबतीति कश्यपः । ಕೃಷ್ಣರಾಜನ ಬಳಿ ಭೂದಾನ ಪಡೆದವರೂ ಕಶ್ಯಪರೇ, ಪರಶುರಾಮನಿಂದ ಭೂದಾನವನ್ನು ಪಡೆದವರೂ ಕಶ್ಯಪರೇ. ಇಲ್ಲಿ ಕಶ್ಯಪ ಋಷಿ ಭೂದಾನ ಸ್ವೀಕರಿಸಿದ. ಅಲ್ಲಿ ಸೋಮಪಾನ, ಯಾಗ ಇತ್ಯಾದಿಗಳನ್ನು ಮಾಡುವ ಬ್ರಾಹ್ಮಣರು ಭೂದಾನವನ್ನು ಸ್ವೀಕರಿಸಿದರು. ಅಂದರೆ ಪರಶುರಾಮನಿಗಿಂತ ರಾಜನೇ ಶ್ರೇಷ್ಠ ಎಂದು ಅರ್ಥ. ಕಶ್ಯಪ ಭೂಮಿಯನ್ನು ಪಡೆದುಕೊಂಡು ಎಲ್ಲೋ ಹೊರಟು ಹೋದ. ಮುಂದೆ ಏನೂ ಮಾಡಲಿಲ್ಲ. ಆದರೆ ಕೃಷ್ಣರಾಜನ ಬಳಿ ಭೂದಾನವನ್ನು ಪಡೆದ ಸೋಮಪೀಥಿಗಳು ಯಾಗ ಇತ್ಯಾದಿಗಳನ್ನು ಮಾಡಿಕೊಂಡಿದ್ದರು ಎಂದು ವ್ಯಂಗ್ಯವಾಗಿ ಹೇಳಿದ್ದರಿಂದ ಇಲ್ಲಿ ವ್ಯತಿರೇಕಾಲಂಕಾರ. 'ಕಶ್ಯಪ' ಎಂಬ ಪದದ ಸ್ವಾರಸ್ಯವು ಶ್ಲೇಷದಿಂದ ಗೋಚರವಾಗುತ್ತದೆ. ಆದುದರಿಂದ ಇಲ್ಲಿ ಶ್ಲೇಷಾಲಂಕಾರ (ನೋಡಿ ಶ್ಲೋಕ 1) ಮತ್ತು ವ್ಯತಿರೇಕಾಲಂಕಾರ(ನೋಡಿ ಶ್ಲೋಕ 3)ಗಳು ಅಂಗ-ಅಂಗಿ ಭಾವದಿಂದ ಸಂಕರವಾಗಿವೆ.

ಪ್ರಸ್ತುತ ಶ್ಲೋಕದಲ್ಲಿ ಉಪಜಾತಿ ವೃತ್ತವಿದೆ. ಈ ಶ್ಲೋಕದಲ್ಲಿ 1ನೆಯ ಮತ್ತು 4ನೆಯ ಪಾದಗಳು ಇಂದ್ರವಜ್ರಾವೃತ್ತದಲ್ಲಿ, 2ನೆಯ ಮತ್ತು 3ನೆಯ ಪಾದಗಳು ಉಪೇಂದ್ರವಜ್ರಾವೃತ್ತದಲ್ಲೂ ಇರುವುದರಿಂದ ಉಪಜಾತಿವೃತ್ತ.]

18. ವಸುಭಿರ್ದ್ವಿಜಪೋಷಣಂ ಶಶಾಂಕ-
ವ್ರತಮಾಲೋಚ್ಯ ತದನ್ವಯಾಂಬುರಾಶೌ |
ಉದಿತಃ ಕಿಮು ಕೃಷ್ಣರಾಜಚಂದ್ರೋ
ದ್ವಿಜಪೋಷಂ ವಸುಭಿಸ್ಸದಾ ವಿಧತ್ತೇ ||

ಭಾವಾರ್ಥ : *ತನ್ನ ಕಿರಣಗಳಿಂದ ಚಕೋರಪಕ್ಷಿಗಳನ್ನು ಪೋಷಣೆ ಮಾಡುವೆನೆಂಬ ವ್ರತವನ್ನು ಚಂದ್ರ ಕೈಗೊಂಡಿದ್ದಾನೆ. ಅದೇ ಚಂದ್ರವಂಶವೆಂಬ ಸಮುದ್ರದಲ್ಲಿ ಜನಿಸಿದ ಕಾರಣ ಶ್ರೀಕೃಷ್ಣರಾಜನೂ ಕೂಡಾ ತನ್ನ ಸಂಪತ್ತುಗಳಿಂದ ಚಂದ್ರವ್ರತದಂತೆ ಯಾವಾಗಲೂ ದ್ವಿಜ ಪೋಷಣೆ (ಬ್ರಾಹ್ಮಣರಿಗೆ ದಾನ ಮಾಡುವ ಕಾರ್ಯ)ಯನ್ನು ಮಾಡುತ್ತಿರುವನೋ? (ಎಂಬಂತಿದೆ ಆತನ ದಾನಗುಣ ವೈಶಿಷ್ಟ್ಯ.)*

[ವಿಶೇಷಾಂಶ : ಪ್ರಸ್ತುತ ಶ್ಲೋಕದಲ್ಲಿ ಹೇತೂತ್ಪ್ರೇಕ್ಷಾಲಂಕಾರವಿದೆ. (ನೋಡಿ ಶ್ಲೋಕ 5) ಇಲ್ಲಿ वसुभिः, द्विज ಮತ್ತು चन्द्र ಎಂಬ ಪದಗಳಲ್ಲಿ ಶ್ಲೇಷವಿದೆ. ಇಲ್ಲಿ ದ್ವಿಜಪೋಷಣತ್ವ ಎಂಬುದು ಸಾಧಾರಣಧರ್ಮ. ಚಂದ್ರನ ಪರವಾಗಿ ತೆಗೆದುಕೊಂಡರೆ द्विजानां चकोराणां पोषम् ಎಂದಾಗುತ್ತದೆ. ರಾಜನ ಪರವಾಗಿ ತೆಗೆದುಕೊಂಡರೆ द्विजानां ब्राह्मणानां पोषम् ಎಂದಾಗುತ್ತದೆ. ಚಂದ್ರನು ದ್ವಿಜಪೋಷಣೆಯನ್ನು ತನ್ನ ಶೀತಲ ಕಿರಣ (वसुभिः)ಗಳಿಂದ ಮಾಡುತ್ತಾನೆ. ರಾಜನು ದ್ವಿಜಪೋಷಣೆಯನ್ನು ತಮ್ಮಲ್ಲಿರುವ ಅಷ್ಟೈಶ್ವರ್ಯ (वसुभिः)ಗಳಿಂದ ಮಾಡುತ್ತಾರೆ. ಈ ದ್ವಿಜಪೋಷಣೆಗಾಗಿಯೇ ಚಂದ್ರನು

7

ಪುನಃ ಚಂದ್ರವಂಶದ ಕೃಷ್ಣರಾಜನಾಗಿ ಹುಟ್ಟಿ ದ್ವಿಜಪೋಷಣತ್ವವನ್ನು ಮಾಡುತ್ತಿದ್ದಾನೋ ಎಂದು ಕಾರಣವನ್ನು ಹೇಳುತ್ತಿರುವುದರಿಂದ ಹೇತೂತ್ಪ್ರೇಕ್ಷಾ ಅಲಂಕಾರ.

ಈ ಶ್ಲೋಕಕ್ಕೆ - ಮಾತ್ರಾವೃತ್ತವಾದ ಔಪಚ್ಛಂದಸಿಕ ಮತ್ತು ಅಕ್ಷರ ವೃತ್ತವಾದ ಮಾಲಭಾರಿಣೀ - ಈ ಎರಡೂ ವೃತ್ತಗಳೂ ಸಮನ್ವಯವಾಗುತ್ತವೆ.]

19. ಸುರಾಣಾಂ ಪ್ರಾಸಾದಾಃ ಪುರಿ ವಿರಚಿತಾಃ ಕೃಷ್ಣವಿಭುನಾ
ನಿಜಾಯಾಂ ಭೂಯಾಂಸೋ ರಜತಧವಲಾಃ ಕೃಷ್ಣನೃಪತಿಮ್ |
ಗುಣೈರಿಂದ್ರಂ ಮತ್ವಾ ತದನುಸರಣಾಯಾಗತವತಾಂ
ವಿಮಾನಾ ದೇವಾನಾಮಿತಿ ಮತಿಮತೋಽಕುರ್ವತ ಜನಾನ್ ||

ಭಾವಾರ್ಥ : *ತನ್ನ ನಗರದಲ್ಲಿ ಕಟ್ಟಿಸಲ್ಪಟ್ಟಂತಹ ಅನೇಕ ಬೆಳ್ಳಿಯಂತೆ ಬಿಳುಪಾದ, ಹರಿಹರರೇ ಮೊದಲಾದ ದೇವತೆಗಳ ಪ್ರಾಸಾದ (ದೇವಾ-ಲಯ)ಗಳನ್ನು ನಿರ್ಮಿಸಿದ ಶಿಲ್ಪಿ ಜನರನ್ನು, ದೇವಾಲಯ ನಿರ್ಮಾಣ ಮಾಡುವಂತೆ ಪ್ರೇರೇಪಿಸಿದ ಕೃಷ್ಣರಾಜನನ್ನು ಗುಣ, ಐಶ್ವರ್ಯ, ಭೋಗ ಮೊದಲಾದವುಗಳಿಂದ ಇಂದ್ರನೆಂದು ತಿಳಿದು, ಅವನ ಅನುಸರಣೆ ಮಾಡುವುದಕ್ಕೋಸ್ಕರ ಬಂದಂತಹ ದೇವತೆಗಳ ವಿಮಾನಗಳು ಎಂಬ ಭ್ರಾಂತಿಯನ್ನು ದೇವಸ್ಥಾನಗಳ ಗೋಪುರಗಳು ಉಂಟುಮಾಡುತ್ತಿದ್ದವು.*

[ವಿಶೇಷಾಂಶ : ಪ್ರಸ್ತುತ ಶ್ಲೋಕದಲ್ಲಿ ಭ್ರಾಂತಿಮದಲಂಕಾರವಿದೆ. ಇದರ ಲಕ್ಷಣ - "स्यात्स्मृतिभ्रान्तिसन्देहैस्तदङ्कालङ्कृतित्रयम्" - "ಒಂದು ವಸ್ತುವಿನ ಸಾದೃಶ್ಯದಿಂದ ಬೇರೊಂದು ವಸ್ತುವಿನ ಭ್ರಾಂತಿಯು ಎಲ್ಲಿ ತೋರುವುದೋ ಅಲ್ಲಿ ಭ್ರಾಂತಿಮದಲಂಕಾರ."

ಶ್ರೀಕೃಷ್ಣರಾಜನು ಅನೇಕ ದೇವತಾಮಂದಿರ (ದೇವಾಲಯ)ಗಳನ್ನು

ನಿರ್ಮಾಣ ಮಾಡಿದ್ದನು. 'ವಿಮಾನ' ಎಂದರೆ 'ರಾಜಗೋಪುರ' ಎಂದರ್ಥ. ಈ ರೀತಿಯಲ್ಲಿ ದೇವತಾಮಂದಿರಗಳ ವಿಮಾನಗಳೆಲ್ಲವೂ, ರಾಜನನ್ನು ನೋಡುವುದಕ್ಕೆ ಬಂದ ದೇವತೆಗಳ ವಿಮಾನಗಳೋ ಎಂಬ ಭ್ರಾಂತಿಯನ್ನು ಉಂಟು ಮಾಡುತ್ತಿದ್ದವು ಎಂಬಲ್ಲಿ ಮತ್ತು ಕೃಷ್ಣರಾಜನನ್ನು ಇಂದ್ರನೆಂದು ತಿಳಿದ ಎಂಬಲ್ಲಿ ಭ್ರಾಂತಿಮದಲಂಕಾರವಿದೆ.

ಅನೇಕ ದೇವಾಲಯಗಳನ್ನು ರಾಜ ನಿರ್ಮಿಸಿದ ಎಂಬ ಅಂಶದಿಂದ ರಾಜನ ದೈವಭಕ್ತಿಯೂ ಅಭಿವ್ಯಕ್ತವಾಗುತ್ತದೆ.

ಪ್ರಸ್ತುತ ಶ್ಲೋಕದಲ್ಲಿ ಶಿಖರಿಣೀವೃತ್ತವಿದೆ.]

20. ಶ್ರೀಕೃಷ್ಣರಾಜ ಭವದರ್ಪಿತಸಾಯಕಸ್ತ್ವ-
ದ್ವೈರೀರಣೇ ತ್ವದಪಕಾರಧಿಯಾಭಿಯಾತಃ |
ಮುಕ್ತ್ವಾ ಶರೀರಮಭಿದನ್ಮಿಹಿರಸ್ಯ ಬಿಂಬಂ
ಮತ್ವಾ ಪ್ರತಾಪಮತಿತಿಗ್ಮರುಚಿಂ ತ್ವದೀಯಮ್ ||

ಭಾವಾರ್ಥ : ಎಲೈ ಕೃಷ್ಣರಾಜನೇ, ನಿನಗೆ ಅಪಕಾರ ಮಾಡಬೇಕು ಎಂಬ ಬುದ್ಧಿಯಿಂದ ಬಂದಂತಹ ನಿನ್ನ ಶತ್ರು ಯುದ್ಧದಲ್ಲಿ ನಿನ್ನಿಂದ ಬಿಲ್ಲಿನಲ್ಲಿ ಹೊಡಲ್ಪಟ್ಟು, ಬಾಣದಿಂದ ಅಥವಾ ಕತ್ತಿಯಿಂದ ಶರೀರವನ್ನು ತ್ಯಜಿಸಿ, ಅತಿ ಪ್ರಖರವಾಗಿ ಇರುವಂತಹ (ತೇಜಸ್ಸಿನಿಂದ ಕೂಡಿರುವಂತಹ) ಸೂರ್ಯನ ತೇಜೋ ಮಂಡಲವನ್ನು ನಿನ್ನ ಪ್ರತಾಪವೆಂದು ತಿಳಿದು ಭೇದಿಸಿದನು (ಸೇರಿದನು).

[ವಿಶೇಷಾಂಶ : ಸೂರ್ಯಮಂಡಲವನ್ನು ಎರಡು ವಿಧ ಪುರುಷರು ಮಾತ್ರ ಭೇದಿಸಬಲ್ಲರು ಎಂಬು ಸ್ಮೃತಿಗಳು ಹೇಳುತ್ತವೆ. ಯೋಗಸಾಧನೆಯಿಂದ ಸಮಾಧಿ ಸ್ಥಿತಿಗೇರಿದ ಯೋಗಿಶ್ರೇಷ್ಠನು ಶರೀರರೂಪ ತಮೋಮಂಡಲವನ್ನು ಬಿಟ್ಟು ಸೂರ್ಯರೂಪ ತೇಜೋಮಂಡಲವನ್ನು ಸೇರುತ್ತಾನೆ ಮತ್ತು

ಯುದ್ಧದಲ್ಲಿ ಮರಣ ಹೊಂದಿದವನು ಈ ಲೋಕ ತ್ಯಜಿಸಿ ಸ್ವರ್ಗಲೋಕದಲ್ಲಿ ಸಮಸ್ತ ಸುಖಗಳನ್ನು ಅನುಭವಿಸುತ್ತಾನೆ.

ಹೀಗೆ ಸ್ಮೃತಿಸಿದ್ಧವಾದ ಸೂರ್ಯಮಂಡಲ ಭೇದನಕ್ಕೆ ಪ್ರತಾಪ ಭ್ರಮೆ ಕಾರಣವಲ್ಲದಿದ್ದರೂ ಕಾರಣವೆಂದು (ಹೇತುವೆಂದು) ಹೇಳಿರುವುದರಿಂದ ಹೇತೂತ್ಪ್ರೇಕ್ಷಾ (ನೋಡಿ ಶ್ಲೋಕ 5). ಇದು ಶಬ್ದದಿಂದ ವಾಚ್ಯವಾಗದೆ ವ್ಯಂಗ್ಯವಾಗಿದೆ (ಅಲಂಕಾರ ಧ್ವನಿ). ಮತ್ತು ಸೂರ್ಯನ ಪ್ರತಾಪ ಎಂದು ರಾಜನ ಪ್ರತಾಪವನ್ನು ನೋಡಿ ಭ್ರಮೆಗೊಂಡಿರುವುದರಿಂದ ಭ್ರಾಂತಿಮದಲಂಕಾರ (ನೋಡಿ ಶ್ಲೋಕ 19).

ಪ್ರಸ್ತುತ ಶ್ಲೋಕದಲ್ಲಿ ಹೇತೂತ್ಪ್ರೇಕ್ಷಾ ಮತ್ತು ಭ್ರಾಂತಿಮದಲಂಕಾರ ಎರಡೂ ಸಂಕರವಾಗಿದೆ.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

21. ವೃಷ್ಟಿಸ್ಸಹಸ್ರಕಿರಣಾದ್ಭವತೀತಿ ಶಾಸ್ತ್ರಂ
ಯತ್ಪ್ರಾಹ ತಸ್ಯ ವಿತಥೇತರತಾ ಮತಾದ್ಯ |
ಶ್ರೀಕೃಷ್ಣರಾಡರಿವಧೂನಯನಾಂಬುವೃಷ್ಟಿಂ
ಯತ್ತತ್ಪ್ರತಾಪತಪನೋ ಜನಯಾಂಬಭೂವ ||

ಭಾವಾರ್ಥ : *ಸೂರ್ಯನಿಂದ ಮಳೆಯು ಬರುತ್ತದೆ ಎಂಬ ಯಾವ ಶಾಸ್ತ್ರವಿದೆಯೋ ಅದು ಸುಳ್ಳಲ್ಲ ಸತ್ಯ ಎಂದು. ಏಕೆಂದರೆ ಶ್ರೀಕೃಷ್ಣರಾಜನ ಶತ್ರುಗಳ ಸ್ತ್ರೀಯರ ಕಣ್ಣುಗಳಿಂದ ಹರಿಯುವ ನೀರಿನ ಮಳೆಯನ್ನು ರಾಜನ ಪ್ರತಾಪ ಸೂರ್ಯನು ಉಂಟುಮಾಡಿದ. ಅಂದರೆ ಸೂರ್ಯನು ಪ್ರತಾಪಶಾಲಿ, ರಾಜನು ಸೂರ್ಯನಂತೆ ಪ್ರತಾಪಶಾಲಿ. ಪ್ರತಾಪಶಾಲಿಯಾದ ನಂತರ ಸೂರ್ಯನಂತೆ ಮಳೆಯನ್ನು ಸುರಿಸಬೇಕಲ್ಲ. ಅದಕ್ಕೆ ಶತ್ರುಸ್ತ್ರೀಯರ*

ಕಣ್ಣುಗಳಿಂದ ಸುರಿಯುವ ನೀರೇ ಮಳೆ. ಅಲ್ಲಿಗೆ ಸೂರ್ಯನಿಂದ ಮಳೆ ಬರುತ್ತದೆ ಎಂಬ ವಚನ ಎಂದಿಗೂ ಸುಳ್ಳಾಗುವುದಿಲ್ಲ ಎಂದು ತಾತ್ಪರ್ಯ.

[ವಿಶೇಷಾಂಶ : ಕೃಷ್ಣರಾಜನ ಪರಾಕ್ರಮವೇ ಸೂರ್ಯ, ಕೃಷ್ಣರಾಜನ ಶತ್ರುಸ್ತ್ರೀಯರ ಕಣ್ಣೀರೇ ಮಳೆ, ಸೂರ್ಯ ಮತ್ತು ಮಳೆಯ ಶಾಸ್ತ್ರಸಮ್ಮತ ಸಂಬಂಧದೊಡನೆ ರಾಜ ಮತ್ತು ಶತ್ರುನಾಶ ವಾಕ್ಯದೊಡನೆ ಸಂಬಂಧವಿದೆ.

ಇಲ್ಲಿ ಶ್ರೀಕೃಷ್ಣರಾಜನ ಶತ್ರುಗಳ ಅನ್ಯಲೋಕ ಗಮನ ಅಥವಾ ಪಲಾಯನ ಗಮ್ಯವಾಗಿ ತೋರುತ್ತದೆ. प्रतापतपन ಎಂಬಲ್ಲಿ ವಿಷಯ್ಯಭೇದತಾದ್ರೂಪ್ಯ ಇರುವುದರಿಂದ (ಉಪಮಾನ ಉಪಮೇಯಗಳಲ್ಲಿ ಅಭೇದ ತೋರುತ್ತಿರು-ವುದರಿಂದ) ಇಲ್ಲಿ ರೂಪಕ ಅಲಂಕಾರ. ಕುವಲಯಾನಂದರೀತ್ಯಾ ಇದರ ಲಕ್ಷಣ ಹೀಗಿದೆ - विषय्यभेदताद्रूप्यरञ्जनं विषयस्य यत् - "ಪ್ರಕೃತ ವಿಷಯವೆನಿಸಿದ ಉಪಮೇಯದಲ್ಲಿ ಉಪಮಾನದ ಅಭೇದವನ್ನಾಗಲೀ, ಅದರ ಧರ್ಮ-ವನ್ನಾಗಲೀ ನಿರೂಪಿಸುವುದೇ ರೂಪಕ ಅಲಂಕಾರ" ಎನಿಸುತ್ತದೆ.

अम्बुवृष्टिं जनयांबभूव ಎಂಬ ವಿಶೇಷ ಉಕ್ತಿಯನ್ನು ಸಾಮಾನ್ಯ ಉಕ್ತಿ-ಯಾದ वृष्टिः सहस्रकिरणात् सूर्यात् भवति ಎಂಬ ಸಾಮಾನ್ಯ ಉಕ್ತಿಯಿಂದ ಪ್ರತಿಪಾದಿಸುತ್ತಿರುವುದರಿಂದ ಇಲ್ಲಿ ಅರ್ಥಾಂತರನ್ಯಾಸ ಅಲಂಕಾರ(ನೋಡಿ ಶ್ಲೋಕ 16)ವೂ ಇದೆ. ಈ ಎರಡೂ ಅಲಂಕಾರಗಳು ಅಂಗಾಂಗಿಭಾವದಿಂದ ಸಂಕರವಾಗಿವೆ.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

22. ಯುದ್ಧೇ ತ್ವನ್ನಿಶಿತಾಸಿಖಂಡಿತಭವದ್ವಿದ್ವೇಷಿಕಾಂತಾಗಣ-
ಸ್ತಾಮ್ಯನ್ನಾಂತವಿಯೋಗಸಂಭವಶುಚಾ ಸ್ವಪ್ನೇ ಕದಾಚಿತ್ಪ್ರಿಯಮ್ |
ಆಸಾದ್ಯಾಪಿ ಸುಖಂ ನ ವಿಂದತಿ ಭವದ್ವೈರೀ ಭವನ್ನಿಗ್ರಹಂ
ವಾಂಛನ್ ಕೃಷ್ಣಮಹೀಭೃದಾಗತ ಇತಿ ಶ್ರುತ್ವಾ ಸ ಯದ್ವ್ಯಾಕುಲಃ ||

ಭಾವಾರ್ಥ : ಎಲೈ ಕೃಷ್ಣರಾಜನೇ, ಯುದ್ಧದಲ್ಲಿ ನಿನ್ನಿಂದ ತೀಕ್ಷ್ಣವಾದ ಖಡ್ಗದಿಂದ ಕತ್ತರಿಸಲ್ಪಟ್ಟಂತಹ ನಿನ್ನ ಶತ್ರುಗಳ ಸ್ತ್ರೀಯರ ಸಮೂಹವು, ತಮ್ಮ ಪತಿಗಳ ವಿಯೋಗದುಃಖದಿಂದ ಬೆಂದು / ನೊಂದವರಾಗಿ, (ನಿದ್ರಾವಸ್ಥೆಯಲ್ಲಿ) ಕನಸಿನಲ್ಲಿ ಅವರ ಪ್ರಿಯರನ್ನು ಹೊಂದಿದರೂ ಕೂಡ ಸುಖವನ್ನು ಹೊಂದುವುದಿಲ್ಲ. ಏಕೆಂದರೆ ನಿಮ್ಮ ನಿಗ್ರಹವನ್ನು ಬಯಸಿರುವ 'ನಿಮ್ಮ ವೈರಿಯಾದ ಕೃಷ್ಣರಾಜರು ಬಂದಿದ್ದಾರೆ' ಎಂಬ ವಾರ್ತೆಯನ್ನು (ಚಾರರ ಮೂಲಕ) ಕೇಳಿ ಕೂಡಲೇ (ಹೆದರಿಕೆಯಿಂದ ಸುಖವನ್ನು ಪಡದೆ) ನಿದ್ರೆಯಿಂದ ಎಚ್ಚರಗೊಂಡು ವ್ಯಾಕುಲಗೊಳ್ಳುತ್ತಾರೆ.

[ವಿಶೇಷಾಂಶ : ಈ ಶ್ಲೋಕದಲ್ಲಿ ಅರ್ಥಾಂತರನ್ಯಾಸ ಅಲಂಕಾರ (ನೋಡಿ ಶ್ಲೋಕ 16) ಇದೆ. ಇಲ್ಲಿ ಕೃಷ್ಣರಾಜನ ಶತ್ರುಗಳ ಸ್ತ್ರೀಯರು ಸ್ವಪ್ನದಲ್ಲಿ ತಮ್ಮ ಪ್ರಿಯರ ದರ್ಶನ ಮಾಡಿದರು ಮತ್ತು ವ್ಯಾಕುಲತೆಯನ್ನು (ಸ್ವಪ್ನದಲ್ಲೇ) ಹೊಂದಿದರು. ಸ್ವಪ್ನವು ಜಾಗ್ರದವಸ್ಥೆಯಲ್ಲಿ ವ್ಯಕ್ತಿಯು ಪಡೆದ ಅನುಭವವನ್ನು ಆಧರಿಸಿರುತ್ತದೆ. ಆದಕಾರಣ ಆ ಸ್ತ್ರೀಯರು ಜಾಗ್ರದವಸ್ಥೆಯಲ್ಲಿ ತಮ್ಮ ಪ್ರಿಯರ ದರ್ಶನವನ್ನೂ, ಪ್ರಿಯರಿಗೆ ಕೃಷ್ಣರಾಜನಿಂದ ಒದಗುವ ಭೀತಿಯ ಕಾತುರತೆಯನ್ನೂ ಅನೇಕ ಬಾರಿ ಅನುಭವಿಸಿದ್ದಾರೆ - ಎಂಬ ಅಂಶ ಸ್ವಪ್ನದರ್ಶನದಿಂದ ವ್ಯಂಗ್ಯವಾಗುತ್ತದೆ. ಇದರಿಂದ ಕೃಷ್ಣರಾಜನ ವಿರೋಧ ಕಟ್ಟಿಕೊಂಡುದರಿಂದ ಶತ್ರುಗಳಿಗೆ ಸ್ವಾಸ್ಥ್ಯ ಇಲ್ಲ. ಈ ವಿಶೇಷ ವಾಕ್ಯದಿಂದ ಬಲಿಷ್ಠರಾದವರೊಡನೆ ವಿರೋಧ ಸುಖಕರವಲ್ಲ - ಎಂಬ ಸಾಮಾನ್ಯ ವಿಷಯ ವ್ಯಂಗ್ಯವಾಗುತ್ತದೆ. ಹೀಗೆ ಸ್ವಪ್ನದಲ್ಲಿ ತಮ್ಮ ಪ್ರಿಯರ ದರ್ಶನ ಮತ್ತು ವ್ಯಾಕುಲತೆಯ ಅನುಭವ ರೂಪ ವಸ್ತು ವಿಶೇಷದಿಂದ ಸಮರ್ಥಿತವಾದ ಬಲವದ್ವಿರೋಧ ಸುಖಕರವಲ್ಲ ಎಂಬ ಸಾಮಾನ್ಯ ವಿಷಯ ವ್ಯಂಗ್ಯವಾಗುತ್ತಿರುವುದರಿಂದ ಇಲ್ಲಿ ಅರ್ಥಾಂತರನ್ಯಾಸಾಲಂಕಾರ ಧ್ವನಿತವಾಗಿದೆ.

ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತ ಛಂದಸ್ಸಿದೆ.]

23. ಸ್ವಸ್ಥಾನ ಏವ ವಿಭವಾತಿಶಯಂ ಸ ಲೇಭೇ
ಯಸ್ತ್ವಾಮವಾಪ ಶರಣಂ ತ್ವದರಾತಿವರ್ಗಃ |
ತ್ವನ್ಮಂಡಲಾಗ್ರದಳಿತಸ್ಸಮರಕ್ಷಮಾಯಾಂ
ಯಸ್ಸೋಽಪಿ ಕೃಷ್ಣನರಪಾಲವರೇಣ್ಯ ಚಿತ್ರಮ್ ||

ಭಾವಾರ್ಥ : *ಎಲೈ ಶ್ರೇಷ್ಠನಾದಂತಹ ಕೃಷ್ಣರಾಜನೇ, ಯಾವ ನಿನ್ನ ಶತ್ರು ಸಮುದಾಯವು ನಿನ್ನಲ್ಲಿ ಶರಣಾಗತವಾಯಿತೋ, ಯಾವ ಯುದ್ಧ ಭೂಮಿಯಲ್ಲಿ ನಿನ್ನ ಖಡ್ಗದಿಂದ ಕತ್ತರಿಸಲ್ಪಟ್ಟಂತಹ ಯಾವ ಶತ್ರು ಸಮುದಾಯವಿದೆಯೋ ಅವು ತಾವು ಇರುವ ಜಾಗದಲ್ಲೇ (ಅಂದರೆ ಸ್ವರ್ಗದಲ್ಲೇ) ಅತಿಶಯವಾದ ಸಂಪತ್ತುಗಳನ್ನು ಪಡೆದವು ಎಂಬುದು ಆಶ್ಚರ್ಯಕರವಾದದ್ದು.*

[ವಿಶೇಷಾಂಶ : ನಿನ್ನ ಶತ್ರು ಸಮೂಹವು ನಿನ್ನನ್ನೇ ರಕ್ಷಕನನ್ನಾಗಿ ಪಡೆದರು, ನಿನಗೆ ಶರಣು ಬಂದರು. ಅವರು ತಾವು ಇರುವ ಜಾಗದಲ್ಲೇ (ರಾಜನಿಗೆ ಶರಣು ಬಂದ ಕಾರಣ ತಮ್ಮ ತಮ್ಮ ಆಳ್ವಿಕೆಯ ಜಾಗದಲ್ಲೇ) ಸಕಲ ಸೌಭಾಗ್ಯವನ್ನು ಅನುಭವಿಸಿದರು. ಇನ್ನು ಯುದ್ಧರಂಗದಲ್ಲಿ ಎದುರಿಸಿದ ವಿರೋಧಪಕ್ಷದ ರಾಜರು ನಿನ್ನ ಖಡ್ಗದ ಹೊಡೆತದಿಂದ ಮರಣ ಹೊಂದಿ हतो वा प्राप्स्यसि स्वर्गं जित्वा वा भोक्ष्यसे महीम् ಎಂಬಂತೆ ಸ್ವರ್ಗಸುಖವನ್ನು ಪಡೆದರು. ಹೀಗೆ ತಮ್ಮ ಸ್ಥಾನದಲ್ಲೇ ಸಕಲ ಸೌಭಾಗ್ಯ ಹೊಂದುವುದಕ್ಕೆ ಕೃಷ್ಣರಾಜನ ಖಡ್ಗದಿಂದ ಮರಣ ಹೊಂದುವುದು ಕಾರಣವಲ್ಲ. ಕಾರಣವಲ್ಲದ (ಕಾರಣದಿಂದ) ಕಾರ್ಯ (ಸೌಭಾಗ್ಯರೂಪ) ಉತ್ಪನ್ನವಾಯಿತು ಎಂದು ಹೇಳಿರುವುದರಿಂದ ಇಲ್ಲಿ ವಿಭಾವನಾ ಎಂಬ ಅಲಂಕಾರ. ಕೃಷ್ಣರಾಜನಿಗೆ ಶರಣು ಬಂದುದು (ಕಾರಣ), ತನ್ನ ಸ್ಥಾನದಲ್ಲೇ ಸಕಲ ವೈಭವ ಪ್ರಾಪ್ತಿ (ಕಾರ್ಯ).

ಇಲ್ಲಿ ವಿಭಾವನಾಲಂಕಾರದ ನಾಲ್ಕನೆಯ ಭೇದವನ್ನು ಹೇಳಲಾಗಿದೆ. ಲಕ್ಷಣ ಹೀಗಿದೆ -"अकारणात्कार्यजन्म चतुर्थी स्याद्विभावना" ಅಂದರೆ, ಕಾರಣ-ವಲ್ಲದ ವಸ್ತುವಿನಿಂದ ಕಾರ್ಯವು ಹುಟ್ಟುವುದೇ ವಿಭಾವನೆಯ ನಾಲ್ಕನೆಯ ಭೇದವೆನಿಸಿದೆ. ಮತ್ತು ಇದು ಹೇಗೆ ಸಾಧ್ಯ ವಿಚಿತ್ರವಲ್ಲವೆ? ಎಂಬ ಸಂದೇಹ ಇರುವುದರಿಂದ - "स्यात्स्मृतिभ्रान्तसन्देहैस्तदङ्गालङ्कृतित्रयम्" - ಇಲ್ಲಿ ಸಂದೇಹ ಅಲಂಕಾರವಿದೆ. ಇದು ವಿಭಾವನಾ ಅಲಂಕಾರದೊಡನೆ ಸಂಕರ-ಗೊಂಡಿದೆ.

ಇಲ್ಲಿ ವಸಂತತಿಲಕಾವೃತ್ತವಿದೆ.]

24. ತ್ವದ್ವಿಧ್ವಂಸಿತಶತ್ರುರಾಜವನಿತಾಃ ಕಾಂತಾರಸಂಚಾರಿಣೀ-
ರ್ದೃಷ್ಟ್ವಾ ತದ್ಗತಮಾನಸೋ ಮೃಗವಧೋದ್ಯೋಗಂ ಕಿರಾತವ್ರಜಃ |
ಯತ್ತ್ಯಾಜ ವನೀಪಕಾನ್ಯದಕೃಥಾ ದಾರಿದ್ರ್ಯಶೂನ್ಯಾನ್ಪ್ರಭೋ
ಕೃಷ್ಣ ತ್ವಾಂ ಕಮಲಾಭಿವೃದ್ಧಿಕರತಾದ್ವೇಧಾ ತದಾಸಾದಯತ್ ||

ಭಾವಾರ್ಥ : *ಪ್ರಭು ಕೃಷ್ಣ, ದುರ್ಗಮವಾದ ಕಾಡಿನ ಮಾರ್ಗದಲ್ಲಿ ಸಂಚರಿಸುತ್ತಿರುವ ಮ್ಲೇಚ್ಛರ ಸಮೂಹ ನೀನು ನಾಶ ಮಾಡಿದ ಶತ್ರುರಾಜರ ಸ್ತ್ರೀಯರನ್ನು ನೋಡಿ, ಅವರಲ್ಲೇ ಮನಸ್ಸಿಟ್ಟು, ಜಿಂಕೆಗಳಿಗೆ ಹಿಂಸೆ ಮಾಡುವ ಪ್ರಯತ್ನವನ್ನು ಬಿಟ್ಟುಬಿಟ್ಟಿತು. (ಬೇಟೆಯಲ್ಲಿ ಮನಸ್ಸಿಡದೆ ಆ ಸ್ತ್ರೀಯರಲ್ಲಿ ಮನಸ್ಸಿಟ್ಟಿತು) ಏಕೆಂದರೆ ಯಾಚಕರನ್ನು ದಾರಿದ್ರ್ಯ ರಹಿತರನ್ನಾಗಿ ನೀನು ಮಾಡಿದೆ. ಜಿಂಕೆಗಳನ್ನು ಹೆಚ್ಚು ಮಾಡಿದೆ. ಯಾಚಕರ ಮನೆಯನ್ನು ಲಕ್ಷ್ಮಿಯ ವಾಸಗೃಹವನ್ನಾಗಿ ಮಾಡಿದೆ.*

[ವಿಶೇಷಾಂಶ : ಇಲ್ಲಿ ಶ್ಲೇಷಾಲಂಕಾರ (ನೋಡಿ ಶ್ಲೋಕ 1) ಇದೆ. ಕಮಲಾ ಎಂಬ ಪದಕ್ಕೆ ಜಿಂಕೆ, ಲಕ್ಷ್ಮಿ, ವಾರನಾರಿ ಎಂಬ ಅರ್ಥವಿದೆ. ಇಲ್ಲಿ 'ಕಮಲಾ' ಎಂಬ ಪದದಲ್ಲಿ ಶ್ಲೇಷೆಯನ್ನು ಹೇಳಲಾಗಿದೆ.

ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.]

25. ಯೋಧಾ ರಥದ್ವಿರದವಾಜಿಚರಾಶ್ಚ ಪದ್ಮಾ-
ಸ್ಸಂಖ್ಯೋಽಽಭಿತಾಸ್ಸಮರಗೋಚರತೀವ್ರಕಾಮಾಃ |
ಶ್ರುತ್ವೈವ ಧಾವಿತವಿಪಕ್ಷಗಣಾಯ ನಾಮ್ನೇ
ಕೃಷ್ಣಪ್ರಭೋರುದವಹನ್ನತಿವೇಲಕೋಪಮ್ ||

ಭಾವಾರ್ಥ : *ರಥ, ಆನೆ, ಕುದುರೆ, ಕಾಲಾಳುಗಳಿಂದ ಕೂಡಿದ ಅಸಂಖ್ಯ ಯೋಧರು ಯುದ್ಧ ಮಾಡುವ ಅತಿಯಾದ ಆಸೆಯಿಂದ ಹೊರಟರು ಎಂಬ ಮಾತನ್ನು ಕೇಳಿಯೇ ಶತ್ರುರಾಜರ ಸಮೂಹ ಕಂಗೆಟ್ಟು ಓಡಿತು. ಕೃಷ್ಣಪ್ರಭುವಿನ ಹೆಸರೇ ಆ ರಾಜನ ಸಹಿಸಲಾಗದ ತೀವ್ರಕೋಪವನ್ನು ನೆನಪಿಸುತ್ತದೆ (ಹೊಂದಿದೆ).*

[ವಿಶೇಷಾಂಶ : ಇಲ್ಲಿ ಶ್ರೀಕೃಷ್ಣರಾಜ ಕಂಠೀರವನ ಹೆಸರು ಕೇಳಿಯೇ ಶತ್ರುಗಳು ಓಡಿ ಹೋದರು ಎಂದು ವರ್ಣಿಸಲಾಗಿದೆ. ಇದರಿಂದ ರಾಜನ ಪ್ರತಾಪೋತ್ಕರ್ಷರೂಪ ವಸ್ತು ವ್ಯಂಗ್ಯವಾಗುತ್ತದೆ. ಆದುದರಿಂದ ಇಲ್ಲಿ ವಸ್ತುಧ್ವನಿ.

ಇಲ್ಲಿ ಕೃಷ್ಣರಾಜನ ಪರಾಕ್ರಮಾತಿಶಯವನ್ನು ಹೇಳ ಹೊರಟಿರುವ ಕವಿ, 'ಅವನ ನಾಮಶ್ರವಣವೇ ಶತ್ರುಗಳನ್ನು ಪಲಾಯನ ಮಾಡುವಂತೆ ಮಾಡಿತು' ಎಂದು ಮತ್ತೊಂದು ಭಂಗಿ (ಕ್ರಮವನ್ನು)ಯನ್ನು ಆಶ್ರಯಿಸಿ ಹೇಳಿರುವುದರಿಂದ ಇಲ್ಲಿ 'ಪರ್ಯಾಯೋಕ್ತ' ಅಲಂಕಾರ (ನೋಡಿ ಶ್ಲೋಕ 11) ಇದೆ. ಯುದ್ಧ (ಕಾರಣ)ವೇ ಇಲ್ಲದೆ ಶತ್ರುಗಳ ಪಲಾಯನವಾಯಿತು (ಕಾರ್ಯ) ಎಂದು ಕಾರಣ ಇಲ್ಲದೆ ಕಾರ್ಯ ಹುಟ್ಟಿತು ಎಂದು ಹೇಳಿರುವುದರಿಂದ ಇಲ್ಲಿ 'ವಿಭಾವನಾ' ಅಲಂಕಾರ (ನೋಡಿ ಶ್ಲೋಕ 13)ವೂ ಪ್ರಸ್ತುತವಾಗುವುದು.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

26. ಕಾರ್ತಸ್ವರಪ್ರಕೃತಿಕಾನ್ ಸುಬಹೂನವೇಕ್ಷ್ಯ
ಕೃಷ್ಣಕ್ಷಿತೀಶ್ವರರಥಾನತಿಮಾತ್ರತುಂಗಾನ್ |
ಸೂರ್ಯಃ ಪರಿಕ್ರಮಣಕೃತ್ಕನಕಾಚಲಸ್ಯ
ಕೋನ್ವೇಷು ಮೇರುರಿತಿ ಸಂಶಯಮಾಸಸಾದ ||

ಭಾವಾರ್ಥ : *ಅತ್ಯಂತ ಉನ್ನತವಾಗಿರುವ ಕೃಷ್ಣರಾಜನ ಚಿನ್ನದ ಅನೇಕ ರಥಗಳನ್ನು (ರಥವಿಭಾಗ ಸೇನೆಯನ್ನು) ನೋಡಿ ಸುವರ್ಣವರ್ಣದ ಮೇರು-ಪರ್ವತವನ್ನು (ಪ್ರತಿದಿನವೂ) ಪರಿಕ್ರಮಣ ಮಾಡುವ (ಸುತ್ತುವ) ಸೂರ್ಯನು ಈ ಎರಡರಲ್ಲಿ ನಾನು ಪರಿಕ್ರಮಣ ಮಾಡಬೇಕಾದ ಮೇರು ಯಾವುದು? ಎಂದು ಸಂಶಯವನ್ನು ಹೊಂದಿದನು.*

[ವಿಶೇಷಾಂಶ : ಕವಿಯೇ ಹೇಳಿರುವಂತೆ ಇಲ್ಲಿ ಸಂದೇಹ ಅಲಂಕಾರವಿದೆ. ಮೇರುವಿನಂತೆ ಕಾಣುವ ರಾಜನ ರಥಸೇನಾಸಮೂಹ ಹಾಗೂ ಹಿರಣ್ಯವರ್ಣದ ಮೇರು ಈ ಎರಡರಲ್ಲಿ ತಾನು ಪರಿಕ್ರಮಣ ಮಾಡಬೇಕಾದ ಮೇರು ಯಾವುದು? ಎಂಬ ಸಂದೇಹ ಸೂರ್ಯನಿಗೆ ಹುಟ್ಟಿರುವುದರಿಂದ ಸಂದೇಹ ಅಲಂಕಾರ. (ನೋಡಿ ಶ್ಲೋಕ 23) 'चोदात्तमृद्धेशचरितं श्लाघ्यं चान्योपलक्षणम्' ಎಂಬ ಲಕ್ಷಣದಂತೆ ರಾಜನ ಅಭಿವೃದ್ಧಿಯನ್ನು, ಚಿನ್ನದ ಅತ್ಯುನ್ನತವಾದ ರಥಗಳ ರಾಶಿ, ತಿಳಿಸುತ್ತಿರುವುದರಿಂದ ಉದಾತ್ತ ಅಲಂಕಾರವಿದೆ. ಈ ಎರಡೂ ಅಲಂಕಾರಗಳು ಅಂಗಾಂಗಿಭಾವದಿಂದ ಸಂಕರವಾಗಿವೆ.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

27. ಶ್ರೀಕೃಷ್ಣಭೂಮಿರಮಣಸ್ಯ ಮಹಾಗಜಾನಾಂ
ರಂಹಸ್ವಿನಾಂ ಚ ಸಮವೇಕ್ಷ್ಯ ತುರಂಗಮಾಣಾಮ್ |
ಉತ್ಕರ್ಷಮಿಂದ್ರಕರಿಣೇಂದ್ರಹಯೇನ ಚೈವ
ಚಿಂತಾಮವಾಪ್ಯ ಮಹತೀಂ ಧವಲೀ ಬಭೂವೇ ||

ಭಾವಾರ್ಥ : *ಶ್ರೀಕೃಷ್ಣರಾಜನ ಅತ್ಯುನ್ನತವಾದ ಬಲಿಷ್ಠವಾದ ಆನೆಗಳ ಸಮೂಹವನ್ನು, ಅತ್ಯಂತ ವೇಗವುಳ್ಳ ಕುದುರೆಗಳ ಗುಂಪನ್ನು (ಅವುಗಳ ಉತ್ಕರ್ಷವನ್ನು) ನೋಡಿ ಇಂದ್ರನ ಐರಾವತ ಆನೆ ಮತ್ತು ಉಚ್ಚೈಶ್ರವಸ್ಸು ಕುದುರೆ ಅತ್ಯಂತ ಚಿಂತೆಗೆ ಒಳಗಾದವು (ತಮ್ಮ ಔನ್ನತ್ಯ ಶಕ್ತಿವೇಗಗಳನ್ನು ಮೀರಿ ಇವು ಇರುವುದರಿಂದ ತಮ್ಮ ಸ್ಥಾನ ಕಡಿಮೆಯಾಗುತ್ತಿದೆ(ಯಾಯಿತು) ಎಂಬ) ಈ ಚಿಂತೆಯ ಕಾರಣ ಅವರೆಡೂ ಬಿಳಿಚಿಕೊಂಡವು.*

[ವಿಶೇಷಾಂಶ : ಉಚ್ಚೈಶ್ರವಸ್ಸು ಕುದುರೆ ಮತ್ತು ಐರಾವತ ಆನೆ ಎರಡೂ ಸಹಜವಾಗಿ ಹೊಂದಿರುವ ಬಿಳುಪು ಬಣ್ಣಕ್ಕೆ ಕವಿ ಕೃಷ್ಣರಾಜನ ಆನೆ, ಕುದುರೆಗಳ ಉತ್ಕರ್ಷದಿಂದುಂಟಾದ ಚಿಂತೆ ಕಾರಣ ಎಂದು ಹೇಳಿರುವುದರಿಂದಲೂ ಕೃಷ್ಣರಾಜನ ಆನೆ, ಕುದುರೆಗಳ ಉತ್ಕರ್ಷದ ಸಂಭಾವನೆಯನ್ನು ಮಾಡಿರುವು-ದರಿಂದಲೂ ಇಲ್ಲಿ ಹೇತೂತ್ಪ್ರೇಕ್ಷಾ ಅಲಂಕಾರ. (ನೋಡಿ ಶ್ಲೋಕ 5)

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

28. ಶ್ರಿತ್ವಾ ಕಂಚನ ತೇನ ಮಚ್ಛ್ರಿತಜನಾನ್ ಸಾಧೂನ್ನಿರಾಕಾರಯ-
ಲ್ಲಕ್ಷ್ಮೀಸ್ತಾಂ ನಿಗೃಹಾಣ ವಕ್ತುಮಿತಿ ತೇ ವಾಣೀ ಯಯೌ ಸನ್ನಿಧಿಮ್ |
ಲಕ್ಷ್ಮೀಸ್ತತ್ಪ್ರತಿವಾಕ್ಯದಾ ತು ಭವತಾಹೂತಾ ಸುರಾಜನ್ನುಭೇ
ಆಸಾತೇ ಅಧುನಾಽಪಿ ತೇ ತ್ವಯಿ ಯತೋ ವಾದೋ ನ ಶಾಂತಸ್ತ್ವಯಾ||

ಭಾವಾರ್ಥ : *'ನನ್ನನ್ನು ಆಶ್ರಯಿಸಿದ ಜನರನ್ನು ಲಕ್ಷ್ಮಿಯು ತಿರಸ್ಕರಿಸಿ-ರುವಳು, ಅವಳನ್ನು ಶಿಕ್ಷಿಸು' ಎಂದು ಹೇಳಲು ಸರಸ್ವತಿಯು ನಿನ್ನ ಬಳಿಗೆ ಬಂದಳು. ನೀನು ಸರಸ್ವತಿಯ ಪ್ರತಿಪಾದಿನಿಯಾದ ಲಕ್ಷ್ಮಿಯನ್ನು ಕರೆದೆ. ಅವರಿಬ್ಬರೂ ಸರಿ ತಪ್ಪುಗಳ ವಾದವನ್ನು ಮಾಡುತ್ತಾ ನಿನ್ನಲ್ಲೇ ಇಲ್ಲೇ ನೆಲೆಸಿಬಿಟ್ಟಿದ್ದಾರೆ. ಅವರಿಬ್ಬರ ವಾದ-ಪ್ರತಿವಾದಗಳು ಇನ್ನೂ ಕೊನೆಗಾಣಲೇ*

ಇಲ್ಲ. ಹಾಗಾಗಿ ಶ್ರೇಷ್ಠರಾಜನೇ ಅವರಿಬ್ಬರೂ ಇಂದಿಗೂ ನಿನ್ನಲ್ಲೇ ವಾಸಿಸುತ್ತಿದ್ದಾರೆ.

[ವಿಶೇಷಾಂಶ : ಒಟ್ಟಿಗೆ ಇರಲಾರದ ವಾಣಿ-ಲಕ್ಷ್ಮಿಯರನ್ನು ಕೃಷ್ಣರಾಜನಲ್ಲಿ ಇರುವರೆಂದು ಹೇಳುವ (ಸಂಭಾವನಾ) ಮೂಲಕ ರಾಜನ ವಿದ್ಯಾಪಾರಮ್ಯ ಐಶ್ವರ್ಯದ ಲೋಕೋತ್ತರತ್ವವನ್ನು ಕವಿ ಪ್ರತಿಪಾದಿಸುತ್ತಿರುವುದರಿಂದ ಇಲ್ಲಿ ಉತ್ಪ್ರೇಕ್ಷೆ (ನೋಡಿ ಶ್ಲೋಕ 5), ಜೊತೆಗೆ ವಾಣಿ-ಲಕ್ಷ್ಮಿಯರು ರಾಜನಲ್ಲಿ ನೆಲೆಸಲು ತನ್ನ ಆಶ್ರಯದಲ್ಲಿರುವ ಧನಿಕನಾದ ಒಬ್ಬ ವ್ಯಕ್ತಿ ಪಂಡಿತ (ಜ್ಞಾನಿಗಳನ್ನು)ರನ್ನು ತಿರಸ್ಕರಿಸಿದುದು ಕಾರಣ ಎಂಬ ಭಂಗ್ಯಂತರವನ್ನು ಆಶ್ರಯಿಸಿರುವುದರಿಂದ 'ಪರ್ಯಾಯೋಕ್ತ' ಅಲಂಕಾರ (ನೋಡಿ ಶ್ಲೋಕ 11)ವೂ ಇದೆ. ಅಥವಾ ಧನಿಕನಿಂದ ಜ್ಞಾನಿಯ ತಿರಸ್ಕಾರವನ್ನು ಹೇತುವಲ್ಲದಿದ್ದರೂ ಹೇತುವೆಂದು ಸಂಭಾವನೆ ಮಾಡಿರುವುದರಿಂದ ಹೇತೂತ್ಪ್ರೇಕ್ಷೆಯೂ ಆಗಬಹುದು.

ಇಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.]

29. ತದ್ಗ್ರಂಥೋದಿತಬುದ್ಧಿರಲ್ಪವಿಷಯಾ ತದ್ಗ್ರಂಥಕರ್ತುರ್ಮತೇ-
ರಿತ್ಥಂ ಯತ್ಸಮುದೀರಯಂತಿ ಸುಧಿಯಸ್ತನ್ನೈವ ಸಾರ್ವತ್ರಿಕಮ್ |
ಗ್ರಂಥೈಃ ಕೃಷ್ಣಮಹೀಶ್ವರೇಣ ರಚಿತೈಶ್ರ್ಶೀತತ್ತ್ವನಿಧ್ಯಾದಿಭಿ-
ಸ್ಸಾರ್ವಜ್ಞ್ಯಂ ಜನಿತಂ ಪ್ರಣೇತುರಪಿ ಯತ್ಸಾರ್ವಜ್ಞ್ಯಮೇವಾಸ್ತಿ ಹಿ ||

ಭಾವಾರ್ಥ : *ಒಬ್ಬ ಒಂದು ಗ್ರಂಥವನ್ನು ರಚನೆ ಮಾಡಿದರೆ, ಆ ಗ್ರಂಥ ಪ್ರತಿಪಾದಿತವಾದ ವಿಷಯ ಆ ಗ್ರಂಥರಚನಕಾರನ ಬುದ್ಧಿಮತ್ತೆಗೆ (ಅಭಿಪ್ರಾಯಕ್ಕೆ) ಸೀಮಿತವಾಗಿರುತ್ತದೆ. (ಅದು ಎಲ್ಲ ಜ್ಞಾನವನ್ನು ವ್ಯಾಪಿಸಿಕೊಂಡಿರುವುದಿಲ್ಲ) ಎಂದು ತಿಳಿದವರು (ಜ್ಞಾನಿಗಳು) ಏನು ಹೇಳುವರೋ ಆ*

ಮಾತು ಸಾರ್ವತ್ರಿಕವಲ್ಲ. ಎಲ್ಲೆಡೆಗೂ ಅನ್ವಯವಾಗುವುದಿಲ್ಲ. ಏಕೆಂದರೆ ಶ್ರೀಕೃಷ್ಣರಾಜ ರಚಿಸಿದ 'ಶ್ರೀತತ್ತ್ವನಿಧಿ' ಮೊದಲಾದ ಗ್ರಂಥಗಳಿಂದ ಗ್ರಂಥಪ್ರತಿಪಾದಿತ ಸಕಲ ಜ್ಞಾನಸಂಬಂಧ ವಿಷಯದ ಕಾರಣ ಗ್ರಂಥಕಾರನ 'ಸರ್ವಜ್ಞ'ತೆಯು ತಿಳಿಯುತ್ತದೆ. ಅಂದರೆ ಸರ್ವವಿಷಯಕಪ್ರತಿಪಾದ್ಯವಾದ ಶ್ರೀತತ್ತ್ವನಿಧಿ ರಾಜನ ಸರ್ವಜ್ಞತೆಯನ್ನು ಸಮರ್ಥಿಸುತ್ತದೆ.

[ವಿಶೇಷಾಂಶ : ಶ್ಲೋಕದ ಪೂರ್ವಾರ್ಧದಲ್ಲಿ ಮಾಡಿದ ಪ್ರತಿಜ್ಞೆ - ಗ್ರಂಥಕರ್ತೃವಿನ ಅಲ್ಪಜ್ಞತೆ ಸಾರ್ವತ್ರಿಕವಲ್ಲ - ಎಂಬುದನ್ನು ಉತ್ತರಾರ್ಧ ಸಮರ್ಥನೆ ಮಾಡುತ್ತಿರುವುದರಿಂದ, ಇಲ್ಲಿ ಕಾವ್ಯಲಿಂಗ ಅಲಂಕಾರ (ನೋಡಿ ಶ್ಲೋಕ 5) ಇದೆ.

ಇಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.]

30. ಮಹೀಸುರಾಣಾಂ ಪರಿಪಾಲಕಸ್ಯ
ಶ್ರೀಕೃಷ್ಣರಾಜಸ್ಯ ಮಹೀಮಘೋನಃ |
ಪುರೋ ಮಹೀಶೂರಪದಾಭಿಧಾ ಯಾ
ಮಹೀಸ್ವರಿತ್ಯಪ್ಯುಚಿತಂ ಹಿ ನಾಮ ||

ಭಾವಾರ್ಥ : *ಭೂಲೋಕದ ದೇವತೆಗಳಾದ ಬ್ರಾಹ್ಮಣರ ಪರಿಪಾಲಕನಾದ ಭೂಮೀಂದ್ರನಾದ ಕೃಷ್ಣರಾಜ ಕಂಠೀರವನ ಸಂಬಂಧವನ್ನು ಹೊಂದಿರುವ ಈ ನಗರಿಗೆ 'ಮಹೀಶೂರಪುರಿ' ಎನ್ನುವುದಕ್ಕಿಂತ 'ಮಹೀಸ್ವರ್ (ಭೂಲೋಕದ ಸ್ವರ್ಗ) ಎಂಬ ಹೆಸರೇ ಸೂಕ್ತವಾದುದು.*

[ವಿಶೇಷಾಂಶ : ಸಚ್ಛೀಲ ಸೌಜನ್ಯಾದಿ ಗುಣಗಳಿಂದ ಕೂಡಿರುವ ಪ್ರಜೆಗಳು ಇರುವುದರಿಂದ (ಭೂಲೋಕದ) ಇಂದ್ರನಂತಹ ಒಡೆಯನಿರುವುದರಿಂದ ಸ್ವರ್ಗಕ್ಕೆ ಸಮಾನವಾದ ಭೋಗಗಳಿಗೆ ಆಶ್ರಯವಾಗಿರುವುದರಿಂದ ಇದಕ್ಕೆ 'ಮಹೀಸ್ವರ್ಗ' ಎಂಬ ಹೆಸರೇ ಸೂಕ್ತ.

ದೇವತೆಗಳು (ಸುರ) ಇಂದ್ರ (ಮಘವಾ) ಸ್ವರ್ಗ (ಸ್ವಃ) ಈ ಶಬ್ದಗಳು ಗೌಣವಾಗಿದ್ದು ದೇವತೆ ಇಂದ್ರ ಸ್ವರ್ಗಗಳಿಗೆ ಸದೃಶವಾಗಿದೆ ಎಂದು ಅರ್ಥ-ಬೋಧೆಯನ್ನುಂಟುಮಾಡುತ್ತಿವೆ. 'ಮಹೀ' ಶಬ್ದದಿಂದ ಕೃಷ್ಣರಾಜನಿಂದ ರಕ್ಷಿತವಾದ ಭೂಭಾಗ ಲಕ್ಷಿತವಾಗುತ್ತಿದೆ. ಈ 'ಮಹೀ' ಶಬ್ದದ ಸಂಬಂಧ-ದಿಂದಲೇ ಕೃಷ್ಣರಾಜಪಾಲಿತ ಭೂಭಾಗದಲ್ಲಿರುವ ಪ್ರಜೆಗಳು ದೇವತೆ-ಗಳಿಗಿಂತಲೂ ವಿಶೇಷವೆಂದೂ, ಕೃಷ್ಣರಾಜನು ಇಂದ್ರನಿಗಿಂತಲೂ ವಿಶೇಷ ಎಂದೂ, ಆತನು ಒಡೆಯನಾಗಿರುವ ನಗರಿ ಸ್ವರ್ಗಕ್ಕಿಂತಲೂ ವಿಶೇಷ ಎಂದು ಅರ್ಥಬೋಧೆಯಾಗುತ್ತದೆ. ಆದುದರಿಂದ ಉಪಮಾನ-ಉಪಮೇಯ ಎರಡ-ರಲ್ಲೂ ಸಾಧಾರಣಧರ್ಮ ಇಲ್ಲದೆ ಒಂದು ಮತ್ತೊಂದಕ್ಕಿಂತ ವಿಶಿಷ್ಟ (ಉಪಮಾನ - ದೇವತೆ, ಇಂದ್ರ, ಸ್ವರ್ಗಕ್ಕಿಂತ; ಉಪಮೇಯ - ಪ್ರಜೆ, ರಾಜ, ನಗರಿ ವಿಶಿಷ್ಟ) ಎಂದು ಹೇಳುತ್ತಿರುವುದರಿಂದ ಇಲ್ಲಿ ವ್ಯತಿರೇಕ ಅಲಂಕಾರ (ನೋಡಿ ಶ್ಲೋಕ 3) ಇದೆ. 'ಮಹೀ' ಪದವು ನಾಲ್ಕು ಪಾದಗಳಲ್ಲಿ ಪುನರಾವೃತ್ತ-ವಾಗಿರುವುದರಿಂದ ಅನುಪ್ರಾಸಾಲಂಕಾರವೂ ಇದೆ.

ಇಲ್ಲಿ ಉಪಜಾತಿವೃತ್ತವಿದೆ. 1ನೆಯ, 3ನೆಯ ಮತ್ತು 4ನೆಯ ಸಾಲುಗಳು ಉಪೇಂದ್ರವಜ್ರಾವೃತ್ತದಲ್ಲಿಯೂ, 2ನೆಯ ಸಾಲು ಇಂದ್ರವಜ್ರಾವೃತ್ತ-ದಲ್ಲಿಯೂ ಇದೆ.]

31. ಅನಂಗಪತಿಕಾಂ ರತಿಂ ಪ್ರವಿಚಲಸ್ವಭಾವಾನ್ವಿತಾಂ
ರಮಾಂ ಚ ಗಣಿಕಾಪದಂ ಗತವತೀಶ್ಚ ರಂಭಾದಿಕಾಃ |
ಪ್ರಿಯಾಭಿರತಿಸುಂದರಪ್ರವರಕೃಷ್ಣಭೂಮೀಪತೇಃ
ಸತೀಭಿರುಪಮಿನ್ವತಾಂ ಕಥಮಪಾರಿತಪ್ಸೇಪಮಭಿಃ ||

ಭಾವಾರ್ಥ : *ಅತ್ಯಂತ ಸೌಂದರ್ಯವುಳ್ಳವರಲ್ಲೂ ಶ್ರೇಷ್ಠನಾದ*

ಕೃಷ್ಣರಾಜನ ಸ್ಥೈರ್ಯ ಸ್ವಭಾವವುಳ್ಳ ಪತ್ನಿಯರೊಡನೆ (ಅನಂಗ) ಮನ್ಮಥನನ್ನು ಪತಿಯಾಗಿ ಉಳ್ಳ ರತಿಯನ್ನಾಗಲೀ ಚಂಚಲತೆಗೆ ಪ್ರಸಿದ್ಧಳಾಗಿರುವ ಲಕ್ಷ್ಮಿ-ಯನ್ನಾಗಲೀ (ದೇವ) ವೇಶ್ಯಾಸ್ಥಾನವನ್ನು ಪಡೆದಿರುವ ರಂಭೆ ಮೊದಲಾದವರೊ-ಡನೆಯಾಗಲೀ ಸಮ ಮಾಡಲು ಹೇಗೆ ಸಾಧ್ಯ?

[ವಿಶೇಷಾಂಶ : ಶ್ರೀಕೃಷ್ಣರಾಜನ ಪತ್ನಿಯರು ತಮ್ಮ ಸೌಂದರ್ಯ, ಕಾಂತಿ ಮೊದಲಾದ ಗುಣಗಳಿಂದ ರತಿ, ಲಕ್ಷ್ಮಿ, ರಂಭೆ, ಊರ್ವಶಿ ಮೊದಲಾದವರನ್ನೂ ಮೀರಿರುವರು. ಅಂಗ ಇಲ್ಲದವನನ್ನು (ಎಲ್ಲರಲ್ಲೂ ಕಾಮವನ್ನು ಉಂಟು ಮಾಡುವವನನ್ನು) ಪತಿಯಾಗಿ ಹೊಂದಿರುವುದರಿಂದ ರತಿ ಶ್ರೀಕೃಷ್ಣರಾಜನ ರಾಣಿಯರಿಗಿಂತ ಅಪಕೃಷ್ಟಳು. ಅಂತೆಯೇ ಚಂಚಲತೆಯ ಕಾರಣ ಲಕ್ಷ್ಮಿ, ವೇಶ್ಯಾತ್ವದ ಕಾರಣ ರಂಭಾದಿಗಳು ಅಪಕೃಷ್ಟರು. ಶ್ರೀಕೃಷ್ಣರಾಜನ ಪತ್ನಿಯರ (ಸೌಂದರ್ಯಾದಿ ಧರ್ಮದಿಂದ) ಉತ್ಕೃಷ್ಟತೆಯನ್ನು ಪ್ರತಿಪಾದಿಸಲು ಹೊರಟಿರುವುದು ಪ್ರಸ್ತುತ. ಇದನ್ನು ರತಿ, ಲಕ್ಷ್ಮಿ, ರಂಭಾದಿಗಳ ದೋಷ (ಚಂಚಲತೆ ಇತ್ಯಾದಿ)ವನ್ನು ಹೇಳುವುದರ ಮೂಲಕ ಪ್ರತಿಪಾದಿಸುತ್ತಿರು-ವುದರಿಂದ "प्रस्तुतेन प्रस्तुतस्य द्योतने प्रस्तुताङ्कुरः" ಪ್ರಸ್ತುತಾಂಕುರ ಎಂಬ ಅಲಂಕಾರ.

ಗುಣಾದಿಗಳಿಂದ ಸಮ ಅಲ್ಲದವರನ್ನು ಹೇಗೆ ಸಮ (ಸದೃಶರಾಗಿ) ಮಾಡುವುದು ಎಂಬ ವಾಚ್ಯಾರ್ಥದಿಂದ ಈ (ರತಿ, ಲಕ್ಷ್ಮ್ಯಾದಿ) ಎಲ್ಲರನ್ನೂ ಮೀರಿದ ಉತ್ಕೃಷ್ಟತೆ ಪ್ರಸ್ತುತಾಂಕುರ ಅಲಂಕಾರದಿಂದ ವ್ಯಂಗ್ಯವಾಗುತ್ತಿರು-ವುದರಿಂದ ಇದು ಅಲಂಕಾರಧ್ವನಿಗೆ ಉದಾಹರಣೆಯಾಗುತ್ತದೆ.

ಈ ಶ್ಲೋಕದಲ್ಲಿ ಪೃಥ್ವೀ ವೃತ್ತವಿದೆ.]

32. ಭುವಿ ಕೃಷ್ಣಭೂರಮಣಭೋಗಮುತ್ತಮಂ
ಸ್ವದುರಾಪಮೀಕ್ಷಿತವತೋ ದಿವಸ್ಪತೇಃ |
ಅತಿಮಾತ್ರತಾಪಿತಶರೀರಮಾರ್ಜಿತಾ-
ಶತಮನ್ಯುತೈವ ಶತಮನ್ಯುತಾಪ್ರದಾ ||

ಭಾವಾರ್ಥ : *ಭೂಮಿಯಲ್ಲಿ ಶ್ರೀಕೃಷ್ಣ ಭೂಪಾಲನು ಅನುಭವಿಸುತ್ತಿರುವ ಸುಖ-ಭೋಗಾದಿಗಳನ್ನು ನೋಡಿ ದೇವೇಂದ್ರ ಇಂತಹ ಭೋಗ ನನಗೆ ದೊರಕುವುದು ಅಸಂಭವ (ಸಿಗಲು ಸಾಧ್ಯವೇ ಇಲ್ಲ) ಎಂದು - ತಾನು ಈ ಶತಕ್ರತುತ್ವ (ನೂರು ಯಾಗಗಳನ್ನು ಮಾಡಿ ದೇವೇಂದ್ರಪದವಿ) ಪಡೆಯಲು ಪಟ್ಟ ಕಷ್ಟಗಳು (ಅದಕ್ಕಾಗಿ ಶರೀರಕ್ಕೆ ಕೊಟ್ಟ ಶ್ರಮ) ಎಲ್ಲಾ ವ್ಯರ್ಥ. ಅದು ನೂರಾರು ದುಃಖಗಳನ್ನು ಕೊಡುವುದಕ್ಕಾಯಿತೇ ಹೊರತು ಸುಖಾನುಭವಕ್ಕಲ್ಲ - ಎಂದು ಭಾವಿಸಿದನು.*

[ವಿಶೇಷಾಂಶ : ದೇವೇಂದ್ರಪದವಿ ಸುಖಕ್ಕೆ ಕಾರಣ. ಆದರೆ ಅದು ಸುಖ (ಕಾರ್ಯ)ವನ್ನು ಕೊಡಲಿಲ್ಲ, ದುಃಖ ಕೊಡುವುದಕ್ಕೆ ಕಾರಣವಲ್ಲದ (ಶತಮನ್ಯು) = ಶೋಕ (मन्युशोका तु शुक्स्त्रियाम्) ಸ್ಥಾನ, ದುಃಖಕ್ಕೆ ಹೇತು ಎಂದು ಹೇಳಿರುವುದರಿಂದ ಇಲ್ಲಿ ವಿಭಾವನಾ ಅಲಂಕಾರ (ನೋಡಿ ಶ್ಲೋಕ 13). ಕೃಷ್ಣರಾಜನ ಭೋಗೋತ್ಕರ್ಷವನ್ನು ನೋಡಿ ದೇವೇಂದ್ರನಲ್ಲಿ ಮಾತ್ಸರ್ಯವು ಉಂಟಾಯಿತು ಎಂಬ ಅರ್ಥ ಇಲ್ಲಿ ವ್ಯಂಗ್ಯವಾಗಿದೆ. ಇಲ್ಲಿ 'ಶತಮನ್ಯುತ' ಪದಪುಂಜದ ಪುನರಾವೃತ್ತಿ ಇರುವುದರಿಂದ ಯಮಕ ಅಲಂಕಾರವನ್ನು ಕಾಣಬಹುದು.

ಇಲ್ಲಿ ಮಂಜುಭಾಷಿಣೀವೃತ್ತವಿದೆ.]

33. ಭೂಸ್ಸಾರ್ವಭೌಮಂ ಧನದಂ ಮದೇನಾ-
ಸ್ಪೃಷ್ಟಂ ಚ ಕೃಷ್ಣಕ್ಷಿತಿಪಾಲಮೇತ್ಯ |

ದ್ಯಾಂ ಸಾರ್ವಭೌಮೇನ ಮದಾಶ್ರಯೇಣ
ಜಹಾಸ ಯುಕ್ತಾಂ ಧನದೇತರೇಣ ||

ಭಾವಾರ್ಥ : *ಸಕಲ ಭೂಭಾಗಕ್ಕೆ ಒಡೆಯನಾದ (ಸಾರ್ವಭೌಮ), ಯಥೇಚ್ಛವಾಗಿ ಹಣವನ್ನು ದಾನ ಮಾಡುವ (ಧನದ) (ಇಷ್ಟೆಲ್ಲ ಇದ್ದರೂ) ಮದದ ಸೋಂಕೂ ಇಲ್ಲದ ಕೃಷ್ಣಭೂಮಿಪಾಲನನ್ನು ಪಡೆದು ಮದಕ್ಕೆ ಆಶ್ರಯವನ್ನು ಕೊಟ್ಟಿರುವ (ಮದಿಸಿದ) ಸಕಲ ಐಶ್ವರ್ಯಕ್ಕೆ ಅಧಿಪ (ಧನದ)ನಾದ ಕುಬೇರನಿಗಿಂತಲೂ ಸಮೃದ್ಧವಾಗಿ ದಾನ ಮಾಡುವ ಕೃಷ್ಣಭೂಪಾಲನಿಗಿಂತಲೂ (ಧನದಾತೃಃ) ಅಲ್ಪವಾದ ಸಾರ್ವಭೌಮ (ದಿಗ್ಗಜ) ವುಳ್ಳ ಸ್ವರ್ಗವನ್ನು ನೋಡಿ ಅಣಕವಾಡಿತು (ಅಪಹಾಸ್ಯ ಮಾಡಿ ನಕ್ಕಿತು).*

[ವಿಶೇಷಾಂಶ : ಉತ್ತಮ ಭೋಗಕ್ಕೆ ಅವಕಾಶ (ಆಶ್ರಯ) ಕೃಷ್ಣ-ಭೂಪಾಲನ ಆಳ್ವಿಕೆಗೆ ಸೇರಿದ ಭೂಮಿಯಲ್ಲೂ ಇದೆ, ತನ್ನೊಳಗೆ (ಭೂ) ಕೃಷ್ಣನಿರುವಿಕೆಯ ಉತ್ತಮ ಗುಣವಿದೆ. ದ್ಯುಲೋಕದಲ್ಲಿ ಅವನಿಲ್ಲದೆ ಉತ್ತಮ ಗುಣವಿದೆ ಎಂಬುದು ಪರಿಹಾಸಕ್ಕೆ ಕಾರಣ. ಇದು जहास ಎಂಬ ಕ್ರಿಯೆಯಿಂದ ವ್ಯಂಗ್ಯವಾಗಿದೆ. ಮತ್ತು ಉತ್ತಮ ಭೋಗಕ್ಕೆ ಆಶ್ರಯವಿತ್ತ ಕಾರಣ ಸ್ವರ್ಗ ಸಮಾನತೆಯನ್ನು ಪಡೆದ ಭೂಮಿಯಲ್ಲಿ ಮದರಹಿತ (ವಿಮದ) ಧನದಾನ ಮಾಡುವ (ಧನದ) ಸಾರ್ವಭೌಮ (ಕೃಷ್ಣಭೂಪಾಲ)ನ ಸಂಬಂಧ ಇರುವ ಕಾರಣ (ಉಪಮಾನವಾದ) ಸ್ವರ್ಗಕ್ಕಿಂತ ವಿಶೇಷ ಎಂದು ಪ್ರತಿಪಾದಿಸಿರುವುದರಿಂದ ಇಲ್ಲಿ 'ವ್ಯತಿರೇಕ' (ನೋಡಿ ಶ್ಲೋಕ 3) ಎಂಬುದು ಅಲಂಕಾರ. धनद, मद, सार्वभौम - ಈ ಪದಗಳಲ್ಲಿ ಶ್ಲೇಷ ಇದೆ. ಆದುದರಿಂದ ಶ್ಲೇಷಗರ್ಭವ್ಯತಿರೇಕವಿದೆ.

ಇಲ್ಲಿ ಉಪಜಾತಿ ವೃತ್ತವಿದೆ. ಮೊದಲ ಮೂರು ಸಾಲುಗಳು ಇಂದ್ರವಜ್ರಾ ವೃತ್ತದಲ್ಲಿಯೂ, ಕೊನೆಯ ಸಾಲು ಉಪೇಂದ್ರವಜ್ರಾ ವೃತ್ತದಲ್ಲಿಯೂ ಇದೆ.]

8

34. ವಯಂ ಸರ್ವೇ ವಾಸಂ ಕ್ವಚನ ಮಿಲಿತಾಶ್ಚೇದ್ವಿತನುಮ-
ಸ್ತದಾಕ್ರಾಮೇದ್ದ್ವೋಷೋ ನ ಖಲು ಬಲಿನಾಂ ಸಃ ಪದಮರಿಃ |
ತದೇಕತ್ರ ಸ್ಥಾನೇ ಸ್ಥಿತಿಮನುಭವಾಮೇತಿ ಸಕಲಾ
ಗುಣಾ ಆಸೇದುಸ್ತ್ವಾಮಬಲಶರಣಂ ಕೃಷ್ಣನೃಪತೇ ||

ಭಾವಾರ್ಥ : *ನಾವೆಲ್ಲರೂ ಒಗ್ಗಟ್ಟಾಗಿ ಒಂದೇ ನೆಲೆಯನ್ನು ಆಶ್ರಯಿಸಿ ವಾಸ ಮಾಡೋಣ, ಹಾಗೆ ಒಗ್ಗಟ್ಟಿನಿಂದ ಬಲಿಷ್ಠರಾದ ನಮ್ಮ ಮೇಲೆ ನಮ್ಮ ಶತ್ರು ಆಕ್ರಮಣ ಮಾಡುವುದಿಲ್ಲ ಎಂದು ಯೋಚಿಸಿ ಎಲ್ಲಾ ಗುಣಗಳೂ ಅಬಲರಿಗೆ ಆಶ್ರಯದಾತನಾದ ಕೃಷ್ಣರಾಜನಲ್ಲಿ 'ನಾವು ವಾಸಿಸೋಣ' ಎಂದು ಅವನನ್ನು ಸೇರಿದವು.*

[ವಿಶೇಷಾಂಶ : ವಿವೇಕಾದಿ ಸದ್ಗುಣಗಳು ಎಷ್ಟೇ ಇದ್ದರೂ ಮೋಹಾದಿ ಶತ್ರುಗಳು ಅವುಗಳ ಬಲವನ್ನು ಕುಗ್ಗಿಸಿ ಬಿಡುತ್ತದೆ. ಒಗ್ಗಟ್ಟಾಗಿದ್ದರೂ ಶತ್ರುವನ್ನು ಎದುರಿಸಲು ಸಾಧ್ಯವಿಲ್ಲ (ಅಬಲ). ಆದುದರಿಂದ ವಿವೇಕ ಮೊದಲಾದ ಎಲ್ಲಾ ಗುಣಗಳೂ ಮೋಹಾದಿ ಶತ್ರುಗಳಿಂದ ತಮ್ಮ ರಕ್ಷಣೆಗಾಗಿ ಕೃಷ್ಣರಾಜನನ್ನು ಆಶ್ರಯಿಸಿದವು. ಅಬಲಶರಣಮ್ ಎಂಬ ವಿಶೇಷಣ ಸಕಲ ಸದ್ಗುಣಗಳೂ ಒಟ್ಟಾಗಿ ಒಂದೆಡೆ ಸೇರಿದರೂ ದೋಷವನ್ನು ಎದುರಿಸಲು ಅಸಮರ್ಥವಾಗಿವೆ, ಆದುದರಿಂದ ಬಲಿಷ್ಠನಾದ ಒಬ್ಬನ ಆಸರೆಯನ್ನು ಪಡೆದರೆ ಅವನು ನಮ್ಮನ್ನು ರಕ್ಷಿಸಲು ಸಹಾಯ ಮಾಡುತ್ತಾನೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಗುಣಗಳಿಗೆ ಆಶ್ರಯಕ್ಕೆ ಯೋಗ್ಯನಾದವನು ಕೃಷ್ಣರಾಜನನ್ನು ಹೊರತುಪಡಿಸಿ ಮತ್ತೊಬ್ಬನಿಲ್ಲ ಎಂದು ವರ್ಣಿಸಿರುವುದರಿಂದ ಇಲ್ಲಿ ಅಲಙ್ಕಾರಃ ಪರಿಕರಃ ಸಾಭಿಪ್ರಾಯೇ ವಿಶೇಷಣೇ ಎಂಬ ಲಕ್ಷಣದಂತೆ ಪರಿಕರ ಅಲಂಕಾರವಿದೆ.

ಶ್ರೀಕೃಷ್ಣರಾಜನು ಸಕಲಗುಣನಿಧಿ ಎಂಬ ಅಭಿಪ್ರಾಯವನ್ನು 'ಗುಣಾ-ಶ್ರಯತ್ವ' ಎಂಬ ಪದ ವ್ಯಕ್ತಪಡಿಸುತ್ತಿದೆ. ಈ ವಿಶೇಷಣ ವಸ್ತು (ಕೃಷ್ಣರಾಜ)

ದೋಷರಹಿತ ಎಂಬ ಅರ್ಥ ವ್ಯಂಗ್ಯ ಮಾಡುತ್ತಿರುವುದರಿಂದ, ಇದು ವಸ್ತುಧ್ವನಿಗೆ ಉದಾಹರಣೆ.

ಇಲ್ಲಿ ಶಿಖರಿಣೀವೃತ್ತವಿದೆ.]

35. ದೀನೇ ದಯಾಂ ಸ್ವಾಪುಶಿಷದ್ವಸೇತಿ
ಕ್ರುಧಂ ನಿಜಾಂ ಸಾಗಸಿ ಕೃಷ್ಣರಾಜಃ |
ಕ್ಷಮಾಪ್ರಿಯಸ್ಯಾಸ್ಯ ದಯಾಕ್ಷಮಾಯಾ-
ಸ್ಸಖ್ಯಾತ್ಕ್ರುಧಂ ಸ್ವಾತ್ತಪದಾಂ ಚಕಾರ ||

ಭಾವಾರ್ಥ : ಕೃಷ್ಣರಾಜನು ತನ್ನ ದಯೆಯನ್ನು 'ದೀನರಲ್ಲಿ ವಾಸ ಮಾಡು' ಎಂದೂ ತನ್ನ ಕೋಪವನ್ನು 'ಅಪರಾಧಿಗಳಲ್ಲಿ ವಾಸಿಸು' ಎಂದೂ ಆಜ್ಞಾಪಿಸಿದನು. ಕ್ಷಮಾ (ಭೂಮಿಗೆ) ಪ್ರಿಯನಾದ ಈತನ ದಯೆ ಕ್ಷಮಾ ಗುಣಗಳ ಸ್ನೇಹದಿಂದ, ಕೋಪವು ಅಪರಾಧಿಸ್ಥಾನವನ್ನು ಪಡೆಯಿತು. ಈತನ ಗುಣಗಳಿಂದ ಈತನು ಕ್ಷಮೆಗೂ ಭೂಮಿಗೂ (ತನ್ನ ರಾಜ್ಯಕ್ಕೂ) ಪ್ರಿಯನಾಗಿದ್ದ ಎಂಬ ವಸ್ತು ವ್ಯಂಗ್ಯವಾಗುತ್ತದೆ.

[ವಿಶೇಷಾಂಶ : ರಾಜನಿಗೆ ಪ್ರಿಯವಾದ ಕ್ಷಮೆಯ (ಕ್ಷಮಾಗುಣದ) ಸ್ನೇಹದಿಂದ ದಯೆಯಿಂದ, ರಾಜಪ್ರಿಯ ಕ್ಷಮೆಯ ಸ್ನೇಹವಿಲ್ಲದ ಕೋಪದ ಸ್ಥಾನವು ಅಪಹರಿಸಲ್ಪಟ್ಟಿತು - ಎಂದು ವರ್ಣಿಸುವುದರ ಮೂಲಕ ರಾಜಪ್ರಿಯರ ಸ್ನೇಹದಿಂದ ಕಲವರು ರಾಜಪ್ರಿಯರ ಸ್ನೇಹವಿಲ್ಲದವರ ಸ್ಥಾನವನ್ನು ಅಪಹರಿಸುತ್ತಾರೆ ಎಂಬ ಅರ್ಥಬೋಧೆಯಾಗುತ್ತದೆ. ರಾಜ ಕೋಪ ಮಾಡಿಕೊಳ್ಳ ಬೇಕಾದವರ ಮೇಲೂ ದಯೆ ತೋರುವವನು, ಅಂತಹ ದಯಾಮಯ ಎಂದು ವಸ್ತು ಧ್ವನಿತವಾಗುತ್ತಿದೆ. ಕೃಷ್ಣರಾಜನು ಅಪರಾಧಿಗಳಲ್ಲೂ ದಯೆ ತೋರು-ವನೆಂದು ಹೇಳಿದ ಮೇಲೆ ನಿರಪರಾಧಿಗಳ ವಿಚಾರದಲ್ಲಿ ಕೇಳಲೇಬೇಕಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿರುವುದರಿಂದ ಕಿಮ್ತ (ಹೇಳಬೇಕಾದುದೇನು)

'कैमुत्येनार्थसंसिद्धिः काव्यार्थापत्तिरिष्यते' ಎಂಬ ಲಕ್ಷಣದಂತೆ ಇಲ್ಲಿ ಕಾವ್ಯಾರ್ಥಾಪತ್ತಿ ಎಂಬ ಅಲಂಕಾರ.

ಇಲ್ಲಿ ಇಂದ್ರವಜ್ರಾವೃತ್ತವಿದೆ.]

36. ರಾಜ್ಞಾಮಸಾವುಪರಿ ಕೃಷ್ಣನೃಪೋऽಖಿಲಾನಾ-
ಮಸ್ತೀತಿ ಸರ್ವಜನವಾದಮಿವಾಸಹಿಷ್ಣುಃ |
ರಾಜಾ ಸ ಕೃಷ್ಣನೃಪತೇರ್ಧವಲಾತಪತ್ರ-
ವ್ಯಾಜಾತ್ಕರೋತ್ಯುಪರಿವಾಸಮಮುಷ್ಯ ನಿತ್ಯಮ್ ||

ಭಾವಾರ್ಥ : *ಈ ಕೃಷ್ಣರಾಜನು ಎಲ್ಲಾ ರಾಜರುಗಳ ಮೇಲೆ ಇದ್ದಾನೆ (ಎಲ್ಲಾ ರಾಜರ ಕಿರೀಟಗಳಲ್ಲಿರುವ ರತ್ನಗಳ ಪ್ರಕಾಶದಿಂದ ಬೆಳಗಲ್ಪಡುತ್ತಿರುವ (ನೀರಾಜನ ಮಾಡಲ್ಪಡುತ್ತಿರುವ) ಪಾದಗಳಿರುವುದರಿಂದ ಎಂಬ ಎಲ್ಲ ಜನರ ಮಾತನ್ನು ಸಹಿಸಲಾರದೆಯೋ ಎಂಬಂತೆ ಆ ಶುಕ್ಲಪಕ್ಷದ ರಾಜ (ಚಂದ್ರ)ನು ಬೆಳ್ಗೊಡೆಯ ನೆಪದಿಂದ ಕೃಷ್ಣರಾಜನ ಮೇಲೆ ಸದಾ ವಾಸ ಮಾಡುವನು.*

[**ವಿಶೇಷಾಂಶ :** ಸಹಿಸಲಾಗದೆಯೋ ಎಂಬಂತೆ (असहिष्णुः इव) ಎಂಬ ಹೇತು (ಕಾರಣ) ಇರುವುದರಿಂದ ಹೇತೂತ್ಪ್ರೇಕ್ಷೆ. धवलातपत्रव्याजात् (ಬೆಳ್ಗೊಡೆಯ ನೆಪದಿಂದ) ಎಂಬುದು असहिष्णुरिव ಸಹಿಸಲಾಗದೆ ಎಂಬ ಅರ್ಥದಲ್ಲಿ ಪರ್ಯವಸಾನವಾಗುವುದರಿಂದ ಇಲ್ಲಿ कैतवापह्नुतिर्व्यक्तौ व्याजाद्यैर्निह्नुतैः पदैः ಎಂಬ ಲಕ್ಷಣದಂತೆ ಇಲ್ಲಿ ಕೈತವಾಪಹ್ನುತಿ ಅಲಂಕಾರವೂ ಇದೆ.

ಇಲ್ಲಿ ವಸಂತತಿಲಕಾವೃತ್ತವಿದೆ.]

37. ಶರದಿಂದುಪಲಕ್ಷ್ಯಚಾಮರೇ ದ್ವೇ
ವಿಧುತೇ ಪಾರ್ಶ್ವಯುಗೇ ವಿಲಾಸಿನೀಭ್ಯಾಮ್ |

ಸತತಾಶ್ರಿತಭಾರತೀರಮೋತ್ಪ್ರೇ
ಯಶಸೀ ಕೃಷ್ಣನೃಪಸ್ಯ ಭಾವಯಾಮಃ ||

ಭಾವಾರ್ಥ : *ಕೃಷ್ಣರಾಜನ ಎರಡೂ ಪಕ್ಕಗಳಲ್ಲಿ ವಿಲಾಸಿನಿಯರಿಂದ ತೂಗಲ್ಪಡುತ್ತಿರುವ ಶರತ್ಕಾಲದ ಚಂದ್ರನಂತೆ ಬಿಳುಪಾದ ಎರಡು ಚಾಮರಗಳು ಸದಾ ಆಶ್ರಯಿಸಿರುವ ಲಕ್ಷ್ಮೀ ಮತ್ತು ಸರಸ್ವತಿ (ಪಾಂಡಿತ್ಯ ಔದಾರ್ಯದಿಂದ ಉಂಟಾದ) ಯರಿಂದ ಉಂಟಾದ ಕೀರ್ತಿಗಳು ಎಂದು ಭಾವಿಸುತ್ತೇವೆ.*

[ವಿಶೇಷಾಂಶ : ರಾಜನ ಎರಡೂ ಪಕ್ಕಗಳಲ್ಲಿ ಚಾಮರಧಾರಿಣಿ ಸೇವಕಿಯರು ಇರುವುದು ಸರ್ವೇ ಸಾಧಾರಣ ಮತ್ತು ಕೀರ್ತಿ ಬಿಳುಪಾಗಿರುತ್ತದೆ ಎಂಬುದು ಸಾಧಾರಣ ಕವಿಸಮಯ. ಹೀಗೆ ಸಹಜವಾಗಿರುವ ಎರಡು ಚಾಮರಗಳನ್ನು ಲಕ್ಷ್ಮೀ-ಸರಸ್ವತಿಯರು ಎಂದು ಸಂಭಾವನೆ ಮಾಡಿ ಕವಿ, ರಾಜನ ವಿದ್ವತ್ತು-ಜ್ಞಾನ, ಐಶ್ವರ್ಯ-ದಾನ ಅವನ ಸಹಜ ಸಂಗಾತಿಗಳಾದ ಎರಡು ಪಾರ್ಶ್ವಗಳಂತೆ ರಾಜನೊಡನೆಯೇ ಇದ್ದವು ಎಂದು ವರ್ಣಿಸಿದ್ದಾನೆ. ಸಹಜ ಸ್ವರೂಪವುಳ್ಳ ಬಿಳಿ ಚಾಮರಗಳನ್ನು ತಮ್ಮ ಸಹಜಸ್ವರೂಪಗಳಾದ ವಿದ್ಯೈ-ಐಶ್ವರ್ಯ ಸ್ವರೂಪಿಣಿಯರಾದ ಲಕ್ಷ್ಮೀ-ಸರಸ್ವತಿ ಎಂದು ಸಂಭಾವನೆ ಮಾಡಲಾಗಿದೆ. ಆದ್ದರಿಂದ ಇಲ್ಲಿ ಸ್ವರೂಪೋತ್ಪ್ರೇಕ್ಷಾಲಂಕಾರ (ನೋಡಿ ಶ್ಲೋಕ 5) ಮತ್ತು ಔಪಚ್ಛಂದಸಿಕ ಛಂದಸ್ಸು ಇದೆ.]

38. ಹನುಮದ್ಗರುಡಪ್ರಮುಖೈರ್ಬಿರುದೈರಿತರಕ್ಷಿತೀಶ್ವರಾಲಭ್ಯೈಃ |
ರಾಜೋತ್ತಮೋ ಭವಾನಿತಿ ಕೃಷ್ಣಮಹೀಪಾಲ ನಿಶ್ಚಿನುಮಃ ||

ಇತರ ರಾಜರಿಗೆ ಅಲಭ್ಯವಾದ (ದೊರಕದ) ಹನುಮ, ಗರುಡ ಬಿರುದುಗಳಿಂದ ಕೂಡಿರುವ ನೀನು ರಾಜೋತ್ತಮನೆಂದು ನಿಶ್ಚಯಿಸುತ್ತೇವೆ.

ಉತ್ಕರ್ಷವನ್ನು ಸೂಚಿಸುವ ಶರಭ, ಸಾಳ್ವ, ಗಂಡಭೇರುಂಡ ಮೊದಲಾದ ಬಿರುದುಗಳಿಂದ ರಾಜರಲ್ಲೆಲ್ಲಾ ನೀನು ಉತ್ತಮರಾಜ ಎಂದು ಅಭಿಪ್ರಾಯ.

[ವಿಶೇಷಾಂಶ : ಇಲ್ಲಿ ಆರ್ಯಾಛಂದಸ್ಸಿದೆ.]

39. ನೂನಂ ಕೃಷ್ಣಮಹೀಪತೇ ಶುಚಿಜನುರ್ಭಾವಂ ಮಹಾಸೇನತಾಂ
ದೃಷ್ಟ್ವಾ ತೇ ನಿಜಮಾತ್ಮಜಂ ಭಗವತೀ ತ್ವಾಮುಂಬಿಕಾಮನ್ಯತ |
ತತ್ತಸ್ಯಾಃ ಪ್ರಣಯೋ ಭವತ್ಯುಪಚಿತಸ್ತ್ವಾ ಸಿಂಹವಾಹಾ ತತ-
ಸ್ತ್ವಾಂ ಸಿಂಹಾಸನಭಾಗಿನಂ ವಿತನುತೇ ಸಂಪ್ರಾಪ್ತಭಾಗ್ಯೋದಯಮ್||

ಭಾವಾರ್ಥ : *ಎಲೈ ಕೃಷ್ಣರಾಜನೇ, ಷಡ್ಗುಣೈಶ್ವರ್ಯಗಳಿಂದ ಸಂಪನ್ನಳಾಗಿ ಇರುವಂತಹ ಅಂಬಿಕೆಯು ನಿನ್ನ ಶುದ್ಧವಾಗಿರುವಂತಹ ಹುಟ್ಟುವಿಕೆಯನ್ನು ಅಥವಾ ಗ್ರೀಷ್ಮ ಋತುವಿನಲ್ಲಿ ಹುಟ್ಟಿದ ನಿನ್ನನ್ನು ಅಥವಾ ಆಷಾಢಮಾಸದಲ್ಲಿ ಹುಟ್ಟಿಯೂ ಪವಿತ್ರನಾಗಿರುವ ನಿನ್ನನ್ನು ಅಥವಾ ಅಗ್ನಿಯಂತೆ ತೇಜೋರಾಶಿಯಾಗಿ ಹುಟ್ಟಿದ ನಿನ್ನನ್ನು, ತನ್ನ ಮಗ ಮಹಾಸೇನನೆಂದು (ಕಾರ್ತಿಕೇಯನೆಂದು) ತಿಳಿದುಕೊಂಡಳು. ಆದುದರಿಂದಲೇ ಅವಳಿಗೆ ನಿನ್ನ ಮೇಲೆ ಪ್ರೀತಿಯು ಅಧಿಕವಾಯಿತು. ಅಂತಹ ಅಂಬಿಕೆಯು ನಿನ್ನನ್ನು ಸಿಂಹಾಸನದ ಮೇಲೆ ಕೂರಿಸಬೇಕೆಂದು ಬಯಸುತ್ತಾಳೆ.*

[ವಿಶೇಷಾಂಶ : ಈ ಶ್ಲೋಕದಲ್ಲಿ ಹೇತೂತ್ಪ್ರೇಕ್ಷಾಲಂಕಾರವಿದೆ (ನೋಡಿ ಶ್ಲೋಕ 5). ಶ್ರೀಕೃಷ್ಣರಾಜನು ಪುಣ್ಯವಿಶೇಷದಿಂದ (ಅದೃಷ್ಟದಿಂದ) ಸಿಂಹಾಸನವನ್ನು ಪಡೆದಿದ್ದಾನೆ. ಆದ್ದರಿಂದ ಇಲ್ಲಿ ಹೇತೂತ್ಪ್ರೇಕ್ಷಾಲಂಕಾರ. ಏಕೆಂದರೆ ಅವನು ಸಿಂಹಾಸನವನ್ನು ಪಡೆಯುವುದಕ್ಕೆ ಅದು ಕಾರಣವಲ್ಲ. ದೇವಿಗೆ ಅಧಿಕವಾದ ಪ್ರೀತಿ ಇರುವುದಕ್ಕೆ ಕಾರಣವೇನೆಂದರೆ ಕೃಷ್ಣರಾಜನನ್ನು ತಮ್ಮ ಮಗನೇ ಎಂದುಕೊಂಡುಬಿಟ್ಟಳು ಎಂಬುದು. ಇದೂ ಕೂಡ ಕಾರಣವಲ್ಲ.

ಅಂದರೆ ಅಕಾರಣವಾದುದನ್ನು ಕಾರಣ ಎಂದು ಹೇಳಿ ಉತ್ಪ್ರೇಕ್ಷೆ ಮಾಡಿದ್ದರಿಂದ ಹೇತೂತ್ಪ್ರೇಕ್ಷಾಲಂಕಾರ. ಇಲ್ಲಿ ನೂನಮ್ ಎಂಬ ಪದವು ಉತ್ಪ್ರೇಕ್ಷಾವಾಚಕವಾದ ಶಬ್ದವಾಗಿದೆ.

ಇದರಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.]

40. ಸಾನಂದಮೇವ ಸಕಲಂ ಭುವನಂ ಬಭೂವ
ಕೃಷ್ಣಾವನೀಂದ್ರ ತವ ಜನ್ಮದಿನೇ ಯದೇತತ್ |
ಯುಕ್ತಂ ಹಿ ಯದ್ಭವತಿ ಸರ್ವಶರೀರಭಾಜಾಂ
ಚಿತ್ತಂ ಮಹಾಪುರುಷಜನ್ಮನಿ ಸಪ್ರಮೋದಮ್ ||

ಭಾವಾರ್ಥ : *ಹೇ ಕೃಷ್ಣರಾಜನೇ, ನೀವು ಹುಟ್ಟಿದ ದಿನ ಇಡೀ ಪ್ರಪಂಚವೇ ಆನಂದದಿಂದ ಕೂಡಿಕೊಂಡಿತು ಎಂಬುದು ಯೋಗ್ಯವಾದದ್ದೇ ಸರಿ. ಏಕೆಂದರೆ ಸಕಲಪ್ರಾಣಿಗಳ ಮನಸ್ಸೆಂಬುದು ಮಹಾಪುರುಷರ ಹುಟ್ಟುವಿಕೆಯಿಂದ ಸಂತೋಷಗೊಳ್ಳುವುದು ಸರಿಯಷ್ಟೇ?*

[ವಿಶೇಷಾಂಶ : ಇಲ್ಲಿ ಅರ್ಥಾಂತರನ್ಯಾಸಾಲಂಕಾರವಿದೆ. (ನೋಡಿ ಶ್ಲೋಕ 16). ವಿಶೇಷಘಟನೆಯಿಂದ ಸಾಮಾನ್ಯಘಟನೆಯನ್ನು, ಸಾಮಾನ್ಯಘಟನೆಯಿಂದ ವಿಶೇಷವಾದ ಘಟನೆಯನ್ನು ಸಮರ್ಥಿಸಿದರೆ ಅರ್ಥಾಂತರನ್ಯಾಸಾಲಂಕಾರ ಎನಿಸುವುದು. ಶ್ರೀಕೃಷ್ಣರಾಜನ ಹುಟ್ಟುವಿಕೆ ಎಂಬುದು ವಿಶೇಷವಾದ ಅರ್ಥ. ಮಹಾಪುರುಷರ ಜನನವೆಂಬುದು ಸಾಮಾನ್ಯವಾದ ಅರ್ಥ. ಸಾಮಾನ್ಯವಾದ ಅರ್ಥದಿಂದ ವಿಶೇಷವಾದ ಅರ್ಥವನ್ನು ಸಮರ್ಥಿಸಿದ್ದರಿಂದ ಇಲ್ಲಿ ಅರ್ಥಾಂತರನ್ಯಾಸಾಲಂಕಾರವಿದೆ.

ಈ ಶ್ಲೋಕದಲ್ಲಿ ವಸಂತತಿಲಕಾವೃತ್ತವಿದೆ.]

41. ಕೃಷ್ಣದ್ವಿತೀಯೋದಿತ ಏಷ ರಾಜಾ
ವೃದ್ಧಿಂ ಯಯಾವಿತ್ಯಧಿಗಮ್ಯವಾರ್ತಾಮ್ |
ತ್ವದ್ಗೋಚರಾಂ ಕೃಷ್ಣನೃಪಸ್ವವಂಶ್ಯಂ
ಸ್ಮೃತ್ವಾ ಭವಂತಂ ಮುಮುದೇ ಮೃಗಾಂಕಃ ||

ಭಾವಾರ್ಥ : *ಶ್ರೀಕೃಷ್ಣರಾಜನು ಕೃಷ್ಣಪಕ್ಷ ದ್ವಿತೀಯಾದಲ್ಲಿ ಹುಟ್ಟಿ, ಅಭಿವೃದ್ಧಿಯನ್ನು ಹೊಂದಿದನು ಎಂಬ ವಾರ್ತೆಯನ್ನು ತಿಳಿದುಕೊಂಡಂತಹ, ಅದೇ ಕೃಷ್ಣಪಕ್ಷ ಬಿದಿಗೆಯಲ್ಲಿ ಜನಿಸಿದ ಚಂದ್ರನು "ಶ್ರೀಕೃಷ್ಣರಾಜನು ನಮ್ಮ ವಂಶದಲ್ಲಿಯೇ ಜನಿಸಿದ" ಎಂಬ ಸಾಮ್ಯವನ್ನು ಜ್ಞಾಪಿಸಿಕೊಂಡು ಸಂತೋಷ-ಪಟ್ಟನು.*

[ವಿಶೇಷಾಂಶ : ಇಲ್ಲಿ ಶ್ರೀಕೃಷ್ಣರಾಜನು ಆನಂದಸಂವತ್ಸರದ ಕೃಷ್ಣಪಕ್ಷ ದ್ವಿತೀಯಾದಲ್ಲಿ ಜನಿಸಿದನು ಎಂಬುದು ಸ್ಪಷ್ಟವಾಗುತ್ತದೆ. 'पुत्रादिच्छेत् पराजयम्' ಎಂಬ ನ್ಯಾಯದಂತೆ ಚಂದ್ರನು ತನ್ನಂತೆಯೇ ಕೃಷ್ಣಪಕ್ಷ ದ್ವಿತೀಯಾ-ದಲ್ಲಿ ಹುಟ್ಟಿ ಅಪಚಯತ್ವ (ಕ್ಷೀಣಿಸುವಿಕೆ)ವನ್ನು ಹೊಂದದೆ ಉಪಚಯತ್ವ (ಅಭಿವೃದ್ಧಿ)ವನ್ನು ಹೊಂದುತ್ತಿರುವ ಶ್ರೀಕೃಷ್ಣರಾಜನನ್ನು ತನ್ನ ವಂಶದಲ್ಲೇ ಜನಿಸಿದ್ದರಿಂದ ತನ್ನ ಮಗನೆಂದೇ ಭಾವಿಸಿ ಸಂತೋಷಪಟ್ಟನು.

ಇಲ್ಲಿ ವ್ಯತಿರೇಕಾಲಂಕಾರವನ್ನು ಹೇಳಲಾಗಿದೆ (ನೋಡಿ ಶ್ಲೋಕ 3). ಇಲ್ಲಿ ಚಂದ್ರ ಮತ್ತು ಶ್ರೀಕೃಷ್ಣರಾಜರಿಬ್ಬರೂ ಕೃಷ್ಣಪಕ್ಷ ದ್ವಿತೀಯಾದಲ್ಲಿ ಜನಿಸಿದರು ಎಂಬುದಾಗಿ ಸಾದೃಶ್ಯ ಹೇಳಿದರೂ, ಚಂದ್ರನು ಕೃಷ್ಣಪಕ್ಷ ದ್ವಿತೀಯಾದಲ್ಲಿ ಹುಟ್ಟಿ, ನಂತರ ಕ್ಷಯವಾಗುತ್ತಾನೆ. ಆದರೆ ಕೃಷ್ಣರಾಜನು ಕೃಷ್ಣಪಕ್ಷ ದ್ವಿತೀಯಾದಲ್ಲಿ ಹುಟ್ಟಿ ಅಭಿವೃದ್ಧಿಯನ್ನು ಹೊಂದುತ್ತಾರೆಂಬ ವೈಲಕ್ಷಣ್ಯವನ್ನು ಹೇಳಿರುವುದರಿಂದ ಇಲ್ಲಿ ವ್ಯಂಗ್ಯವಾಗಿ ವ್ಯತಿರೇಕಾಲಂಕಾರ ಧ್ವನಿತವಾಗುತ್ತದೆ.

ಪ್ರಸ್ತುತ ಶ್ಲೋಕದಲ್ಲಿ ಇಂದ್ರವಜ್ರಾವೃತ್ತವಿದೆ.]

42. ದ್ವಿತೀಯಾಯಾಂ ಸಮುದ್ಭೂತಸ್ಸೋಮ ಇತ್ಯುಕ್ತಿರದ್ಭುತಮ್ |
ಕಲಾಪೂರ್ಣಂ ಹಿ ರಾಜಾನಮಾಸಾದ್ಯ ವಿದಧೇತಮಾಮ್ ||

ಭಾವಾರ್ಥ : *ಚಂದ್ರನು ದ್ವಿತೀಯಾ ತಿಥಿಯಲ್ಲಿ ಹುಟ್ಟಿದಂತಹವನು ಮತ್ತು 'ಸೋಮ' ಎಂಬ ನಾಮಧೇಯವನ್ನು ಹೊಂದಿರುವವನು, ಶ್ರೀಕೃಷ್ಣ ರಾಜನೂ ಸಹ ದ್ವಿತೀಯಾ ತಿಥಿಯಲ್ಲಿ, ಅದರಲ್ಲೂ ಸೋಮವಾರದಲ್ಲಿ ಹುಟ್ಟಿದಂತಹವನು. ಚಂದ್ರನು ಹದಿನಾರು ಕಲೆಗಳಿಂದ ಕೂಡಿದವನು, ಶ್ರೀಕೃಷ್ಣರಾಜನು ಚತುಷ್ಷಷ್ಟಿ ಕಲಾಪೂರ್ಣನಾಗಿರುವಂತಹವನು, ಇಂತಹ ರಾಜನು ನನ್ನನ್ನು ಬೋಧಕನನ್ನಾಗಿ ತೆಗೆದುಕೊಂಡು ಆಶ್ಚರ್ಯಚಕಿತನನ್ನಾಗಿ ಮಾಡಿಬಿಟ್ಟಿದ್ದಾನೆ.*

[ವಿಶೇಷಾಂಶ : ಈ ಶ್ಲೋಕದಲ್ಲಿ ಉತ್ಪ್ರೇಕ್ಷಾಲಂಕಾರ (ನೋಡಿ ಶ್ಲೋಕ 5) ಮತ್ತು ವಿರೋಧಾಭಾಸ ಅಲಂಕಾರ (ನೋಡಿ ಶ್ಲೋಕ 3)ಗಳು ಸಂಕರ-ವಾಗಿವೆ.

ಇಲ್ಲಿ ಚಂದ್ರ ಮತ್ತು ಶ್ರೀಕೃಷ್ಣರಾಜರು ದ್ವಿತೀಯಾ ತಿಥಿಯಲ್ಲಿಯೇ ಜನಿಸಿದ್ದಾರೆ. ಇಲ್ಲಿ 'ಸೋಮ' ಶಬ್ದಕ್ಕೆ ಶ್ಲೇಷ ತೆಗೆದುಕೊಳ್ಳಬೇಕು. ಚಂದ್ರನು 'ಸೋಮ' ಎಂಬ ಹೆಸರಿನಿಂದ ಶೋಭಿಸುತ್ತಿದ್ದಾನೆ. ರಾಜನು 'ಸೋಮ' ಎಂದರೆ 'ಸೋಮವಾರ'ದಲ್ಲಿ ಜನಿಸಿದನು ಎಂದು ಅರ್ಥವಾಗುತ್ತದೆ. ಚಂದ್ರನು ಷೋಡಶ ಕಲೆಗಳಿಂದ ವಿಶಿಷ್ಟನಾಗಿದ್ದಾನೆ. ರಾಜನು ಚತುಷ್ಷಷ್ಟಿಕಲೆಗಳಿಂದ ಪೂರ್ಣನಾಗಿ ಶೋಭಿಸುತ್ತಿದ್ದಾನೆ. ಚಂದ್ರನು "ನನಗೂ ರಾಜನಿಗೂ ಎಲ್ಲ ರೀತಿಯಲ್ಲೂ ಸಾಮ್ಯಗಳಿವೆ. ಇವನೆಂಥ ಪುಣ್ಯಾತ್ಮ? ನನ್ನ ಹಾಗೆ ಇವನು ಬಂದುಬಿಟ್ಟನಲ್ಲ" ಎಂದು ಆಶ್ಚರ್ಯಪಟ್ಟನು ಎಂಬಲ್ಲಿ ಉತ್ಪ್ರೇಕ್ಷಾಲಂಕಾರವಿದೆ.

ಇಲ್ಲಿ 'ಅಭ್ದುತ' ಮತ್ತು 'विदधेतमाम्' ಎಂಬ ಎರಡು ಪದಗಳಿಂದ ಕಲಾವಿಶಿಷ್ಟನಾದವನು ಮತ್ತು ಬಿದಿಗೆಯಲ್ಲಿ ಹುಟ್ಟಿದವನು ಎಂಬಲ್ಲಿ ಮೊದಲು ವಿರೋಧ. ರಾಜನು ಬಿದಿಗೆಯಲ್ಲಿ ಹುಟ್ಟಿದ್ದಾನೆ, ಚಂದ್ರನೂ ಬಿದಿಗೆಯಲ್ಲಿ ಹುಟ್ಟಿದ್ದಾನೆ ಎಂಬುದು ಸರಿ ಎನ್ನಿಸಿದರೂ ಕಲಾಪೂರ್ಣನಾಗಿದ್ದಾನೆ ಎಂದಾಗ ವಿರೋಧ ತೋರುತ್ತದೆ. ಆಗ ಚತುಷ್ಷಷ್ಟಿ ಕಲಾಪೂರ್ಣನಾಗಿರುವವನು ರಾಜನು ಎಂದಾಗ ವಿರೋಧವು ಪರಿಹಾರವಾಗುತ್ತದೆ. ಆದ್ದರಿಂದ ಇಲ್ಲಿ ವಿರೋಧಾಭಾಸ ಅಲಂಕಾರ.

ಈ ಶ್ಲೋಕವು ಪಥ್ಯಾವಕ್ತ್ರ ಎಂಬ ಮಾತ್ರಾಛಂದಸ್ಸಿನಲ್ಲಿದೆ.]

43. ಯೋऽಸೌ ಸುಕೃತಭೂಸ್ತಿಷ್ಯಜಾತೋऽಪಿ ಶ್ರವಣೋದಿತಃ |
ಪುನರ್ವಸೂದಯಸ್ತಸ್ಯೇತ್ಯದ್ಭುತಂ ಕೃಷ್ಣಭೂಪತೇಃ ||

ಭಾವಾರ್ಥ : *ಯಾವ ಕೃಷ್ಣರಾಜನು ಮಾಡಿದ ಪುಣ್ಯವಿಶೇಷಗಳಿಂದ ಕಲಿಯುಗದಲ್ಲಿ ಹುಟ್ಟಿದನು. ಇವನು ಶ್ರವಣನಕ್ಷತ್ರದಲ್ಲಿ ಜನಿಸಿ, ಬೇಕಾದಷ್ಟು ಜನರಿಗೆ ದಾನಾದಿಗಳನ್ನು ಮಾಡಿದರೂ ಐಶ್ವರ್ಯದ ಅಭಿವೃದ್ಧಿಯಾಗುತ್ತಿದೆ ಎಂಬುದು ಅದ್ಭುತವಾದದ್ದು.*

[ವಿಶೇಷಾಂಶ : ಈ ಶ್ಲೋಕದಲ್ಲಿ ಮೂರು ವಿರೋಧಗಳನ್ನು ಹೇಳಿ ಸಂಸೃಷ್ಟಿ ಅಲಂಕಾರವನ್ನು ಹೇಳಲಾಗಿದೆ.

1. सुकृतभूः अपि ಎಂದು. सुकृतभूः = सु = ಶೋಭನವಾದ, कृत = ಕೃತಯುಗದಲ್ಲಿ, भूः = ಹುಟ್ಟಿದವನು - ಎಂದು ವಿರೋಧ. तिष्यजातः अपि ಪುಷ್ಯನಕ್ಷತ್ರದಲ್ಲಿ ಜನಿಸಿದರೂ ಕೂಡ - ಇದು ಒಂದು ಅರ್ಥ. तिष्य ಎಂಬ ಪದಕ್ಕೆ ಕಲಿಯುಗ ಎಂಬ ಮತ್ತೊಂದು ಅರ್ಥವೂ ಇದೆ. कलियुगोत्पन्नोऽपि ಕಲಿಯುಗದಲ್ಲಿ ಹುಟ್ಟಿದವನು ಎಂದು ಅರ್ಥ. ಇದು ಮೊದಲನೆಯ

ವಿರೋಧ. ಇದಕ್ಕೆ ಪರಿಹಾರ सुकृतानां पुण्यानां, भूः स्थानम् इति विरोधपरिहारः । ಅಂದರೆ ಸುಕೃತದಿಂದ (ಪುಣ್ಯದಿಂದ) ಹುಟ್ಟಿದ್ದಾನೆ ಎಂದಾಗ ವಿರೋಧ ಪರಿಹಾರವಾಗುತ್ತದೆ. ಕಲಿಯುಗದಲ್ಲಿ ಹುಟ್ಟಿದರೂ ಸುಕೃತದಿಂದ ಹುಟ್ಟಿದ್ದಾನೆ ಎಂದಾಗ ಮೊದಲನೆಯ ವಿರೋಧಕ್ಕೆ ಪರಿಹಾರ.

2. ಎರಡನೆಯ ವಿರೋಧವೆಂದರೆ तिष्यजातोऽपि श्रवणोदितः ಪುಷ್ಯ ನಕ್ಷತ್ರದಲ್ಲಿ ಜನಿಸಿದರೂ ಶ್ರವಣನಕ್ಷತ್ರದಲ್ಲಿ ಹುಟ್ಟಿದ್ದಾನೆ ಎಂದು ಅರ್ಥ. ಶ್ರವಣ ಮತ್ತು ಪುಷ್ಯ ಎರಡೂ ನಕ್ಷತ್ರಗಳಲ್ಲಿ ಹುಟ್ಟಲು ಹೇಗೆ ಸಾಧ್ಯ? ಇಲ್ಲಿ ವಿರೋಧವಾಗುತ್ತದೆ. ಇದಕ್ಕೆ ಪರಿಹಾರ तिष्यजातः ಎಂಬುದಕ್ಕೆ कलियुगजातः ಕಲಿಯುಗದಲ್ಲಿ ಹುಟ್ಟಿದವನು ಎಂದಾಗ ವಿರೋಧಪರಿಹಾರವಾಗುತ್ತದೆ. ಆಗ ಕಲಿಯುಗದಲ್ಲಿ ಹುಟ್ಟಿದರೂ ಶ್ರವಣನಕ್ಷತ್ರದಲ್ಲಿ ಜನಿಸಿದವನು ಎಂದು ವಿರೋಧ ಪರಿಹಾರವಾಗುತ್ತದೆ.

3. ಮೂರನೆಯ ವಿರೋಧವೆಂದರೆ तस्य श्रवणोदितस्य कृष्णभूपतेः पुनर्वसूदयः ಶ್ರೀಕೃಷ್ಣರಾಜನು ಶ್ರವಣನಕ್ಷತ್ರದಲ್ಲಿ ಜನಿಸಿದರೂ ಪುನರ್ವಸು ನಕ್ಷತ್ರದಲ್ಲಿ ಹುಟ್ಟಿದನು ಎಂದಾಗ ವಿರೋಧವಾಗುತ್ತದೆ. ಶ್ರವಣ ಮತ್ತು ಪುನರ್ವಸು ನಕ್ಷತ್ರಗಳಲ್ಲಿ ಒಮ್ಮೆಲೆ ಹುಟ್ಟುವುದು ಹೇಗೆ ಸಾಧ್ಯ? ಇದಕ್ಕೆ ಪರಿಹಾರ पुनः आवृत्या वसूदयः अर्थिभ्यः प्रतिपादनेऽपि पुनः धनोत्कर्षः ಎಂಬುದರಿಂದ. ಎಂದರೆ ಬೇಡಿ ಬಂದಂತಹವರಿಗೆ ದಾನಧರ್ಮಾದಿಗಳನ್ನು ಮಾಡುತ್ತಲೇ ಇದ್ದರೂ ಕೂಡ ಹಣ ಮತ್ತೆ ಮತ್ತೆ ಉದಯವಾಗುತ್ತಲೇ ಇತ್ತು ಅಂದರೆ ಐಶ್ವರ್ಯಾಭಿವೃದ್ಧಿಯಾಗುತ್ತಲೇ ಇತ್ತು ಎಂದಾಗ ವಿರೋಧ-ಪರಿಹಾರ. ಶ್ರವಣನಕ್ಷತ್ರದಲ್ಲಿ ಹುಟ್ಟಿದ ಶ್ರೀಕೃಷ್ಣರಾಜರಿಗೆ पुनः वसू उदयः ಮತ್ತೆ ಮತ್ತೆ ಐಶ್ವರ್ಯದ ಅಭಿವೃದ್ಧಿಯಾಗುತ್ತಿದೆ ಎಂದಾಗ ವಿರೋಧ ಪರಿಹಾರವಾಯಿತು.

ಇಲ್ಲಿ ಶಬ್ದಚಮತ್ಕಾರದ ಮೂಲಕ ವಿರೋಧವು ಒಂದು ಅರ್ಥದಿಂ ತೋರಿಕೆಗಾಗಿ ಕಂಡು ಬಂದು ಬೇರೊಂದು ಅರ್ಥದಿಂದ ಪರಿಹಾರವಾಗು-ವುದರಿಂದ ಇಲ್ಲಿ ವಿರೋಧಾಭಾಸ ಅಲಂಕಾರ (ನೋಡಿ ಶ್ಲೋಕ 3) ಇದೆ.

ಈ ಶ್ಲೋಕವು ಅನುಷ್ಟುಪ್ ಛಂದಸ್ಸಿನಲ್ಲಿದೆ.]

44. ರತ್ನಾಕರೇ ಚಾಂದ್ರಮಸಾನ್ವಯೇಽಭೂ
ಚ್ಛ್ರೀಚಾಮರಾಜಾಖ್ಯಮಹಾಮಣಿರ್ಯಃ |
ಶ್ರೀಕೃಷ್ಣರಾಟ್ ಕಲ್ಪತರುಸ್ತತೋಽಭೂ-
ತ್ತತೋ ಯಶಶ್ಚಂದ್ರ ಇದಂ ವಿಚಿತ್ರಮ್ ||

ಭಾವಾರ್ಥ : *ಚಂದ್ರ ಹುಟ್ಟಿದಂತಹ ಸಮುದ್ರದಲ್ಲಿ (ಯದುವಂಶವು ಚಂದ್ರವಂಶಕ್ಕೆ ಸೇರುತ್ತವೆ) ಶ್ರೀಚಾಮರಾಜ ಎಂಬ ಹೆಸರಿನ ಮಹಾಮಣಿ (ಚಿಂತಾಮಣಿ)ಯು ಹುಟ್ಟಿತು. ನಂತರ ಅದೇ ಮಣಿಯಲ್ಲಿ ಕೃಷ್ಣರಾಜ ಎಂಬ ಕಲ್ಪವೃಕ್ಷವೂ ಜನಿಸಿತು. ಅದಾದ ಮೇಲೆ ಕೀರ್ತಿ ಎಂಬ ಚಂದ್ರನೂ ಹುಟ್ಟಿ ಬಂದನು. ಇದು ವಿಚಿತ್ರವಾದದ್ದು (ಆಶ್ಚರ್ಯಕರವಾದದ್ದು).*

[ವಿಶೇಷಾಂಶ : ಈ ಶ್ಲೋಕದಲ್ಲಿ ವಿಭಾವನಾ ಅಲಂಕಾರ (ನೋಡಿ ಶ್ಲೋಕ 13)ವಿದೆ. ಸಮುದ್ರದಲ್ಲಿ ಮಹಾಮಣಿ ಹುಟ್ಟಿತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಇಲ್ಲಿ ಮಹಾಮಣಿ ಎಂಬ ಕಾರ್ಯದಿಂದ ಇನ್ನೊಂದು (ಕಲ್ಪವೃಕ್ಷ) ಹುಟ್ಟಿತು ಅಂದಾಗ ಕಾರಣವಲ್ಲದ ವಸ್ತುವಿನಿಂದ ಕಾರ್ಯ ಹುಟ್ಟಿತು. ಆಗ ವಿಭಾವನಾ ಅಲಂಕಾರದ ನಾಲ್ಕನೆಯ ಭೇದ(ನೋಡಿ ಶ್ಲೋಕ 23)ವಾಗುತ್ತದೆ.

ಸಮುದ್ರವನ್ನು ಕಡೆದಾಗಲೇ ಚಿಂತಾಮಣಿ, ಕಲ್ಪವೃಕ್ಷ, ಚಂದ್ರ, ಲಕ್ಷ್ಮೀ, ಉಚ್ಚೈಶ್ರವಸ್ಸು, ಐರಾವತ, ಮದ್ಯ, ಧನ್ವಂತರಿ, ಕೌಸ್ತುಭಮಣಿ ಇವೆಲ್ಲ ಹುಟ್ಟಿ ಬಂದವು. ಇಲ್ಲಿ ಶ್ರೀಚಾಮರಾಜ ಎಂಬ ಮಹಾಮಣಿ (ಚಿಂತಾಮಣಿ)ಯಿಂದಲೇ

ಶ್ರೀಕೃಷ್ಣರಾಜ ಎಂಬ ಕಲ್ಪವೃಕ್ಷವೂ ಹುಟ್ಟಿದೆ ಎಂದು ಹೇಳಿದೆ. ಆದರೆ ಚಿಂತಾಮಣಿ ಮತ್ತು ಕಲ್ಪವೃಕ್ಷವೆರಡೂ ಸಮುದ್ರಮಂಥನದಿಂದಲೇ ಉತ್ಪನ್ನ-ವಾದದ್ದು. ಆದರೆ ಇಲ್ಲಿ ಮಹಾಮಣಿಯಿಂದಲೇನೇ ಕಲ್ಪವೃಕ್ಷವು ಜನಿಸಿದೆ ಎಂಬುದು ಹೇಗೆ ಸಾಧ್ಯ? ಇದು ಆಶ್ಚರ್ಯಕರವಾದದ್ದು. ಮಹಾಮಣಿಯಿಂದ ಕಲ್ಪವೃಕ್ಷವೆಂಬುದು, ಕಲ್ಪವೃಕ್ಷದಿಂದ ಚಂದ್ರ ಹುಟ್ಟುವಿಕೆ ಎಂಬುದು ಆಶ್ಚರ್ಯ-ಕರ. ಇಲ್ಲಿ ಕಾರಣವಲ್ಲದ ವಸ್ತುವಿನಿಂದ ಕಾರ್ಯವು ಹುಟ್ಟಿದೆಯಾದ್ದರಿಂದ ವಿಭಾವನಾಲಂಕಾರ.

ಈ ಶ್ಲೋಕದಲ್ಲಿ ಉಪಜಾತಿ ವೃತ್ತವಿದೆ. ಇಲ್ಲಿ ಮೊದಲ ಮೂರು ಪಾದಗಳು ಇಂದ್ರವಜ್ರಾ ವೃತ್ತದಲ್ಲೂ, ನಾಲ್ಕನೆಯ ಪಾದವು ಉಪೇಂದ್ರವಜ್ರಾ ವೃತ್ತದಲ್ಲೂ ಇದೆ.]

45. ದಾನೈರ್ವೈರೋಚನಿಜಿತಿ ತನಯೇ ಶ್ರೀಕೆಂಪನಂಜಮಾಂಬಾಯಾಃ |
ವೈರೋಚನಿಭಿಕ್ಷೂತ್ತಮಸುತಾದಿತಿರ್ವರಸುತತ್ವಮದಮಜಹಾತ್ ||

ಭಾವಾರ್ಥ : *ಭಿಕ್ಷೂತ್ತಮರಾದ ಇಂದ್ರ-ಉಪೇಂದ್ರರನ್ನು ಮಕ್ಕಳಾಗಿ ಪಡೆದಿದ್ದೇನೆ ಎಂದು ಅಹಂಕಾರದಿಂದ ಇದ್ದ ಅದಿತಿಯು, ದಾನದಲ್ಲಿ ಬಲಿ ಮತ್ತು ಕರ್ಣರನ್ನೂ ಯಾಚಕರ ವಿವಿಧ ಅಭೀಷ್ಟಗಳನ್ನು ದಾನ ಮಾಡಿ ನೆರವೇರಿಸುವುದರ ಮೂಲಕ ಮೀರಿಸಿದಂತಹ ಕೆಂಪನಂಜಾಂಬ ಮಹಾರಾಣಿಯ ಮಗನಾದ ಶ್ರೀಕೃಷ್ಣರಾಜಕಂಠೀರವನನ್ನು ನೋಡಿ, ತನ್ನ ಗರ್ವವನ್ನು ತ್ಯಜಿಸಿದಳು.*

[ವಿಶೇಷಾಂಶ : ಇಂದ್ರ-ಉಪೇಂದ್ರರಿಗೆ ಕ್ರಮವಾಗಿ ಕರ್ಣ ಮತ್ತು ಬಲಿ. ವಿರೋಚನ = ಸೂರ್ಯ, ವೈರೋಚನಿ = ಸೂರ್ಯನ ಮಗ ಕರ್ಣ ಮತ್ತು ವಿರೋಚನ = ದೈತ್ಯ, ಅವನ ವಂಶ ಪರಂಪರೆಯಲ್ಲಿ ಬಂದ ವೈರೋಚನಿ = ಬಲಿ. ಇಬ್ಬರೂ ದಾನವನ್ನು ನೀಡಿ 'ದಾನಶೂರ'ರೆನಿಸಿಕೊಂಡಿದ್ದರು. ಆದರೆ

ಕೃಷ್ಣರಾಜನು ಅನೇಕ ವಿಧವಾದ ದಾನಗಳನ್ನು ಮಾಡಿ ಅಂದರೆ, ಧನ-ಕನಕ ವಸ್ತ್ರ-ಭೂಮಿ ಇತ್ಯಾದಿಗಳನ್ನು ದಾನ ಮಾಡಿ ಅವರಿಬ್ಬರಿಗಿಂತಲೂ ಶ್ರೇಷ್ಠವಾದ ದಾನಿ ಎನಿಸಿಕೊಂಡಿದ್ದನು. ರಾಕ್ಷಸಕುಲದಲ್ಲಿ ಜನಿಸಿದವನು ಬಲಿ, ಕನ್ನಿಕೆಗೆ ಜನಿಸಿದವನು ಕರ್ಣ, ಈ ಕಾರಣ ಈ ದಾನಿಗಳಲ್ಲಿ ಜನ್ಮದೋಷ (ಹೀನತೆ) ಇದೆ. ಆದರೆ (ಯಾಚಕರಾಗಿದ್ದರೂ) ನನ್ನ ಮಕ್ಕಳು ಉತ್ತಮ ಕುಲ ಸಂಪನ್ನರು ಎಂದು ಅದಿತಿಗೆ ಗರ್ವವಿತ್ತು. ಈ ಕೆಂಪನಂಜಾಂಬೆಯ ಮಗನಾದ ಕೃಷ್ಣರಾಜನಾದರೋ ವಿಶಿಷ್ಟ ದಾನಗಳನ್ನು ಮಾಡುವುದರ ಮೂಲಕ ಶ್ರೇಷ್ಠದಾನಿಗಳೆಂದು ಕೀರ್ತಿವಂತರಾಗಿದ್ದ ಬಲಿ, ಕರ್ಣರನ್ನು ಮೀರಿಸಿದ್ದಲ್ಲದೆ ಉತ್ತಮ (ಯದುಕುಲ) ಕುಲಸಂಪನ್ನತೆಯಿಂದ ಯಾಚಕರಾಗಿದ್ದ ಇಂದ್ರೋಪೇಂದ್ರರನ್ನು ಮೀರಿಸಿರುವನು ಎಂಬುದನ್ನು ಗಮನಿಸಿ ಅದಿತಿ ತನ್ನ ಗರ್ವ ತ್ಯಜಿಸಿದಳು.

ಉಪಮಾನವಾದ ಇಂದ್ರೋಪೇಂದ್ರರನ್ನೂ (ಕರ್ಣ-ಬಲಿಯರನ್ನು) ಮೀರಿಸಿರುವನೆಂದು ವರ್ಣಿಸುವುದರ ಮೂಲಕ ಉಪಮೇಯದ ಉತ್ಕರ್ಷವನ್ನು ಹೇಳಲಾಗಿದೆ. ಆದುದರಿಂದ ಇಲ್ಲಿ ವ್ಯತಿರೇಕ ಅಲಂಕಾರ (ನೋಡಿ ಶ್ಲೋಕ 3).

ಇಲ್ಲಿ ಉದ್ಗೀತಿ ಎಂಬ ಮಾತ್ರಾರ್ಥಂದಸ್ಸಿದೆ.]

46. ಸಮಸ್ತಜಗದಂಬಿಕಾಚರಣಪಂಕಜಾರಾಧನ-
ಪ್ರಭಾವವಿಪುಲೀಭವದ್ವಿಭವದ್ವಿಭವಸಾರಸಾಮ್ರಾಜ್ಯಭೂಃ |
ಅಶೇಷಬುಧತೋಷಕೃತ್ಸಕಲಸದ್ಗುಣೈಕಾಶ್ರಯಸ್ಸ
ಕೃಷ್ಣಧರಣೀಪತಿರ್ವಿಜಯತಾಂ ಮುದಾ ಸರ್ವದಾ ||

ಭಾವಾರ್ಥ : ಇಡೀ ಭೂಮಂಡಲಕ್ಕೆ ಜನನಿಯಾದಂತಹ ಚಾಮುಂಡೇಶ್ವರಿ (ಅಂಬಿಕೆ) ಯ ಪಾದಕಮಲಗಳನ್ನು ಆರಾಧನೆ ಮಾಡಿದುದರ ಪ್ರಭಾವದಿಂದ ಸರ್ವೋತ್ಕೃಷ್ಟವಾಗಿ ವರ್ಧಿಸಿದ ಸಾಮ್ರಾಜ್ಯಾದಿ ಸಕ

ಐಶ್ವರ್ಯಗಳಿಂದ ಕೂಡಿರುವಂತಹ, ಸಮಸ್ತ ವಿದ್ವಾಂಸರ ಸಂತೋಷಕ್ಕೆ ಕಾರಣವಾಗಿರುವಂತಹ, ಸಮಸ್ತ ಸದ್ಗುಣಗಳಿಗೂ ಆಶ್ರಯನಾಗಿರುವ ಶ್ರೀಕೃಷ್ಣರಾಜನು ಯಾವಾಗಲೂ ಸಂತೋಷದಿಂದಿರಲಿ, ಜಯಶೀಲನಾಗಲಿ.

[ವಿಶೇಷಾಂಶ : ಈ ಶ್ಲೋಕದಲ್ಲಿ ಪೃಥ್ವೀವೃತ್ತವಿದೆ.]

47. ಲೋಕಖ್ಯಾತಪರಾಕ್ರಮಾದಿಸುಗುಣಶ್ರೀಚಾಮರಾಜಾತ್ಮಜ
ಶ್ರೀಮತ್ಕೃಷ್ಣವಸುಂಧರೇಶ್ವರಗುಣೈಃ ಸಂಯೋಜಿತೈರಾತ್ಮನಾ ।
ಯಾ ಸ್ಯೂತಾಜನಿ ನೀಲಕಂಠವಿದುಷಾ ಸುಶ್ಲೋಕರತ್ನಾವಳೀ
ಸಾ ತಸ್ಯೈವ ಮಹೀಶ್ವರಸ್ಯ ಹೃದಯಾರೋಹಂ ವಿಧತ್ತಾಂ ಚಿರಮ್ ॥

ಭಾವಾರ್ಥ : *ನೀಲಕಂಠ ಕವಿ ಎಂಬ ನಾಮಧೇಯನಾದ ನಾನು ನನ್ನ ಬುದ್ಧಿಗೆ ಗೋಚರವಾದಂತೆ ಒಂದೇ ದಾರದಲ್ಲಿ ಕಟ್ಟಲ್ಪಟ್ಟಂತಹ, ಲೋಕ ಪ್ರಸಿದ್ಧನಾದ, ಪರಾಕ್ರಮಾದಿ ಒಳ್ಳೆಯ ಗುಣಗಳುಳ್ಳ ಶ್ರೀಚಾಮರಾಜೇಂದ್ರನ ಮಗನಾದ, ಭೂಮಿಪಾಲನಾದ ಶ್ರೀಕೃಷ್ಣರಾಜನ ಶೌರ್ಯಪರಾಕ್ರಮಾದಿ ಗುಣಗಳಿಗೆ ಸಂಬದ್ಧವಾಗಿ ಇರುವಂತಹ ಶ್ಲೋಕಗಳೆಂಬ ರತ್ನಗಳ ಸಾಲು (ಆವಳಿ) (ಶ್ಲೋಕಗಳೆಂಬ ರತ್ನಹಾರ) ಶ್ರೀಕೃಷ್ಣರಾಜ ಎಂಬ ಹೆಸರಿನ ರಾಜನ ಹೃದಯವನ್ನೇರಲಿ. (ಅಂದರೆ ಹೃದಯ (ಎದೆಯ) ಭಾಗದಲ್ಲಿ ದೀರ್ಘಕಾಲ ಧರಿಸುವಂತಾಗಲಿ.)*

[ವಿಶೇಷಾಂಶ : ಈ ಶ್ಲೋಕದಲ್ಲಿ ಸಂಕರಾಲಂಕಾರವಿದ್ದು, ಶ್ಲೇಷ-ರೂಪಕಾಲಂಕಾರಗಳು ಅಂಗಾಂಗಿಭಾವದಿಂದ ಕೂಡಿವೆ. ಅವನ ಗುಣಗಳು ಎಂಬುದೇ ಅದರ ಅಂಗಗಳು. ಗುಣಗಳು ಎಂಬುದೇ ರತ್ನಗಳು. ರತ್ನಗಳು ಎಂಬುದು ಈ ರಾಜನ ಗುಣಗಳಿಂದಲೇ. ಗುಣ ಎಂಬತಕ್ಕ ಗುಣ (= ದಾರ) ಎಂದಾಗ ರೂಪಕ ಅಲಂಕಾರ (ನೋಡಿ ಶ್ಲೋಕ 21). ಗುಣ ಎಂಬ ಗುಣದಿಂದ (ಶೌರ್ಯ-ಪರಾಕ್ರಮಾದಿ ಗುಣಗಳಿಂದ) ಗುಣವೆಂಬ ದಾರದಿಂದ ಕಟ್ಟಲ್ಪಟ್ಟಿದ್ದು

ಎಂದಾಗ ಶ್ಲೇಷಾಲಂಕಾರ (ನೋಡಿ ಶ್ಲೋಕ 1) ಗೋಚರವಾಗುತ್ತದೆ. ಇಲ್ಲಿ ಪ್ರಧಾನವಾಗಿ ಸಂಕರಾಲಂಕಾರವಿದ್ದು ಶ್ಲೇಷ ಮತ್ತು ರೂಪಕಗಳು ಅಂಗವಾಗಿವೆ.

ಸಂಕರಾಲಂಕಾರವೆಂದರೆ ಪರಸ್ಪರವಾಗಿ ಭೇದವು ಕಾಣದಂತೆ ಹೊಂದಿಕೊಳ್ಳುವ ಅಲಂಕಾರಗಳು ಒಂದೆಡೆ ಸೇರುವುದು.

ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತವಿದೆ.

ಕವಿಯು लक्ष्मीमाकलयन् ಎಂಬ ಮೊದಲನೆಯ ಶ್ಲೋಕದಿಂದ लोक-ख्यातपराक्रमादि ಎಂಬ ಶ್ಲೋಕದವರೆಗೂ ಎಲ್ಲಾ ಶ್ಲೋಕಗಳಲ್ಲಿಯೂ ಕೃಷ್ಣರಾಜನ ಕುರಿತಾದ ಪ್ರೀತಿ ಮತ್ತು ಗೌರವಾದರಗಳಿಂದಾಗಿ ಭಾವಧ್ವನಿಯನ್ನು, ಅದಕ್ಕೆ ಪೂರಕವಾಗಿ ಅಲಂಕಾರಗಳನ್ನು ಹೇಳಿದ್ದಾನೆ. ಹಿಂದೆ ಹೇಳಿದ ಶ್ಲೇಷ ಮೂಲಕವಾಗಿ ರೂಪಕಾಲಂಕಾರ, ಉತ್ಪ್ರೇಕ್ಷಾಲಂಕಾರ, ಉಪಮಾಲಂಕಾರ, ವಿಭಾವನಾಲಂಕಾರ, ವಿರೋಧಾಭಾಸಾಲಂಕಾರ, ಶ್ಲೇಷಾಲಂಕಾರ ಇತ್ಯಾದಿ ಅಲಂಕಾರಗಳೂ ಕೂಡ ಈ ಭಾವಧ್ವನಿಯನ್ನು ಪೋಷಣೆ ಮಾಡುತ್ತಿವೆ.

ಇಲ್ಲಿ ಭಾವಧ್ವನಿ ಅಭಿವ್ಯಕ್ತವಾಗಿದೆ. ಅಂದರೆ ಅದು ನೇರವಾಗಿ ಇಲ್ಲಿ ಗೋಚರಿಸುತ್ತಿಲ್ಲ. ವ್ಯಂಗ್ಯವಾಗಿ ತೋರುತ್ತಿದೆ. ಇದರ ಮೂಲಕ ಕವಿಯು ತನ್ನ ಕಾವ್ಯವು ಉತ್ತಮೋತ್ತಮಕಾವ್ಯಗಳ ಸರಣಿಗೆ ಸೇರಿದೆ ಎಂಬುದನ್ನು ಪರೋಕ್ಷವಾಗಿ ಹೇಳುತ್ತಿದ್ದಾನೆ.

ಅಂದರೆ ಕವಿ ತಾನು ತಿಳಿಸಹೊರಟಿರುವ ಶ್ರೀಕೃಷ್ಣರಾಜನ ಗುಣಲಕ್ಷಣಗಳ ವೈಶಿಷ್ಟ್ಯ ವೈವಿಧ್ಯ ವೈಲಕ್ಷಣ್ಯಗಳನ್ನು ನೇರವಾದ ಶಬ್ದಗಳಿಂದ ಹೇಳದೆ, ಶ್ಲೇಷ ಇತ್ಯಾದಿ ಅಲಂಕಾರಗಳನ್ನು ಆಶ್ರಯಿಸಿ ಭಾವಧ್ವನಿಯ ಮೂಲಕ ವ್ಯಕ್ತಪಡಿಸಿದ್ದಾನೆ. ಆದುದರಿಂದ ಇದು ಧ್ವನಿಕಾವ್ಯಕ್ಕೆ ಉತ್ತಮ ಉದಾಹರಣೆ ಎಂದು ಹೇಳಿಕೊಳ್ಳುತ್ತಾ ತನ್ನ ಕಾವ್ಯ ಉತ್ತಮೋತ್ತಮ ಕಾವ್ಯದ ಗುಂಪಿಗೆ ಸೇರುವುದೆಂದು ಹೇಳಿಕೊಂಡಿದ್ದಾನೆ.]

48. ಅತೀತೇಷು ಶಕಾಬ್ದೇಷು ಶಾಲಿವಾಹನಭೂಭುಜಃ |
ರತ್ನಾದ್ರಿಮುನಿಭೂಸಂಖ್ಯೇಷ್ವಬ್ದೇ ಪೈಂಗಳನಾಮಕೇ ||

49. ಇಷೇ ಶುಕ್ಲೇ ಸೌರಿವಾರಸಂಯುತಪ್ರತಿಪದ್ದಿನೇ |
ರತ್ನಸಿಂಹಾಸನಾರೂಢಶ್ರೀಮತ್ಕೃಷ್ಣಮಹೀಶ್ವರೇ ||

50. ಕೃಷ್ಣರಾಜಗುಣಾಲೋಕನಾಮಾ ಗ್ರಂಥೋ ವಿನಿರ್ಮಿತಃ |
ತನೋತು ವಿದುಷಾಂ ಚಿತ್ತೇ ಚಮತ್ಕಾರಪರಂಪರಾಮ್ ||

ಭಾವಾರ್ಥ : *1779ನೆಯ ಶಾಲಿವಾಹನ ಶಕೆಯ ಪಿಂಗಳ ಎಂಬ ಹೆಸರಿನ ವರ್ಷದ ಆಶ್ವಿನಮಾಸದ ಶುಕ್ಲಪಕ್ಷದಲ್ಲಿ ಪಾಡ್ಯದ ಶನಿವಾರದ ದಿನ ಶ್ರೀಕೃಷ್ಣರಾಜಕಂಠೀರವನು ಕುಲಕ್ರಮಾಗತವಾಗಿ ಬಂದಂತಹ ರತ್ನಸಿಂಹಾಸನಾರೋಹಣವನ್ನು ಮಾಡಿದನು. ಅದೇ ದಿನ ಶ್ರೀಕೃಷ್ಣರಾಜನ ಗುಣಗಳನ್ನು ಪ್ರಕಾಶಪಡಿಸುವಂತಹ 'ಶ್ರೀಕೃಷ್ಣರಾಜಗುಣಾಲೋಕ' ಎಂಬ ಹೆಸರಿನ ಈ ಗ್ರಂಥವು (ನೀಲಕಂಠ ಕವಿಯಿಂದ) ರಚಿಸಲ್ಪಟ್ಟಿತು. ಈ ಗ್ರಂಥವು ಪಂಡಿತರ, ವಿದ್ವಾಂಸರ ಮನಸ್ಸಿನಲ್ಲಿ ಸಂತೋಷದ ಪರಂಪರೆಯನ್ನೇ ಉಂಟುಮಾಡಲಿ.*

[ವಿಶೇಷಾಂಶ : ಈ ಶ್ಲೋಕಗಳು ಅನುಷ್ಟುಪ್ ಛಂದಸ್ಸಿನಲ್ಲಿವೆ.]

ಬಾಲಮುಕುಂದಾಖ್ಯೋ ಯಃ ಶ್ರೀಕೃಷ್ಣಕ್ಷೋಣಿಪಾಲವರ್ಯೇಣ |
ದತ್ತತ್ರಿವಿಕ್ರಮಾಖ್ಯೋ ವ್ಯಾಖ್ಯೇಯಂ ತತ್ಕೃತಾ ಚಿರಂ ಜೀಯಾತ್ ||

ಶ್ರೀಕೃಷ್ಣರಾಜ ಕಂಠೀರವರಿಂದ 'ತ್ರಿವಿಕ್ರಮ' ಎಂಬ ಹೆಸರನ್ನು ಪಡೆದ ಬಾಲಮುಕುಂದನೆಂಬುವನಿಂದ ರಚಿಸಲ್ಪಟ್ಟ ಈ ವ್ಯಾಖ್ಯೆ ಚಿರಕಾಲ ಉಳಿಯಲಿ.

[ವಿಶೇಷಾಂಶ : ಈ ಶ್ಲೋಕವು ಆರ್ಯಾ ಎಂಬ ಮಾತ್ರಾಛಂದಸ್ಸಿನಲ್ಲಿದೆ.]

ಇಲ್ಲಿಗೆ ಕನ್ನಡ ಅನುವಾದಭಾಗವು ಸಂಪೂರ್ಣವಾಯಿತು.

ಅನುಬಂಧ-1

ಶ್ರೀಕೃಷ್ಣರಾಜಗುಣಾಲೋಕ ಗ್ರಂಥದಲ್ಲಿ ಉಲ್ಲಿಖಿತವಾಗಿರುವ ಛಂದಸ್ಸುಗಳ ವಿವರಣೆ

1. ಮಾತ್ರಾಛಂದಸ್ಸು

1. ಆರ್ಯಾ :

ಇದು ಆರ್ಯಾಪ್ರಕರಣದ ಮೊದಲ ಮಾತ್ರಾಛಂದಸ್ಸು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

लक्ष्मैतत्सप्त गणा गोपेता भवति नेह विषमे जः ।
षष्ठोऽयं नलघू वा प्रथमेऽर्धे नियतमार्यायाः ।।

ಆರ್ಯಾವೃತ್ತದ ಪೂರ್ವಾರ್ಧದಲ್ಲಿ ಏಳುಗಣಗಳೂ (ನಾಲ್ಕು ನಾಲ್ಕು ಮಾತ್ರೆಯ ಏಳು ಗಣ) ಕಡೆಯಲ್ಲಿ ಒಂದು ಗುರುವೂ ಇರಬೇಕು. ವಿಷಮ ಸ್ಥಾನಗಳಾದ 1-3-5-7 ಈ ಗಣಗಳು ಜಗಣವಾಗಿರಬಾರದು. ಆರನೆಯ ಗಣವು ಜಗಣ ಅಥವಾ ನಗಣ ಲಘುವುಳ್ಳದ್ದಾಗಿರಬೇಕು.

षष्ठे द्वितीयलात्परके न्ले मुखलाच्च सयतिपदनियमः ।
चरमेऽर्धे पञ्चमके तस्मादिह भवति षष्ठो लः ।।

ಈಗ ಯತಿನಿಯಮವನ್ನು ತಿಳಿಸಲಾಗುತ್ತದೆ. ಆರನೆಯ ಗಣವು ನಗಣ ಲಘುವುಳ್ಳದ್ದಾಗಿದ್ದರೆ, ಆಗ ಎರಡನೆಯ ಲಘುವಿನ ಬಳಿಕ (ಅಂದರೆ

ಲಕ್ಷಣದಲ್ಲಿ ಚ್ಚ ಸ ಎಂಬಲ್ಲಿ) ಯತಿಯನ್ನು ಹೇಳಿಕೊಳ್ಳಬೇಕು. ಹಾಗೆಯೇ ಏಳನೆಯ ಗಣವೂ ನಗಣ ಲಘುವುಳ್ಳದ್ದಾಗಿದ್ದರೆ, ಆರನೆಯ ಗಣದ ಅಂತ್ಯದಲ್ಲಿ ಅಂದರೆ ಏಳನೆಯ ಗಣದ ಆದಿಯ ಲಘುವಿನ ಹಿಂದೆ (ಅಂದರೆ ಲಕ್ಷಣದಲ್ಲಿ ಸಯತಿ ಎಂಬಲ್ಲಿ) ಯತಿಯನ್ನು ಹೇಳಿಕೊಳ್ಳಬೇಕು. ಆರನೆಯ ಗಣವು ಜಗಣವಾಗಿದ್ದಲ್ಲಿ ಯತಿಯನ್ನು ಹೇಳಿರುವುದಿಲ್ಲವಾದರೂ ಆರನೆಯ ಗಣದ ಮೊದಲ ಲಘುವಿನ ಬಳಿಕ (ಅಂದರೆ ಲಕ್ಷಣದಲ್ಲಿ ಭವತಿ ಎಂಬಲ್ಲಿ) ಯತಿ ಎಂದು ತಿಳಿಯಬೇಕು.

ಆರ್ಯಾ ಉತ್ತರಾರ್ಧದ ಲಕ್ಷಣ - ಈ ಉತ್ತರಾರ್ಧದಲ್ಲಿ ಸಹ ಕಡೆಯಲ್ಲಿ ಗುರುವನ್ನುಳ್ಳ ಏಳು ಗಣಗಳು ಇರುತ್ತವೆ. ವಿಷಮಸ್ಥಾನಗಳಲ್ಲಿ (1-3-5 ಈ ಸ್ಥಾನಗಳಲ್ಲಿ) ಜಗಣ ಇರಬಾರದು. (2-4 ರಲ್ಲಿ ಬರಬಹುದು) ಮತ್ತು ಆರನೆಯ ಗಣವು ಕೇವಲ ಲಘುವಾಗಿರುತ್ತದೆ. ಐದನೆಯ ಗಣವು ನಗಣ ಲಘುವಾಗಿದ್ದರೆ, ಮೊದಲ ಲಘುವಿನ ಹಿಂದೆ (ಅಂದರೆ ಲಕ್ಷಣದಲ್ಲಿ ತಸ್ಮಾ ಎಂಬಲ್ಲಿ) ಯತಿ ಎಂದು ತಿಳಿಯಬೇಕು.

ಶ್ಲೋಕ - 38 ಮತ್ತು ಕೊನೆಯ ಶ್ಲೋಕ.

ಶ್ಲೋಕ 38ಕ್ಕೆ ಹೀಗೆ ಸಮನ್ವಯ ಮಾಡಬಹುದು -

1	2	3	4	5	6 ಜಗಣ	7	ಗು
∪∪–	∪∪–	∪∪–	∪∪–	∪∪–	∪–∪	––	–
हनुम	द्गरुड	प्रमुखै	र्बिरुदै	रितर	क्षितीश्व	राल	भ्यैः ।

1	2	3	4	5	ಲ	7	ಗು
––	∪– ∪	–∪∪	–∪∪	––	∪	–∪∪	–
राजो	त्तमो भ	वानिति	कृष्णम	हीपा	ल	निश्चिनु	मः ॥

ಕೊನೆಯ ಶ್ಲೋಕದ ಸಮನ್ವಯವನ್ನು ಹೀಗೆ ಮಾಡಬಹುದು -

1	2	3	4	5	6 ಜಗಣ	7	ಗು
– ∪ ∪	– –	– –	– –	– –	∪ – ∪	– –	–
बालमु	कुन्दा	ख्यो यः	श्रीकृ	ष्णाक्षो	णिपाल	वर्ये	ण ।

1	2	3	4	5	ಲ	7	ಗು
– ∪ ∪	∪ ∪ –	– –	– –	∪ ∪ –	∪	– –	–
दत्तत्रि	विक्रमा	ख्यो व्या	ख्येयं	तत्कृता	चि	रं जी	यात् ॥

2. ಉದ್ಗೀತಿ :

ಇದು ಗೀತಿಪ್ರಕರಣದ ಮಾತ್ರಾಛಂದಸ್ಸು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

> आर्याशकलद्वितयं व्यत्ययरचितं भवेद्यस्याम् ।
> सोद्गीतिः किल कथिता तद्वद्यत्यंशभेदसंयुक्ता ।।

ಆರ್ಯಾಛಂದಸ್ಸಿನ ಪೂರ್ವಾರ್ಧವು ಉತ್ತರಾರ್ಧವಾಗಿಯೂ, ಉತ್ತರಾರ್ಧವು ಪೂರ್ವಾರ್ಧವಾಗಿಯೂ ವ್ಯತ್ಯಯಗೊಂಡಲ್ಲಿ ಅದು ಉದ್ಗೀತಿ ಛಂದಸ್ಸಾಗುತ್ತದೆ. ಅಂದರೆ ಪೂರ್ವಾರ್ಧದಲ್ಲಿ ಕಡೆಯಲ್ಲಿ ಗುರುವುಳ್ಳ ಏಳು ಗಣಗಳಿರಬೇಕು ಮತ್ತು ವಿಷಮಸ್ಥಾನಗಳಲ್ಲಿ ಜಗಣವಿರಬಾರದು. ಆದರೆ ಪೂರ್ವಾರ್ಧದ ಆರನೆಯ ಸ್ಥಾನ ಕೇವಲ ಲಘುವಾಗಿರುತ್ತದೆ ಮತ್ತು ಉತ್ತರಾರ್ಧದ ಆರನೆಯ ಸ್ಥಾನವು ಜಗಣವಾಗಿರುತ್ತದೆ ಅಥವಾ ನಗಣ ಲಘುವಾಗಿರತ್ತದೆ. ಪೂರ್ವಾರ್ಧದಲ್ಲಿ ಮೊದಲ ಮೂರು ಅಂಶಗಳ ಬಳಿಕ ಹಾಗೂ ಐದನೆಯ 7ಗಣದ ಬಳಿಕ ಯತಿಯನ್ನು ಹೇಳಿಕೊಳ್ಳಬಹುದು. ಮತ್ತು ಉತ್ತರಾರ್ಧದಲ್ಲಿ ಆರನೆಯ ಗಣದ ಮೊದಲ ಲಘುವಿನ ಬಳಿಕ ಯತಿಯನ್ನು ಹೇಳಿಕೊಳ್ಳಬಹುದು. ಇದು ಉದ್ಗೀತಿಯಾಗುತ್ತದೆ.

ಶ್ಲೋಕ - 45.

ಶ್ಲೋಕ 45ಕ್ಕೆ ಹೀಗೆ ಸಮನ್ವಯ ಮಾಡಬಹುದು -

1	2	3	4	5	6 ಜಗಣ	7	ಗು	
— —	— —	∪∪ ∪∪	∪∪ —	— —	∪ — ∪	— —	—	
दानैः	वैरो	चनिजिति	तनये	श्रीके	म्पनञ्ज	माम्बा	याः	।

1	2	3	4	5	6 ಜಗಣ	7	ಗು	
— —	∪∪ —	— ∪∪	∪ — ∪	— ∪∪	∪ — ∪	∪∪∪∪	—	
वैरो	चनिभि	क्ष्मूत्तम	सुतादि	तिर्वर	सुतत्व	मदमज	हात्	॥

3. ಔಪಚ್ಛಂದಸಿಕ :

ಇದು ವೈತಾಲೀಯಪ್ರಕರಣದ ಮಾತ್ರಾಛಂದಸ್ಸು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

पर्यन्ते र्यौ तथैव शेषं त्वौपच्छन्दसिकं सुधीभिरुक्तम् ।।

ಕೊನೆಯಲ್ಲಿ ಯಗಣ ಮತ್ತು ರಗಣಗಳಿದ್ದು, ವೈತಾಲೀಯ ಛಂದಸ್ಸಿನ ವಿಷಮ (ಮೊದಲನೆಯ ಮತ್ತು ಮೂರನೆಯ) ಪಾದಗಳಲ್ಲಿ ಆರು ಮಾತ್ರೆಗಳು ಮತ್ತು ಸಮ (ಎರಡನೆಯ ಮತ್ತು ನಾಲ್ಕನೆಯ) ಪಾದಗಳಲ್ಲಿ ಎಂಟು ಮಾತ್ರೆಗಳು ಇರುತ್ತವೆಯೋ ಅದನ್ನು ಛಂದಃಶಾಸ್ತ್ರಜ್ಞರು 'ಔಪಚ್ಛಂದಸಿಕ' ಎಂದು ಕರೆಯುತ್ತಾರೆ. ಅಂದರೆ ವೈತಾಲೀಯದಲ್ಲಿಯೇ ಪ್ರತಿ ಪಾದದಲ್ಲಿ ಗುರುವಿನ ಆಧಿಕ್ಯವಾಗುತ್ತದೆ. ಆದರಿಂದ ವಿಷಮಪಾದದಲ್ಲಿ ಹದಿನಾರು, ಸಮಪಾದದಲ್ಲಿ ಹದಿನೆಂಟು ಮಾತ್ರೆಗಳಾಗುತ್ತವೆ. ಇದು 'ಔಪಚ್ಛಂದಸಿಕ' ಎನಿಸಿಕೊಳ್ಳುತ್ತದೆ.

ಶ್ಲೋಕ - 18 ಮತ್ತು 37.

ಶ್ಲೋಕ 18ಕ್ಕೆ ಹೀಗೆ ಸಮನ್ವಯ ಮಾಡಬಹುದು -

6 ಮಾತ್ರೆಗಳು	ರಗಣ	ಯಗಣ
∪∪—∪∪	—∪—	∪——
वसुभिर्द्विज	पोषणं	शशाङ्क-
8 ಮಾತ್ರೆಗಳು	**ರಗಣ**	**ಯಗಣ**
∪∪——∪∪	—∪—	∪——
व्रतमालोच्य त	दन्वया	म्बुराशौ ।
6 ಮಾತ್ರೆಗಳು	**ರಗಣ**	**ಯಗಣ**
∪∪—∪∪	—∪—	∪——
उदितः किमु	कृष्णरा	जचन्द्रो
8 ಮಾತ್ರೆಗಳು	**ರಗಣ**	**ಯಗಣ**
∪∪——∪∪	—∪—	∪——
द्विजपोषं वसु	भिस्सदा	विधत्ते ॥

ಶ್ಲೋಕ 37ಕ್ಕೆ ಹೀಗೆ ಸಮನ್ವಯ ಮಾಡಬಹುದು -

6 ಮಾತ್ರೆಗಳು	ರಗಣ	ಯಗಣ
∪∪—∪∪	—∪—	∪——
शरदिन्दुव	लक्षचा	मरे द्वे
8 ಮಾತ್ರೆಗಳು	**ರಗಣ**	**ಯಗಣ**
∪∪——∪∪	—∪—	∪——
विधुते पार्श्वयु	गे विला	सिनीभ्याम् ।
6 ಮಾತ್ರೆಗಳು	**ರಗಣ**	**ಯಗಣ**
∪∪—∪∪	—∪—	∪——
सतताश्रित	भारती	रमोत्थे
8 ಮಾತ್ರೆಗಳು	**ರಗಣ**	**ಯಗಣ**
∪∪——∪∪	—∪—	∪——
यशसी कृष्णनृ	पस्य भा	वयामः ॥

4. ಪಥ್ಯಾವಕ್ತ್ರ :

ಇದು ವಕ್ತ್ರಪ್ರಕರಣದ ಮಾತ್ರಾಛಂದಸ್ಸು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

युजोर्जेन सरिद्भर्तुः पथ्यावक्त्रं प्रकीर्तितम् ।।

ಸಮ (ಎರಡನೆಯ ಮತ್ತು ನಾಲ್ಕನೆಯ) ಪಾದಗಳಲ್ಲಿ ನಾಲ್ಕನೆಯ ಅಕ್ಷರದ ಮುಂದೆ ಜಗಣವಿದ್ದರೆ ಅದು 'ಪಥ್ಯಾವಕ್ತ್ರ' ಎನಿಸುತ್ತದೆ.

ಶ್ಲೋಕ - 42.

ಶ್ಲೋಕ 42ಕ್ಕೆ ಹೀಗೆ ಸಮನ್ವಯ ಮಾಡಬಹುದು -

ಲ	ಮಗಣ	ಭಗಣ	ಗು	ಗು	ಯಗಣ	ಜಗಣ	ಗು
U	— — —	U — —	—	—	U — —	U — U	—
द्वि	तीयायां	समुद्ध्रू	त	स्सो	म इत्यु	क्तिरद्ध्रु	तम् ।
ಲ	ಮಗಣ	ಭಗಣ	ಗು	ಗು	ಯಗಣ	ಜಗಣ	ಗು
U	— — —	U — —	U	—	— U U	U — U	—
क	लापूर्ण	हि राजा	न	मा	साद्य वि	दधेत	माम् ॥

5. ವೈತಾಲೀಯ :

ಇದು ವೈತಾಲೀಯಪ್ರಕರಣದ ಮೊದಲ ಮಾತ್ರಾಛಂದಸ್ಸು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

षड्विषमेऽष्टौ समे कलास्ताश्च समे स्युर्नो निरन्तराः ।
न समाऽत्र पराश्रिता कला वैतालीयेऽन्ते रलौ गुरुः ।।

ವೈತಾಲೀಯ ವೃತ್ತದಲ್ಲಿ ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ಆರು ಮಾತ್ರೆಗಳು ಇರಬೇಕು. ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಎಂಟು ಮಾತ್ರೆಗಳು ಇರಬೇಕು. ಮತ್ತು ಅವುಗಳು

ನಿರಂತರವಾಗಿರಬಾರದು. ಅಂದರೆ ಕೇವಲ ಲಘುಗಳೇ ಸಾಲಾಗಿ ಎಂಟೂ ಇರಬಾರದು (ಮಧ್ಯೆ ವ್ಯವಧಾನವಿರಬೇಕು). ಮತ್ತು ಎಂಟು ಮಾತ್ರೆಗಳಲ್ಲಿ ಎರಡನೆಯ, ನಾಲ್ಕನೆಯ, ಆರನೆಯ, ಎಂಟನೆಯ ಮಾತ್ರೆಗಳು ಪರಾಶ್ರಿತವಾಗಿರಬಾರದು. ನಾಲ್ಕು ಪಾದಗಳ ಒಂದು ರಗಣ, ಒಂದು ಲಘು ಮತ್ತು ಒಂದು ಗುರುಗಳಿಂದ ಕೂಡಿರಬೇಕು. ವೈತಾಲೀಯದಲ್ಲಿ ಏಳು ಗಣ ನಿಯಮವಿಲ್ಲ. ಮಾತ್ರಾನಿಯಮ ಮಾತ್ರ ಇದೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ 6 ಮಾತ್ರೆಗಳು, 1 ರಗಣ, 1 ಲಘು ಮತ್ತು 1 ಗುರುವಿರಬೇಕು. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಈ ನಿಯಮವಿಲ್ಲದೆ ಸಾಲಾಗಿ ಎಂಟೂ ಲಘುವಿರಬಾರದು. 2, 4, 6, 8ನೆಯ ಮಾತ್ರೆಗಳು ಮುಂದಿನ ಮಾತ್ರೆಗಳಲ್ಲಿ ಬೆರತಿರಬಾರದು. ಇದು 'ವೈತಾಲೀಯ'ದ ಲಕ್ಷಣ.

ಶ್ಲೋಕ - 2

ಶ್ಲೋಕ 2ಕ್ಕೆ ಈ ಛಂದಸ್ಸನ್ನು ಹೀಗೆ ಸಮನ್ವಯಗೊಳಿಸಬಹುದು -

6 ಮಾತ್ರೆಗಳು	ರಗಣ	8 ಮಾತ್ರೆಗಳು	ರಗಣ	ಲ ಗು
∪ ∪ — ∪ ∪	— ∪ —	∪ — ∪ ∪ — — — ∪ ∪	— ∪ —	∪ —
विजयेन कृ	तानुव	र्तनो नितरामुद्धव	सम्भृता	दरः ।
6 ಮಾತ್ರೆಗಳು	ರಗಣ	8 ಮಾತ್ರೆಗಳು	ರಗಣ	ಲ ಗು
∪ ∪ — ∪ ∪	— ∪ —	∪ — ∪ ∪ — — ∪ ∪	— ∪ —	∪ —
कुरुते यदु	वंशम	ण्डनं स हि कृष्णप्रभु	रादिमो	यथा ॥

2. ಅಕ್ಷರಛಂದಸ್ಸು

1. ಅನುಷ್ಟುಪ್ :

ಲಕ್ಷಣ ಹೀಗಿದೆ -

श्लोके षष्ठं गुरु ज्ञेयं सर्वत्र लघु पञ्चमम् ।
द्विचतुष्पादयोर्ह्रस्वं सप्तमं दीर्घमन्ययोः ।।

ಶ್ಲೋಕದ ಎಲ್ಲಾ ಪಾದಗಳಲ್ಲೂ ಆರನೆಯ ಅಕ್ಷರ ಗುರುವೆಂದೂ, ಐದನೆಯ ಅಕ್ಷರ ಲಘುವೆಂದೂ ತಿಳಿಯಬೇಕು. ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಏಳನೆಯ ಅಕ್ಷರ ಹ್ರಸ್ವವಾಗಿಯೂ, ಉಳಿದ ಒಂದನೆಯ ಮತ್ತು ಮೂರನೆಯ ಪಾದಗಗಳಲ್ಲಿ ಏಳನೆಯ ಅಕ್ಷರವು ದೀರ್ಘ-ವಾಗಿಯೂ ಇದ್ದರೆ ಅದು ಅನುಷ್ಟುಪ್ ಎನಿಸುತ್ತದೆ.

ಶ್ಲೋಕಗಳು : ಮಂಗಳ ಶ್ಲೋಕ, 43, 48, 49, 50.

2. ಇಂದ್ರವಜ್ರಾ :

ಹನ್ನೊಂದು ಅಕ್ಷರದ ಪಾದವುಳ್ಳ ತ್ರಿಷ್ಟುಪ್ ಛಂದಸ್ಸಿನಲ್ಲಿ ಇಪ್ಪತ್ತೊಂದು ಪ್ರಭೇದಗಳಿವೆ. ಅವುಗಳಲ್ಲಿ ಇಂದ್ರವಜ್ರಾ ವೃತ್ತವೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

स्यादिन्द्रवज्रा यदि तौ जगौ गः ।।

ಕ್ರಮವಾಗಿ ಎರಡು ತಗಣ, ಒಂದು ಜಗಣ ಮತ್ತು ಎರಡು ಗುರುಗಳು ಯಾವುದರಲ್ಲಿರುತ್ತದೋ ಅದನ್ನು ಇಂದ್ರವಜ್ರಾ ಎಂದು ಕರೆಯುತ್ತಾರೆ.

ಶ್ಲೋಕಗಳು : 16, 35, 41.

3. ಉಪಜಾತಿ :

ಹನ್ನೊಂದು ಅಕ್ಷರದ ಪಾದವುಳ್ಳ, ತ್ರಿಷ್ಟುಪ್ ಛಂದಸ್ಸು ಕಾವ್ಯಗಳಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ಇದರಲ್ಲಿ ಇಪ್ಪತ್ತೊಂದು ಪ್ರಭೇದಗಳಿವೆ. ಅವುಗಳಲ್ಲಿ ಉಪಜಾತಿಯೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

अनन्तरोदीरितलक्ष्मभाजौ पादौ यदीयावुपजातयस्ताः ।।

ಇಂದ್ರವಜ್ರಾ ಮತ್ತು ಉಪೇಂದ್ರವಜ್ರಾ ವೃತ್ತಗಳ ಲಕ್ಷಣವನ್ನು ಹೊಂದಿದ ಯಾವ ವೃತ್ತಗಳ ಪಾದಗಳಿರುತ್ತವೆಯೋ ಅವುಗಳು ಉಪಜಾತಿ ವೃತ್ತವಾಗುತ್ತದೆ.

ಶ್ಲೋಕಗಳು : 5, 6, 17, 30, 33, 44.

4. ಪೃಥ್ವೀ :

ಒಂದೊಂದು ಪಾದದಲ್ಲಿಯೂ ಹದಿನೇಳು ಅಕ್ಷರಗಳುಳ್ಳ, ಅತ್ಯಷ್ಟಿ ಛಂದಸ್ಸಿನಲ್ಲಿ ಒಟ್ಟು ಏಳು ಪ್ರಭೇದಗಳಿವೆ. ಅವುಗಳಲ್ಲಿ ಪೃಥ್ವೀ ವೃತ್ತವೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

जसौ जसयला वसुग्रहयतिश्च पृथ्वी गुरुः ।।

ಒಂದೊಂದು ಪಾದದಲ್ಲಿಯೂ ಜಗಣ, ಸಗಣ, ಜಗಣ, ಸಗಣ, ಯಗಣ, ಲಘು ಗುರು ಕ್ರಮವಾಗಿದ್ದು 8 (ವಸು) ಮತ್ತು 9 (ಗ್ರಹ) ವರ್ಣಗಳಲ್ಲಿ ಯತಿ ಬಂದರೆ ಅದಕ್ಕೆ ಪೃಥ್ವೀ ವೃತ್ತವೆಂದು ಹೆಸರು.

ಶ್ಲೋಕಗಳು : 31, 46.

5. ಮಂಜುಭಾಷಿಣೀ :

ಹದಿಮೂರು ಅಕ್ಷರದ ಪಾದವುಳ್ಳ ಅತಿಜಗತಿಯಲ್ಲಿ ಒಂಬತ್ತು ಪ್ರಭೇದಗಳಿವೆ. ಅವುಗಳಲ್ಲಿ ಮಂಜುಭಾಷಿಣೀ ವೃತ್ತವೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

सजसा जगौ भवति मञ्जुभाषिणी ।।

ಪ್ರತಿಪಾದದಲ್ಲಿ ಕ್ರಮವಾಗಿ ಸಗಣ, ಜಗಣ, ಸಗಣ, ಜಗಣ, ಗುರುಗಳು ಕ್ರಮವಾಗಿ ಬಂದರೆ ಅದಕ್ಕೆ ಮಂಜುಭಾಷಿಣೀ ವೃತ್ತವೆಂದು ಹೆಸರು.

ಶ್ಲೋಕ : 32.

6. ಮಾಲಭಾರಿಣೀ :

ಇದು ಅರ್ಧಸಮಚತುಷ್ಪದೀ. ಇದರ ಲಕ್ಷಣ ಹೀಗಿದೆ -

ससजाः प्रथमे पदे गुरू चेत् ।

सभरा येन च मालभारिणी स्यात् ।

ಶ್ಲೋಕದ ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ಸಗಣ, ಸಗಣ, ಜಗಣ ಮತ್ತು ಎರಡು ಗುರುಗಳು ಹಾಗೂ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಸಗಣ, ಭಗಣ, ರಗಣ, ಯಗಣಗಳು ಬಂದರೆ ಅದು ಮಾಲಭಾರಿಣೀ ವೃತ್ತ ಎನಿಸುತ್ತದೆ.

ಶ್ಲೋಕ : 18.

7. ವಸಂತತಿಲಕಾ :

ಪ್ರತಿ ಪಾದದಲ್ಲಿ ಹದಿನಾಲ್ಕು ವರ್ಣಗಳುಳ್ಳ ಶಕ್ವರಿಯಲ್ಲಿ ಒಟ್ಟು ಹತ್ತು ಪ್ರಭೇದಗಳಿವೆ. ಅವುಗಳಲ್ಲಿ ವಸಂತತಿಲಕಾ ವೃತ್ತವೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

उक्ता वसन्ततिलका तभजा जगौ गः ।।

ಯಾವ ಪಾದದಲ್ಲಿ ತಗಣ, ಭಗಣ, ಎರಡು ಜಗಣ ಮತ್ತು ಕೊನೆಯಲ್ಲಿ ಎರಡು ಗುರುಗಳಿರುತ್ತವೆಯೋ ಅದು ವಸಂತತಿಲಕಾ ಎನಿಸಿಕೊಳ್ಳುತ್ತದೆ.

ಶ್ಲೋಕಗಳು : 8, 9, 12, 14, 15, 20, 21, 23, 25, 26, 27, 36, 40.

8. ಶಾರ್ದೂಲವಿಕ್ರೀಡಿತ :

ಒಂದು ಪಾದದಲ್ಲಿ ಹತ್ತೊಂಬತ್ತು ಅಕ್ಷರದ ಅತಿಧೃತಿ ಛಂದಸ್ಸಿನಲ್ಲಿ ಒಟ್ಟು ನಾಲ್ಕು ಪ್ರಭೇದಗಳಿವೆ. ಅವುಗಳಲ್ಲಿ ಶಾರ್ದೂಲವಿಕ್ರೀಡಿತವೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

सूर्याश्वैर्मसजस्ततः सगुरवः शार्दूलविक्रीडितम् ।।

ಪ್ರತಿಪಾದದಲ್ಲಿ ಮಗಣ, ಸಗಣ, ಜಗಣ, ಸಗಣ ಮತ್ತು ಎರಡು ತಗಣ ಮತ್ತು ಕೊನೆಯಲ್ಲಿ ಒಂದು ಗುರುವು ಕ್ರಮವಾಗಿ ಬಂದು 12 (ಸೂರ್ಯ)ನೆಯ ಮತ್ತು 7 (ಅಶ್ವ)ನೆಯ ಅಕ್ಷರಗಳಲ್ಲಿ ಯತಿನಿಯಮ ಬಂದರೆ ಅದು ಶಾರ್ದೂಲವಿಕ್ರೀಡಿತ ವೃತ್ತ ಆಗುತ್ತದೆ.

ಶ್ಲೋಕಗಳು : 1, 3, 4, 11, 22, 24, 28, 29, 39, 47.

9. ಶಿಖರಿಣೀ :

ಒಂದು ಪಾದದಲ್ಲಿ ಹದಿನೇಳು ಅಕ್ಷರಗಳುಳ್ಳ ಅತ್ಯಷ್ಟಿ ಛಂದಸ್ಸಿನಲ್ಲಿ ಒಟ್ಟು ಏಳು ಪ್ರಭೇದಗಳಿವೆ. ಅವುಗಳಲ್ಲಿ ಶಿಖರಿಣಿಯೂ ಒಂದು. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

रसै रुद्रैश्छिन्ना यमनसभला गः शिखरिणी ।।

ಪ್ರತಿಪಾದದಲ್ಲಿ ಯಗಣ, ಮಗಣ, ನಗಣ, ಸಗಣ, ಭಗಣ, ಲಘು ಗುರುಗಳು ಬಂದು 6 (ರಸ)ನೆಯ ಮತ್ತು 11 (ರುದ್ರ)ನೆಯ ವರ್ಣಗಳಲ್ಲಿ ಯತಿ ಇದ್ದರೆ ಅದಕ್ಕೆ ಶಿಖರಿಣೀ ವೃತ್ತವೆಂದು ಹೆಸರು.

ಶ್ಲೋಕಗಳು : 7, 10, 19, 34.

10. ಸ್ರಗ್ಧರಾ :

ಇಪ್ಪತ್ತೊಂದನೆಯ ಪ್ರಕೃತಿ ಛಂದಸ್ಸಿನಲ್ಲಿ ಇರುವ ಒಂದೇ ವೃತ್ತ. ವೃತ್ತರತ್ನಾಕರದ ಪ್ರಕಾರ ಲಕ್ಷಣ ಹೀಗಿದೆ -

म्रभ्नैर्यानां त्रयेण त्रिमुनियतियुता स्रग्धरा कीर्तितेयम् ।

ಪ್ರತಿಪಾದದಲ್ಲಿ ಮಗಣ, ರಗಣ, ಭಗಣ, ನಗಣ, ಮೂರು ಯಗಣಗಳಿಂದ ಕೂಡಿದ್ದು ಮೂರು (ಮುನಿ) ಏಳರಲ್ಲಿ ಅಂದರೆ ಏಳು ಏಳು ವರ್ಣಗಳಾದೊಡನೆ ಯತಿ ಬಂದರೆ ಅದು ಸ್ರಗ್ಧರಾ ಎಂಬ ವೃತ್ತವಾಗುತ್ತದೆ.

ಶ್ಲೋಕಗಳು : ಪ್ರಾರಂಭಿಕ ಶ್ಲೋಕ, 13

ಅನುಬಂಧ-2

ಶ್ರೀಕೃಷ್ಣರಾಜಗುಣಾಲೋಕ ಗ್ರಂಥದ ಶ್ಲೋಕಗಳಲ್ಲಿ ಉಪಯುಕ್ತವಾಗಿರುವ ಅಲಂಕಾರಗಳ ಪಟ್ಟಿ

1. **ಅತಿಶಯೋಕ್ತಿ ಅಲಂಕಾರ**

   ಶ್ಲೋಕಗಳು - 4, 5

2. **ಅಪಹ್ನುತಿ ಅಲಂಕಾರ**

   ಶ್ಲೋಕ - 14

3. **ಅರ್ಥಾಂತರನ್ಯಾಸಾಲಂಕಾರ**

   ಶ್ಲೋಕಗಳು - 16, 21, 22, 40

4. **ಉತ್ಪ್ರೇಕ್ಷಾಲಂಕಾರ**

   ಶ್ಲೋಕಗಳು - 5, 37, 42

5. **ಉದಾತ್ತಾಲಂಕಾರ**

   ಶ್ಲೋಕ - 26

6. **ಉಪಮಾಲಂಕಾರ**

   ಶ್ಲೋಕಗಳು - 2, 5

7. **ಕಾವ್ಯಲಿಂಗಾಲಂಕಾರ**

   ಶ್ಲೋಕಗಳು - 5, 7, 8, 9, 29

8. ಕಾವ್ಯಾರ್ಥಾಪತ್ತಿ ಅಲಂಕಾರ

ಶ್ಲೋಕ - 35

9. ಕೈತವಾಪಹ್ನುತಿ ಅಲಂಕಾರ

ಶ್ಲೋಕ - 36

10. ತುಲ್ಯಯೋಗಿತಾಲಂಕಾರ

ಶ್ಲೋಕ - 12

11. ನಿರುಕ್ತಿ ಅಲಂಕಾರ

ಶ್ಲೋಕ - 15

12. ಪರಿಕರಾಲಂಕಾರ

ಶ್ಲೋಕ - 34

13. ಪರ್ಯಾಯೋಕ್ತಿ ಅಲಂಕಾರ

ಶ್ಲೋಕಗಳು - 11, 25, 28

14. ಪ್ರಸ್ತುತಾಂಕುರಾಲಂಕಾರ

ಶ್ಲೋಕ - 31

15. ಭ್ರಾಂತಿಮದಲಂಕಾರ

ಶ್ಲೋಕಗಳು - 19, 20

16. ರೂಪಕಾಲಂಕಾರ

ಶ್ಲೋಕಗಳು - 21, 47

17. ವಿಭಾವನಾಲಂಕಾರ

ಶ್ಲೋಕಗಳು - 13, 23, 25, 32, 44

18. ವಿರೋಧಾಭಾಸಾಲಂಕಾರ

ಶ್ಲೋಕಗಳು - 3, 42, 43

19. ವ್ಯತಿರೇಕಾಲಂಕಾರ

ಶ್ಲೋಕಗಳು - 3, 9, 10, 14, 17, 30, 33, 41, 45

20. ವ್ಯಾಘಾತಾಲಂಕಾರ

ಶ್ಲೋಕ - 6

21. ಶ್ಲೇಷಾಲಂಕಾರ

ಶ್ಲೋಕಗಳು - 1, 8, 17, 24, 33, 47

22. ಸಂದೇಹಾಲಂಕಾರ

ಶ್ಲೋಕಗಳು - 23, 26

23. ಸಂಕರಾಲಂಕಾರ

ಶ್ಲೋಕ - 47

24. ಹೇತೂತ್ಪ್ರೇಕ್ಷಾಲಂಕಾರ

ಶ್ಲೋಕಗಳು - 18, 20, 27, 28, 36, 39

ಅಧೀತಗ್ರಂಥಗಳು

1. ಮುಮ್ಮಡಿ ಶ್ರೀಕೃಷ್ಣರಾಜ ಮಹೀಪಾಲ ವಂಶರತ್ನಾಕರ
ಎ.ಎಸ್. ನಿರಂಜನರಾಜ ಅರಸು
ನಂ. 1, 10ನೆಯ ಮುಖ್ಯ ರಸ್ತೆ, ಸರಸ್ವತಿಪುರಂ,
ಮೈಸೂರು, 1993

2. ಕುವಲಯಾನಂದ (ಅಪ್ಪಯ್ಯದೀಕ್ಷಿತನ ಸಂಸ್ಕೃತಗ್ರಂಥದ ಅನುವಾದ)
ಅನು : ಡಾ. ಟಿ.ಜಿ. ಸಿದ್ಧಪ್ಪಾರಾಧ್ಯ,
ಸಂಸ್ಕೃತಾಧ್ಯಾಪಕ, ಮಾನಸಗಂಗೋತ್ರಿ,
ನಂ. 606, ನೂರಡಿ ರಸ್ತೆ, ಶಂಕರಮಠದ ಬೀದಿ,
ಚಾಮರಾಜ ಮೊಹಲ್ಲ, ಮೈಸೂರು, 1987

3. ಕುವಲಯಾನಂದಃ (ಚಂದ್ರಾಲೋಕ ಮತ್ತು ಅಲಂಕಾರಚಂದ್ರಿಕಾ
ವ್ಯಾಖ್ಯಾಸಹಿತ) (ಸಂಸ್ಕೃತ) ಅಪ್ಪಯ್ಯದೀಕ್ಷಿತ,
ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ, 1917


4. ಚಂದ್ರಕಲಾ ವೃತ್ತರತ್ನಾಕರ (ಕನ್ನಡ ವ್ಯಾಖ್ಯಾನ)
ಅನು : ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟ,
ಪ್ರಕಾಶಕರು : ವಿದ್ವಾನ್ ಕೆ. ಲಕ್ಷ್ಮೀನೃಸಿಂಹಶಾಸ್ತ್ರಿ,
ಶಿವಸ್ವಾಮಿ ಭವನಂ, ವಾಣೀವಿಲಾಸ ರೋಡ್,
ಮೈಸೂರು, 1957

5. ವೃತ್ತರತ್ನಾಕರಮ್ (ಸಂಸ್ಕೃತ)
ಕೇದಾರಭಟ್ಟ,
ಮೆಹರ್‌ಚಂದ್ರ ಲಕ್ಷ್ಮಣದಾಸ್,
ಸಂಸ್ಕೃತ-ಹಿಂದಿ ಪುಸ್ತಕ ಮಾರಾಟಗಾರರು,
ಲಾಹೋರ್, 1992

6. ಅಭಿಜ್ಞಾನ - ಡಾ. ಕೆ.ಕೃಷ್ಣಮೂರ್ತಿ ಅಭಿನಂದನ ಗ್ರಂಥ
ಸಂ : ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಮತ್ತು ಇತರರು
ಡಾ. ಕೆ.ಕೃಷ್ಣಮೂರ್ತಿ ಅಭಿನಂದನ ಸಮಿತಿ,
ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, 1995

7. ಜಯದೇವನ ಚಂದ್ರಾಲೋಕ ಮತ್ತು ಕೇದಾರಭಟ್ಟನ ವೃತ್ತರತ್ನಾಕರ
ಅನು : ವಿದ್ವಾನ್ ಬಿ. ರಾಜಶೇಖರಯ್ಯ,
ಪ್ರಕಾಶಕರು : ವಿದ್ವಾನ್ ಎಂ. ಮಲ್ಲಣ್ಣ,
ಶ್ರೀ ಮಲ್ಲಿಕಾರ್ಜುನ ಗ್ರಂಥ ಪ್ರಕಾಶನ,
415, 1ನೇ ಕ್ರಾಸ್, ವಿದ್ಯಾನಗರ, ಮೈಸೂರು
ಮತ್ತು
ವಿದ್ವಾನ್ ಬಿ.ರಾಜಶೇಖರಯ್ಯ ಸನ್ಮಾನ ಸಮಿತಿ,
ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು,
ಮೈಸೂರು, 2001

W.O. - 500 copies - 5-10-2020



ಸಾರಾಂಗ

ೖಸೂರು ವಿಶ್ವವಿದ್ಯಾನಿಲಯ

ೖಸೂರು

ಶ್ರೀಮತ್ಕೃಷ್ಣರಾಜ ಗುಣಾಲೋಕ

230/-

ISBN-978-93-5407-332-8